ಕಲ್ಯಾಣ ಕಿರಣ

ಡಿಸೆಂಬರ್ 1993



ಕಲ್ಯಾಣ ಕಿರಣ

ಮಾಸ ಪತ್ರಿಕೆ, ಡಿಸೆಂಬರ್-1993, ಬಿಡಿ ಸಂಚಿಕೆ 3-00 ರೂ.

ಸಂಪುಟ : 22 ಸಂಚಿಕೆ : 7 ಬಸವ ಶಕೆ : 888,
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಕಿರಣಗನ್ನಡಿ

ಮುಖಪುಟ : ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿ.

ಹೊದ್ದಿಕೆಯ 4 ನೇ ಪುಟ : ಬಸವ ಧರ್ಮದ ಮಹಾಜಗದ್ಗುರು ಪೀಠ.

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10. ದೂರವಾಣಿ : 3325335.

KALYANA KIRANA - monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.
Phone : 8437234

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

1994 ನೆಯ ಜನವರಿ
12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 1988 ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರುವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ (ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು ಏಳನೆಯ ಶರಣ ಮೇಳವು 1994 ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

... ಶರಣರ ಬರವೆಮಗೆ ಪ್ರಾಣಜೀವಾಳ ...

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2 ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ : 838

ಕಾರ್ಯಕ್ರಮದ ಸ್ಥೂಲ ರೂಪುರೇಷೆ

ಬುಧವಾರ ದಿ. 12–1–1994 ರಂದು

1. ಬೆಳಿಗ್ಗೆ 10 ಗಂಟೆಗೆ ಬಸವ ಧ್ವಜಾರೋಹಣದೊಡನೆ ಮಹಾಮನೆ ಮಹಾಮಠದ ಆವರಣದಲ್ಲಿ ಕಾರ್ಯಕ್ರಮ ಆರಂಭ. ಬಸವ ಧರ್ಮ ಸಂಸತ್ ಸದಸ್ಯರ ಸಮಾವೇಶ, ಕೆಲವು ಮಹತ್ವ ಪೂರ್ಣ ಸಾಮಾಜಿಕ-ಧಾರ್ಮಿಕ-ರಾಷ್ಟ್ರೀಯ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆಯಲಿದೆ.
2. ಮಹಾಜಗದ್ಗುರು ಪೀಠಾರೋಹಣದ ವಾರ್ಷಿಕೋತ್ಸವ - ಸಂಜೆ 5 ಗಂಟೆಗೆ. ದಿ. 13-1-1994 ರಂದು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರಥಮ ಪೀಠಾಧಿಕಾರಿಯಾಗಿ ಗದ್ದುಗೆಯನ್ನೇರಿರುವರಷ್ಟೇ. ಈ ಪೀಠಾರೋಹಣದ ಎರಡನೆಯ ವಾರ್ಷಿಕೋತ್ಸವವು ಸಂಜೆ 5 ಗಂಟೆಗೆ ಪ್ರಾರಂಭವಾಗುವುದು. ಪೂಜ್ಯ ಮಹಾಜಗದ್ಗುರುಗಳು ಎರಡು ವರ್ಷದ ಸಾಧನೆಯನ್ನು ಕುರಿತು ವಿವರಿಸಿ, ಮುಂದಿನ ಯೋಜನೆ ಕುರಿತು ಮಾತನಾಡುವರು. ಬಸವ ತತ್ತ್ವಾನುಯಾಯಿಗಳಿಗೆ ಅಮೋಘವಾದ ಸಂದೇಶವನ್ನು ನೀಡಿ ಮಾರ್ಗದರ್ಶನ ಮಾಡುವರಲ್ಲದೆ, ಬಸವ ಧರ್ಮ ಪೀಠಕ್ಕೆ ಈ ವರ್ಷದ ಅವಧಿಯಲ್ಲಿ 5000 ರೂ. ಗಳ ಮೇಲೆ ಧನ ಸಹಾಯ ಮಾಡಿದವರಿಗೆ ಸನ್ಮಾನವನ್ನು ಮಾಡುವರು.

ಗುರುವಾರ 13–1–1994, ಬಸವ ವನದ ಸಭಾಮಂಟಪದಲ್ಲಿ

1. ಬೆಳಿಗ್ಗೆ 9-45 ಕ್ಕೆ ಬಸವ ಧ್ವಜಾರೋಹಣ
2. ಬೆಳಿಗ್ಗೆ 10–00 ಗಂಟೆಗೆ ಶರಣ ಮೇಳ ಉದ್ಘಾಟನೆ
3. ಮಧ್ಯಾಹ್ನ 5 ರಿಂದ 8 ರ ವರೆಗೆ ರಾಷ್ಟ್ರೀಯ ಭಾವೈಕ್ಯತಾಗೋಷ್ಠಿ ಮತ್ತು ಮಕ್ಕಳಗೋಷ್ಠಿ.
4. ರಾತ್ರಿ 9 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ

ಶುಕ್ರವಾರ 14–1–1994 ರಂದು ಬಸವ ಕ್ರಾಂತಿ ದಿನಾಚರಣೆ ಮತ್ತು ಶಿವಯೋಗಿ ಸಿದ್ಧರಾಮೇಶ್ವರರ ಜಯಂತಿ ಆಚರಣೆ

1. ಬೆಳಿಗ್ಗೆ 8-30 ಕ್ಕೆ ಮಹಾಮನೆ ಮಹಾಮಠದಲ್ಲಿರುವ ಶ್ರೀ ಬಸವೇಶ್ವರ ಧ್ಯಾನ ಮಂಟಪದಲ್ಲಿ ವಿಶೇಷ ಪೂಜೆ.
2. ಮಹಾಜಗದ್ಗುರುಗಳಿಂದ **"ಬಸವ ಜ್ಯೋತಿ ಉದ್ದೀಪನ"** ದೊಡನೆ ಮಂಗಲಾಚರಣೆ.
3. ಧ್ವಜ ವಂದನೆ ಮತ್ತು ಮಹಾಮನೆಯಿಂದ ಸಭಾಮಂಟಪದವರೆಗೆ ಪಾದಯಾತ್ರೆ, ಸಾಮೂಹಿಕ ಪಥ ಸಂಚಲನದೊಡನೆ ಆಗಮನ, ಷಟ್ಕೋನ ಬಸವ ಧ್ವಜ ಪ್ರತಿಷ್ಠಾಪನೆ.
4. ಬೆಳಿಗ್ಗೆ 10 ಗಂಟೆಗೆ ಸಮುದಾಯ ಪ್ರಾರ್ಥನೆಯ ಉದ್ಘಾಟನೆ ಮತ್ತು ಸಮುದಾಯ ಪ್ರಾರ್ಥನೆ, ನಂತರ ಎಳ್ಳು-ಬೆಲ್ಲಗಳ ಪರಸ್ಪರ ವಿತರಣೆ, ಪ್ರತಿಜ್ಞಾವಿಧಿ.
5. ಮಧ್ಯಾಹ್ನ 5 ರಿಂದ 9 ರ ವರೆಗೆ ತತ್ತ್ವ ಚಿಂತನಗೋಷ್ಠಿಯಲ್ಲಿ ಉಪನ್ಯಾಸ.
6. ರಾತ್ರಿ 9 ರಿಂದ ಸಾಂಸ್ಕೃತಿಕ ಕಾರ್ಯಕ್ರಮ.

ಶನಿವಾರ ದಿ. 15-1-1994 ರಂದು

1. ಸುಪ್ರಭಾತದ 6 ರಿಂದ ಶ್ರೀ ಬಸವೇಶ್ವರ ಪೂಜೆ.
2. ಬೆಳಿಗ್ಗೆ 7 ರಿಂದ ಸಾಮೂಹಿಕ ಇಷ್ಟಲಿಂಗ ಪೂಜೆ.
3. ಬೆಳಿಗ್ಗೆ 11 ರಿಂದ 2 ರ ವರೆಗೆ ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನ ಮತ್ತು ಸಮಾರೋಪ, ಶರಣರಿಗೆ ಬೀಳ್ಕೊಡುಗೆ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂಪ್ರೇರಣೆಯ ಕೊಡುಗೆ ನೀಡುವುದು ಅವಶ್ಯವಿದೆ.

1. ಮಹಾಪೋಷಕರು 5000 ರೂ. ಮತ್ತು ಮೇಲೆ ಕೊಟ್ಟವರು
2. ದಾನಿಗಳು 1000 ರೂ. ಮತ್ತು ಮೇಲೆ ಕೊಟ್ಟವರು
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ 125 ರೂ. (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100 ರೂ.

ವಿ. ಸೂ : ಶರಣ ಮೇಳ ಉತ್ಸವ ಸಮಿತಿಯಿಂದ ನಿಯೋಜಿಸಲ್ಪಟ್ಟ ಪ್ರತಿನಿಧಿಗಳ ಬಳಿ ಹಣ ಕೊಟ್ಟವರು, ಶರಣ ಮೇಳಕ್ಕೆ ಬರುವಾಗ ತಪ್ಪದೆ ಹಣಕೊಟ್ಟ ಪಾವತಿ ತಂದು, ಕೌಂಟರಿನಲ್ಲಿ ತೋರಿಸಿ ನಿಗದಿಪಡಿಸಿದ ಸೌಲಭ್ಯ ಪಡೆಯಬೇಕು.

ಜನರು ತಮ್ಮ ಕೆಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ಹಿಂದಿನ ಪುಟದಲ್ಲಿದೆ. State Bank of India, Koodala-Sangama ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ. ಕೂಡಲ ಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ ಶರಣರ ಭಾವಚಿತ್ರ, ಪ್ರವಚನ, ಭಕ್ತಿಗೀತೆಗಳ ಆಡಿಯೋ ಮತ್ತು ವೀಡಿಯೋ ಕೆಸೆಟ್ಟುಗಳನ್ನು ಮಾರಾಟಕ್ಕೆ ಇಡಲು ಏರ್ಪಾಡು ಮಾಡಿದೆ.

ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆ
ಬಸವ ಧರ್ಮ ಪೀಠ ಟ್ರಸ್ಟ್ (ರಿ.)

ಮಹಾಮನೆ ಮಹಾಮಠ, ಕೂಡಲ ಸಂಗಮ – 587115
ತಾ|| ಹುನಗುಂದ, ಜಿಲ್ಲೆ|| ಬಿಜಾಪುರ.

ಬಸವ ಪೀಠವು ಎದ್ದು । ಒಸೆದು ನಾಣ್ಯವು ಹುಟ್ಟಿ
ಬಸವನ ಮುಂದ್ರೆ ಮೆರೆದಾವು । ಧರೆಯವಗೆ
ವಶವಾಗದಿಹುದೆ ಸರ್ವಜ್ಞ ?

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅವತರಿಸಿ ಬಂದ ಮಾನವತಾವಾದಿ, ಮಹಾಗುರು, ಮಂತ್ರಪುರುಷ, ಸಮತಾವಾದಿ. ಮರ್ತ್ಯ-ಲೋಕದ ಈ ಕರ್ತನ ಕಮ್ಮಟವನ್ನು ಸ್ವಾರ್ಥಿಯಾದ ಮಾನವ ಮತ್ತು ಪಟ್ಟಭದ್ರ ಹಿತಾಸಕ್ತರು ವರ್ಣ, ಜಾತಿ, ವರ್ಗ, ಅಂತಸ್ತು ಭೇದಗಳಿಂದ ಅಂದಗೆಡಿಸಿದ್ದನ್ನು ಕಂಡು, ಮನನೊಂದು ಕರ್ತನ ಮೇಲಿನ ಅನನ್ಯವಾದ ಭಕ್ತಿಯಿಂದಲೂ, ಸೃಷ್ಟಿಯ ಬಗೆಗಿದ್ದ ಅಭಿಮಾನದಿಂದಲೂ, ಮಾನವ ಕುಲದ ಮೇಲಿನ ಉತ್ಕಟವಾದ ಪ್ರೀತಿ-ಯಿಂದಲೂ ಬಸವಣ್ಣನವರು ಸುಧಾರಣೆಯನ್ನು ಕೈಗೊಂಡರು. ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿದರು. ಧರ್ಮವೇ ಸಾಧನ ಮತ್ತು ವಿಶ್ವಕಲ್ಯಾಣವೇ ಗುರಿ ಎಂದು ಭಾವಿಸಿದ ಅವರು ಇಷ್ಟಲಿಂಗವೆಂಬ ಕುರುಹನ್ನು, ಲಾಂಛನವನ್ನು ಯಾವುದೇ ಭೇದವಿಲ್ಲದೆ ಎಲ್ಲರಿಗೂ ಕೊಡುವಂತಹ ಧಾರ್ಮಿಕ ಸಮಾನತೆ-ಸ್ವಾತಂತ್ರ್ಯಗಳನ್ನು ಘೋಷಿಸಿದರು. ಇಷ್ಟಲಿಂಗವೆಂಬ, ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಭಾವಿಸುವ ಶ್ರೇಷ್ಠ ಲಾಂಛನವನ್ನು ಕಂಡುಹಿಡಿದು ಕೊಟ್ಟು "**ಲಿಂಗವಂತ ಧರ್ಮ**"ದ ಆದ್ಯ-ರಾದರು. ಅವರೆಗೂ ಜಗತ್ತು ಕಂಡರಿಯದ ಕೇಳರಿಯದ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸಿದರು. ಧರ್ಮಶ್ರೀಯು ಜನಸಾಮಾನ್ಯರ ಮನೆ-ಮನಗಳನ್ನು ಪ್ರವೇಶಿಸುವಂತೆ ವಚನ ವಾಙ್ಮಯವನ್ನು ಕೊಟ್ಟರಲ್ಲದೆ, ಅನುಭವ ಮಂಟಪವೆಂಬ ಮಾದರಿ ಸಂಸ್ಥೆಯ ಮೂಲಕ ಬಯಸಿ ಬಂದವರಿಗೆಲ್ಲ ದೀಕ್ಷಾ ಸಂಸ್ಕಾರ, ಧಾರ್ಮಿಕ ತರಬೇತಿ ನೀಡಿದರು; ಶತಶತಮಾನಗಳ ಕಾಲದಿಂದಲೂ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಸಂಖ್ಯಾತರು ಬಸವ ಧರ್ಮದ ಪಾವನ ಜಲದಲ್ಲಿ ಮಿಂದು ಪುನೀತರಾದರು. ವಿಶ್ವ ಸಂಸ್ಥೆಯು ಸಮಸ್ತ ಮಾನವ ಕುಲಕೋಟಿಯ ಸಮಸ್ಯೆಗಳನ್ನು ಕುರಿತು ಚಿಂತನಗೈಯುವಂತೆ ಅನುಭವ ಮಂಟಪವು ಮಾನವ ಸಮಾಜದ ಸಮಸ್ಯೆಗಳನ್ನು ಚಿಂತಿಸಿತಲ್ಲದೆ ಉತ್ತಮ ಪರಿಹಾರ ನೀಡಿತು. ಜಗತ್ತಿನ ಧಾರ್ಮಿಕ ಇತಿಹಾಸದಲ್ಲೇ ಅಪೂರ್ವವೆನಿಸುವ ಶರಣ ಸಂದೋಹ ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣದಲ್ಲಿ ವಿಜೃಂಭಿಸಿತು. ವಿಶ್ವಗುರು ಬಸವಣ್ಣನವರ ಉದಾತ್ತ ಉದ್ದೇಶದ ಕಾರ್ಯಾ-

---

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಅವತರಿಸಿದ ನಮ್ಮ ಬಸವಣ್ಣ – ಅಲ್ಲಮಪ್ರಭು

ಚರಣೆಗೆ ಹೆಗಲೆಣೆಯಾಗಿ ದುಡಿಯಲು ಭಾರತದ ಮೂಲೆ ಮೂಲೆಗಳಿಂದ ಜನರು ಧಾವಿಸಿದರು. ಉದಾತ್ತ ಚಿಂತನೆ, ಉನ್ನತವಾದ ತ್ಯಾಗಗಳಿಂದ ಅಮರಾತ್ಮರಾದರು. ಇಷ್ಟೇ ಅಲ್ಲ-ವಚನ ಸಾಹಿತ್ಯ ಸಂವಿಧಾನಕ್ಕೆ ಜಾತಿವಾದಿಗಳಿಂದ ಸಂಕಷ್ಟವೆರಗಿದಾಗ ಪ್ರಾಣಾರ್ಪಣೆಗೂ ಸಿದ್ಧರಾದರು.

ಗುರು ಬಸವಣ್ಣನವರು ಯಾವುದೇ ಒಂದು ಜಾತಿ ಮತಕ್ಕೆ ಸೀಮಿತರಾದ ವ್ಯಕ್ತಿಯಲ್ಲ; ಅವರು ಒಂದು ಜಾತಿಯನ್ನು ನಿರ್ಮಿಸಲೂ ಯತ್ನಿಸಿಲ್ಲ. ಸಮಸ್ತ ಮಾನವ ಜನಾಂಗಕ್ಕೆ ದೇವರು-ಧರ್ಮ-ಪೂಜೆಯ ಹಕ್ಕನ್ನು, ಸಮಬಾಳ್ವೆಯ ಸೌಲಭ್ಯವನ್ನೂ ಒದಗಿಸಲು ಶ್ರಮಿಸಿದ ಮಹಾಮಾನವತಾವಾದಿ. ಜಾತಿ ವರ್ಣ ವರ್ಗ ಲಿಂಗ ಭೇದಗಳಿಲ್ಲದ "ಕಲ್ಯಾಣ ರಾಜ್ಯ" ನಿರ್ಮಾಣಕ್ಕೆ ವಿಶ್ವಚೇತನವನ್ನು ಚುಳುಕಾಗಿ ಮಾಡಿಕೊಂಡು ಇಷ್ಟಲಿಂಗ ರೂಪದಲ್ಲಿ ಅಂಗದ ಮೇಲೆ ಧರಿಸಿದ "ಲಿಂಗವಂತ"ರು (ದೇವ ಭಕ್ತರು) ಸ್ವಯಂ ಸೇವಕರಾಗಿ ದುಡಿಯಬೇಕು ಎಂಬುದೇ ಬಸವಣ್ಣನವರ ಆಶೋತ್ತರವಾಗಿತ್ತು. ಅನುಭವ ಮಂಟಪದ ಮಾದರಿಯಲ್ಲಿ ಧರ್ಮ ಸಂಸ್ಥೆಗಳು ಜನರನ್ನು ಸಂಘಟಿಸುವ, ಸಂಸ್ಕರಿಸುವ ಜ್ಞಾನಕೇಂದ್ರಗಳಾಗಬೇಕು ಎಂಬುದೇ ಗುರು ಬಸವಣ್ಣನವರ ಕನಸಾಗಿತ್ತು.

ಆದರೆ, ಆದುದೇನು ? ಆ ಗುರುವಿನ ಹೃದ್ಗತ ಕನಸುಗಳನ್ನು ನಂತರದ ಅನುಯಾಯಿಗಳು ನನಸು ಮಾಡಲಿಲ್ಲ. ಅವರು ನಡೆದು ತೋರಿದ ಪಥವನ್ನು ಸರಿ-ಯಾಗಿಡಲಿಲ್ಲ. ಮಹಾ ಮಾನವತಾವಾದಿಯಾದ ಬಸವ ಗುರುವು ಎಲ್ಲರನ್ನೂ ಮಾತೃ ಹೃದಯದಿಂದ ಸ್ವಾಗತಿಸಿದಂತೆ ನಂತರದವರು ಸ್ವಾಗತಿಸಲಿಲ್ಲ. ಹೀಗಾಗಿ ಸಂಪೂರ್ಣವಾಗಿ ವಿಕೃತಗೊಂಡ ಸಮಾಜವನ್ನಿಂದು ಕಾಣುತ್ತಿದ್ದೇವೆ. ಧರ್ಮಗುರು ಬಸವಣ್ಣನವರ ವಿಚಾರಕ್ಕೆ ವಿರುದ್ಧವಾದ, ವಚನ ಸಾಹಿತ್ಯ ಸಂವಿಧಾನ ಮನ್ನಿಸದ, ಶರಣ ಪಥಕ್ಕೆ ಸಲ್ಲದ ನಡೆ-ನುಡಿ, ಭೇದ-ಭ್ರಾಂತಿ, ಅಜ್ಞಾನ-ಮೌಢ್ಯತೆಗಳಿಂದ ತುಂಬಿರುವ ಅನುಯಾಯಿಗಳನ್ನೇ ಹೆಚ್ಚಾಗಿ ಕಾಣುತ್ತೇವೆ. ಇದು ಸರಿಯೆ ? ಆದ್ದರಿಂದ ಎಲ್ಲರೂ ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ, ಹಳಿ ತಪ್ಪಿದ ಈ ಸಮಾಜದ ಗಾಡಿಯನ್ನು ಹಳಿಯ ಮೇಲೆ ಕೂಡ್ರಿಸುವ ಪ್ರಾಮಾಣಿಕ ಪ್ರಯತ್ನವನ್ನಿಂದು ಮಾಡಬೇಕಾಗಿದೆ.

ಶ್ರೀ ಗುರು ಬಸವ ತಂದೆಯ ದಿವ್ಯ ಪ್ರೇರಣೆಯಂತೆ ಇದೀಗ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಬಸವ ಶಕೆ 886, ಸೋಮವಾರ 13-1-1992 ರಂದು ಸಂಸ್ಥಾಪನೆ ಮಾಡಲಾ-ಯಿತು. ಇದರ ಉದ್ದೇಶ, ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ ವರ್ಣ ವರ್ಗ ಲಿಂಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು.

ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧೀಶರಾಗಿರುವ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರು



ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕ್ಯವಾಗಿ 15-9-1931 ರಂದು ಜನಿಸಿ, ಬಿ. ಎ. ಆನರ್ಸ್ ಪದವೀಧರರಾಗಿ ಬಸವ ಗುರುವಿನ ಪ್ರೇರಣೆಯಿಂದ 25-4-1955 ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನ ದಾಸೋಹ ಮಾಡುತ್ತಿರುವ **ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು** ಅಪೂರ್ವ ವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರವಚನಗಳ ಮೂಲಕ ಮಾತ್ರವಲ್ಲ ಸಾಹಿತ್ಯ ಕೃತಿಗಳ ಮೂಲಕ ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಕಮಲ ಸಂಜಾತೆ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**ಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ, ಸ್ತ್ರೀ ಸಮಾನತಾ ತತ್ತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್, ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸಂಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾಮೂರ್ತಿ. ನಾಡಿನಾದ್ಯಂತ ಸಂಚರಿಸಿ, ಜನಮನದಲ್ಲಿ ಬಸವ ತತ್ತ್ವದ ಬೀಜಗಳನ್ನು ಬಿತ್ತಿ, 'ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು ಒತ್ತಿಹಿಂಡಿದರೆ ಭಕ್ತಿ ಎಂಬ ರಸ' ಎಂಬ ವಾತಾವರಣ ನಿರ್ಮಾಣ ಮಾಡಿ, ಬಸವ ಯುಗಕ್ಕೆ ನಾಂದಿ ಹಾಡಿದ ಜಂಗಮ ಜ್ಯೋತಿ.

ಇಂತಹ ಪೂಜ್ಯರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿನಾಂಕ 13-1-1992 ರಂದು ಏರಿದರು. ಈ ನಿಮಿತ್ತ ದಿ. 12-1-1994 ರಂದು ಪೀಠಾರೋಹಣದ ಎರಡನೆಯ ವಾರ್ಷಿಕೋತ್ಸವವನ್ನು ಏರ್ಪಡಿಸಲಾಗಿದೆ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ ನಡೆಯುವ ಶರಣ ಮೇಳದಲ್ಲಿ ವಿಶೇಷವಾಗಿ ಒದಗಿಸಲಾಗುವ ಕೆಲವು ಸೌಲಭ್ಯಗಳು

ಮಾನ್ಯ ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ ಶರಣ ಮೇಳವು ನಡೆಯುತ್ತಲಿದೆಯಷ್ಟೆ. ತಾವು ಇದಕ್ಕೆ ಆಗಮಿಸುತ್ತೀರಿ. ನೀವು ಈ ಕ್ಷೇತ್ರದಲ್ಲಿರುವಷ್ಟು ಕಾಲ ಆರಾಮವಾಗಿ, ಸೌಖ್ಯದಿಂದ ಇರಬೇಕೆಂದು ನಮ್ಮ ಅಭಿಲಾಷೆ. ಇದಕ್ಕಾಗಿ ಕೆಲವು ಅನುಕೂಲತೆಗಳನ್ನು ಕಲ್ಪಿಸಲಾಗಿದ್ದು, ಇವನ್ನು ನಿಮ್ಮ ಗಮನಕ್ಕೆ ತರುತ್ತಲಿದ್ದೇವೆ.

1. ವಾಸ್ತವ್ಯಕ್ಕಾಗಿ ತಾತ್ಕಾಲಿಕ ತಂಗುದಾಣಗಳಾಗಿ ಶಾಮಿಯಾನಾ ಟೆಂಟ್‌ಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ವಿಚಾರಣಾ ಮತ್ತು ಸ್ವಾಗತ ಕಾರ್ಯಾಲಯದಲ್ಲಿ ಪಡೆದುಕೊಳ್ಳಿರಿ.
2. ಶುಲ್ಕ ಕೊಟ್ಟವರಿಗೆ ಮಾತ್ರವಲ್ಲದೆ, ಭಜನಾ ತಂಡದವರಿಗೆ, ಆರ್ಥಿಕ ಅನಾನುಕೂಲ ಇರುವವರಿಗೆ ಉಚಿತ ದಾಸೋಹದ ವ್ಯವಸ್ಥೆ ಇದೆ. ಆದರೆ ಶಿಸ್ತನ್ನು ಕಾಪಾಡಲು ಅವರು ತಮ್ಮ ತಂಡದಲ್ಲಿ ಎಷ್ಟು ಜನರಿದ್ದಾರೆಂದು ತಿಳಿಸಿ ಬ್ಯಾಡ್ಜ್ ಪಡೆಯಬೇಕು. ಇವರಿಗೆ ಪ್ರತ್ಯೇಕವಾದ ವ್ಯವಸ್ಥೆ ಇರುತ್ತದೆ.
3. ಈ ಮೊದಲೇ ಹಣ ಕಟ್ಟಿದವರು, ಕಳಿಸಿದವರು ರಸೀತಿ ತೋರಿಸಿ ಬ್ಯಾಡ್ಜ್ಸ್ ಪಡೆಯಬೇಕು. ಹೊಸದಾಗಿ ಬಂದವರು ಹಣ ಕಟ್ಟಿ ಬ್ಯಾಡ್ಜ್ಸ್ ಪಡೆಯಬೇಕು.
4. ದಾನಿಗಳು ಕೊಟ್ಟ ಹಣದ ನೆರವಿನಿಂದ ಅಕ್ಕ ನಾಗಲಾಂಬಿಕಾ ಅತಿಥಿ ಗೃಹ ಸಿದ್ಧವಿದ್ದು, ಕೆಲವು ದಾನಿಗಳಿಗೆ ಅವರವರ ರೂಮಿನಲ್ಲಿ ವಾಸ್ತವ್ಯಕ್ಕೆ ಅವಕಾಶ ಒದಗಿಸಲಾಗಿದೆ. ನಂತರ ಕೊಟ್ಟ ದಾನಿಗಳಿದ್ದು ಇನ್ನೂ ಕೋಣೆ ಸಿದ್ಧವಾಗಿಲ್ಲವಾದ್ದರಿಂದ, ಶಾಮಿಯಾನಾದ ಟೆಂಟ್ ನಿರ್ಮಿಸಿ, ವಾಸ್ತವ್ಯಕ್ಕೆ ಅವಕಾಶ ಮಾಡಲಾಗಿದೆ.
5. ಅವರವರ ಕೋಣೆಗಳಿಗೆ ಬೀಗ-ಬೀಗದ ಕೈ ತಂದಿದ್ದರೆ ಅವರು ಬಳಸಿಕೊಳ್ಳಬಹುದು. ಹಾಗೆ ತಂದಿಲ್ಲದಿದ್ದರೆ, ಒಂದು ಮೊತ್ತದ ಹಣವನ್ನು ಡಿಪಾಸಿಟ್ಟಾಗಿ ಇಟ್ಟು ಬೀಗವನ್ನು ಪಡೆದುಕೊಂಡು, ನಂತರ ಅದನ್ನು ವಾಪಸ್ಸು ಮಾಡಿ, ಹಣವನ್ನು ಪಡೆದುಕೊಳ್ಳಬಹುದು.
6. **ಭದ್ರತಾ ಕೋಣೆ** : ಶರಣ ಮೇಳಕ್ಕೆ ಬಂದ ಜನರು, ಶಾಮಿಯಾನಾ ಟೆಂಟ್‌ಗಳಲ್ಲಿ ತಮ್ಮ ವಸ್ತುಗಳನ್ನಿಟ್ಟು ಹೋಗಲು ಆತಂಕ ಪಡುವರು ಮತ್ತು ಜೊತೆಗೇ ಇಟ್ಟುಕೊಂಡು ಓಡಾಡಲು ಬಹಳ ಅನಾನುಕೂಲತೆಯಾಗುವುದು. ಈ ಕಾರಣಕ್ಕಾಗಿ ಭದ್ರತಾ ಕೋಣೆಯ ವ್ಯವಸ್ಥೆಯನ್ನು ಮಾಡಲಾಗಿದೆ. ಒಂದು ವಸ್ತುವಿಗೆ ಒಂದು ದಿನಕ್ಕೆ ಒಂದು ರೂ.ನಂತೆ ಶುಲ್ಕವನ್ನು ನಿಗದಿ ಮಾಡಲಾಗಿದೆ.

ವಿಶೇಷ ಸೂಚನೆ : ಭದ್ರತಾ ಕೋಣೆಯೊಳಕ್ಕೆ ಸಾಮಾನು ಕೊಟ್ಟುದ್ದನ್ನು ವಾಪಸ್ಸು ಪಡೆದು, ಪುನಃ ಕೊಡಲು ಹೋದಾಗ ಶುಲ್ಕವನ್ನು ಕೊಡಬೇಕು. ರಾತ್ರಿ ವೇಳೆಯಲ್ಲಿ ಸಾಮಾನು ಇರಿಸಿಕೊಳ್ಳಲಾಗುವುದಿಲ್ಲ. ಬೆಳಿಗ್ಗೆ ಕೊಟ್ಟ ನಂತರ ರಾತ್ರಿ ಕಾರ್ಯಕ್ರಮ ಮುಗಿಯುವವರೆಗೆ ಮಾತ್ರ ಇರಿಸಿಕೊಳ್ಳಲಾಗುವುದು.

7. ಕೂಡಲ ಸಂಗಮ ಕ್ರಾಸಿನಿಂದ ಮಹಾಮನೆಗೆ, ಸಂಗಮಕ್ಕೆ ಅಲ್ಲಿಂದ ಸಂಗಮ ಕ್ರಾಸಿಗೆ, ಕೆ.ಎಸ್.ಆರ್.ಟಿ.ಸಿ ಯವರು ವಾಹನ ಸೌಕರ್ಯ ಏರ್ಪಡಿಸಿರುತ್ತಾರೆ. ಜನರು ಇದರ ಉಪಯೋಗ ತೆಗೆದುಕೊಳ್ಳಬೇಕಾಗಿ ಸೂಚನೆ.

8. ಕೂಡಲ ಸಂಗಮದಿಂದ ತಂಗಡಗಿಗೆ ಅಂದರೆ, ನೀಲಾಂಬಿಕಾ ತಾಯಿಯ ಐಕ್ಯ ಮಂಟಪದ ದರ್ಶನಕ್ಕೆ ಹೋಗುವ ಅಪೇಕ್ಷೆಯುಳ್ಳವರು ಕೆ.ಎಸ್.ಆರ್.ಟಿ.ಸಿ ಡಿಪೋದವರನ್ನು ಮೊದಲೇ ಸಂಪರ್ಕಿಸಿರಿ.

9. ಮಹಾಮನೆ ಆವರಣದಲ್ಲಿ ಸ್ಥಳೀಯರಿಗೆ ಊಟ-ವಸತಿಗಳ ವ್ಯವಸ್ಥೆ ಮಾಡಲಾಗಿರುವುದು. ಸಭಾ ಮಂಟಪವು ಇಲ್ಲಿಂದ ಸುಮಾರು ಮುಕ್ಕಾಲು ಕಿಲೋ ಮೀಟರ್ ಇರುವುದು. ಮಹಾಮನೆಯಿಂದ ನದಿಯ ಸಂಗಮ ಸ್ಥಾನಕ್ಕೂ ಅಷ್ಟೇ ದೂರ ಆಗುವುದು. ಅಶಕ್ತರು, ವೃದ್ಧರು ಮತ್ತು ಇನ್ನಿತರರಿಗಾಗಿ ಶರಣ ಮೇಳ ಉತ್ಸವ ಸಮಿತಿಯು ಸ್ಥಳೀಯ ಸಾರಿಗೆ ವ್ಯವಸ್ಥೆ ಮಾಡುತ್ತದೆ. ಸಭಾ ಮಂಟಪದಿಂದ ಮಹಾಮನೆ ಆವರಣಕ್ಕೆ ಊಟಕ್ಕೆ ಬಂದು ಹೋಗಲು ಇದು ಸಹಾಯಕವಾಗುತ್ತದೆ.

10. **ವೈದ್ಯಕೀಯ ನೆರವು** : ಯಾತ್ರಾರ್ಥಿಗಳಿಗೆ ಏನಾದರೂ ವೈದ್ಯಕೀಯ ನೆರವು ಬೇಕಾದಲ್ಲಿಮಹಾಮನೆ ಆವರಣದಲ್ಲಿ ಇರುವ ವೈದ್ಯಕೀಯಶಿಬಿರದಲ್ಲಿ ವಿಚಾರಿಸಿರಿ.

11. **ಉಪಾಹಾರ ಗೃಹಗಳು (Canteens)** : ಕೆಲವು ಜನರ ಬೇಡಿಕೆ ಮತ್ತು ಅಗತ್ಯವನ್ನು ಗಮನಿಸಿ ಶರಣ ಮೇಳ ಉತ್ಸವ ಸಮಿತಿಯು 2 ಕ್ಯಾಂಟಿನ್ ಗಳನ್ನು ತೆರೆಯುತ್ತಿದೆ. ಕಾರ್ಯಕ್ರಮದ ಪೆಂಡಾಲ್ ಬಳಿ ಒಂದು ಮತ್ತು ಮಹಾಮನೆ ಮಹಾಮಠದ ಆವರಣದಲ್ಲಿ ಮತ್ತೊಂದು. ಇಲ್ಲಿ ಕಾಫಿ, ಟೀ, ಇಡ್ಲಿ ಮುಂತಾದವು ದೊರೆಯುತ್ತದೆ. ಅಗತ್ಯವಿದ್ದವರು ಇದರ ಅನುಕೂಲ ಪಡೆದುಕೊಳ್ಳಬೇಕೆಂದು ಕೋರುತ್ತೇವೆ.

12. ಶರಣ ಮೇಳದ ಸಮಯದಲ್ಲಿ ಧಾರ್ಮಿಕ ಸಾಹಿತ್ಯ, ಕೆಸೆಟ್ಟುಗಳು, ಲೋಹದ ಭಿತ್ತಿ ಪಟಗಳು, ಸ್ಕಾರ್ಫ್‌ಗಳು, ಪೂಜಾವಸ್ತ್ರಗಳು, ಬಸವ ಮುದ್ರೆಗಳು, ಬಸವ ನಾಣ್ಯಗಳು, ದೊರೆಯುತ್ತವೆ. ಈ ಎಲ್ಲ ವಸ್ತುಗಳು ಸಭಾ ಮಂಟಪದ ಬಳಿ ಇರುವ ಪುಸ್ತಕ ಮಳಿಗೆಯಲ್ಲಿ ಮತ್ತು ಬಸವ ಧರ್ಮ ಪೀಠದ ಮಹಾಮನೆ ಆವರಣದಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.

13. "ಬಸವ ಪ್ರಸಾದ"ವಾಗಿ ಸ್ವೀಕರಿಸಲು ಮತ್ತು ಮನೆಗೆ ಒಯ್ಯಲು ಲಾಡು-(ಬೂಂದಿ) ಉಂಡೆಗಳು ಲಭ್ಯವಿರುತ್ತದೆ, ತಾವು ಕೊಂಡುಕೊಳ್ಳಬಹುದು.

14. **ರುದ್ರಾಕ್ಷಿ ಮಾಲೆಗಳು :**
ಪೂರ್ತಿ ರುದ್ರಾಕ್ಷಿ ಮಾಲೆಗಳೂ, ವಿಶೇಷವಾಗಿ ನೇಪಾಳದಿಂದ ತರಿಸಲ್ಪಟ್ಟವು ಮಾರಾಟಕ್ಕಿವೆ. ಆಸಕ್ತರು ಖರೀದಿಸಿರಿ. ಇವು ಪುಸ್ತಕ ಮಳಿಗೆಯಲ್ಲಿ ಇರದೆ ಸಂಸ್ಥೆಯ ವಿಶೇಷ ಕಾರ್ಯಕರ್ತರ ಬಳಿ ಇರುತ್ತದೆ.

15. ಆಡಿಯೋ ಕೆಸೆಟ್ಟು ವಿಡಿಯೋ ಕೆಸೆಟ್ಟು ಮತ್ತು ಪುಸ್ತಕಗಳು ಮಾರಾಟಕ್ಕಿರುತ್ತವೆ.

16. ಶರಣರ ಭಾವಚಿತ್ರಗಳ ಪ್ರದರ್ಶನ ಇರುತ್ತದೆ. ನೋಡಿ ಹೋಗಬೇಕಾಗಿ ಕೋರಿಕೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ : ಶರಣ ಮೇಳ ಉತ್ಸವ ಸಮಿತಿ, ಮಹಾಮನೆ ಮಹಾಮಠ, ಕೂಡಲ ಸಂಗಮ-587115. ತಾ॥ ಹುನಗುಂದ, ಜಿ॥ ಬಿಜಾಪುರ.

ವಿಶ್ವ ಧರ್ಮ ಪ್ರವಚನ

ಭಾಗ - 2, ಅಧ್ಯಾಯ - 21

ಪ್ರಗತಿಪರ ಧರ್ಮ

[1993 ಸಪ್ಟಂಬರ್ ಸಂಚಿಕೆಯಿಂದ ಮುಂದುವರಿದುದು]

'ಹಿಂದೂ ಧರ್ಮ' ಎಂದೂ ನಾನು ಬಳಸುವುದಿಲ್ಲ; ನಮ್ಮ ಪ್ರತಿಪಾದನೆಯಂತೆ, ಹಿಂದು ಒಂದು ಧರ್ಮವಲ್ಲ; ಅದೊಂದು ಸಾಂಸ್ಕೃತಿಕ ಕಕ್ಷೆ ಮಾತ್ರ. ಈ ಸದ್ಯದಲ್ಲಿ ಪ್ರತಿಪಾದಿಸುತ್ತಿರುವಂತೆ ಲಿಂಗಾಯತ ಧರ್ಮವೂ ಹಿಂದೂ ಸಾಂಸ್ಕೃತಿಕ ಕಕ್ಷೆಯಲ್ಲಿ ಬರುವಂಥದೆ.

1. ಪೌರಾಣಿಕ ಧರ್ಮ ಶಾಸ್ತ್ರಾಧಾರಿತವಾಗಿದ್ದು ಅದು ಎಲ್ಲಕ್ಕೂ ಶಾಸ್ತ್ರವನ್ನೇ ಆಧಾರವಾಗಿ ಇಟ್ಟುಕೊಳ್ಳುತ್ತದೆ. ಶಾಸ್ತ್ರವು ಅನುಭವಕ್ಕೆ ವಿರುದ್ಧವಾಗಿ ಪ್ರತಿಪಾದಿಸುತ್ತಿದ್ದರೂ ಶಾಸ್ತ್ರ ವಾಕ್ಯವನ್ನೇ ಅದು ಮಾನ್ಯ ಮಾಡುತ್ತದೆ.

ಪ್ರಗತಿಪರ ಧರ್ಮವು ಅನುಭವ ಆಧಾರಿತವಾಗಿದ್ದು, ಅನುಭವದ ಒರೆಗಲ್ಲಿಗೆ ನಿಲುಕದ್ದು ಮತ್ತು ಅನುಭವ ಪ್ರಮಾಣಕ್ಕೆ ವಿರುದ್ಧವಾದುದನ್ನು ತಿರಸ್ಕರಿಸುತ್ತದೆ.

ಈಗ ಉದಾಹರಣೆಯನ್ನು ನೋಡೋಣ. ಕೇತಕಿ ಹೂವನ್ನು ಶಿವನಿಗೆ ಅರ್ಪಿಸಬಾರದು, ಏಕೆಂದರೆ ಅದು ಶಾಪಗ್ರಸ್ತ ಹೂವು ಎಂದು ಪೌರಾಣಿಕ ಧರ್ಮವು ಪ್ರತಿಪಾದಿಸಿದರೆ, 'ಯಾವ ವಸ್ತುವೂ ತ್ಯಾಜ್ಯವಲ್ಲ; ಭಕ್ತರು ಹೃದಯತುಂಬಿ ಕೊಟ್ಟುದನ್ನು ದೇವರು ಮನಃಪೂರ್ವಕವಾಗಿ ಸ್ವೀಕರಿಸುವನು' ಎನ್ನುತ್ತದೆ ಲಿಂಗವಂತ ಧರ್ಮ. ಇದನ್ನು ಸಮರ್ಥಿಸಲು ಬಸವಣ್ಣನವರು ಒಂದು ಪವಾಡವನ್ನೇ ಮಾಡಿ ತೋರಿಸಿದ್ದಾರೆ.

ವರ್ಣಾಶ್ರಮ ವ್ಯವಸ್ಥೆಯಲ್ಲಿ ಅಂತ್ಯಜನು ಧರ್ಮ ಸಂಸ್ಕಾರ ವಂಚಿತನು. ಆದರೆ ಸಂಸ್ಕಾರದಿಂದ ಯಾರೂ ಗೌರವಾರ್ಹರು ಆಗಬಲ್ಲರು ಎಂದು ಕಂಬಳಿ ನಾಗಿದೇವನ ಮೂಲಕ ಬಸವಣ್ಣನವರು ಪ್ರತಿಪಾದಿಸುತ್ತಾರೆ. ಜಾತಿ-ವೃತ್ತಿಗಳಿಗೂ ಅರ್ಹತೆಗೂ ಸಂಬಂಧವಿಲ್ಲ ಎಂದು ಈ ವಚನದಲ್ಲಿ ಪ್ರತಿಪಾದಿಸುತ್ತಾರೆ.

ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಸಾಲದೆ ಅಯ್ಯಾ ?
ಮಾಲೆಗಾರನ ಕೇಳಿ ನನೆ ಅರಳುವುದೆ ?
ಆಗಮವನಿದಿರಿಂಗೆ ತೋರುವುದು ಆಚಾರವೆ ಅಯ್ಯಾ ?

ನಮ್ಮ ಕೂಡಲ ಸಂಗನ ಕೂಡಿದ ಕೂಟದ ಕರುಳ ಕಲೆಯನು
ಇದಿರಿಂಗೆ ತೋರುವುದು ಆಚಾರವೆ ಅಯ್ಯಾ ?

—ಬ. ಷ. ವ ೮೪೮

ಜೀವನವನ್ನು-ಸಾಮಾಜಿಕ ಮೌಲ್ಯಗಳನ್ನು ಅನುಭವದ ಆಧಾರದ ಮೇಲೆ ನಿರ್ಧರಿಸಬೇಕೇ ವಿನಾ ಶಾಸ್ತ್ರ ವಾಕ್ಯಗಳ ಆಧಾರದ ಮೇಲಲ್ಲ ಎಂಬುದಕ್ಕೆ ಈ ವಚನ ಅತ್ಯಂತ ಸೂಕ್ತ ಉದಾಹರಣೆ.

ಒಬ್ಬವ್ಯಕ್ತಿ ಸಿಹಿಯನ್ನೋ ಕಹಿಯನ್ನೋ ತಿಂದಿರುತ್ತಾನೆ. ಅವನ ನಾಲಿಗೆ ಏನು ಸವಿದಿದೆ ಎಂಬುದಕ್ಕೆ ಅನುಭವಿಸಿದ ಅವನ ಮನಸ್ಸು ಸಾಕ್ಷಿ. ಬೇರೆಯವರು, 'ಇಲ್ಲ ನೀನು ತಿಂದುದು ಬೆಲ್ಲವಲ್ಲ, ಬೇವು.' ಎಂಬುದು ಎಷ್ಟು ಹಾಸ್ಯಾಸ್ಪದ! "ಶಾಸ್ತ್ರಗಳು ವರ್ಣ-ವರ್ಗ-ಜಾತಿಗಳ ವಿಂಗಡಣೆ ಮಾಡಿ ಬ್ರಾಹ್ಮಣನಷ್ಟೆ ಬ್ರಹ್ಮಜ್ಞಾನಿಯಾಗಬಲ್ಲ, ಇನ್ನಿತರರು ಆಗಲಾರರು ಎಂದು ಹೇಳಿದರೆ ಈ ಮಾತನ್ನು ನಂಬಬಹುದೆ ? ಮಾಲೆ ಗಾರನು ತನ್ನನ್ನು ಮಾಲೆಮಾಡಿಕೊಳ್ಳಲಿ ಎಂದು ಹೂವು ಅರಳುವುದಿಲ್ಲ, ಅಥವಾ ಅರಳಲೆ ? ಮಾಲೆಕಟ್ಟುವಿಯಾ ? ಎಂದು ಒಪ್ಪಿಗೆ ಕೇಳುವುದೂ ಇಲ್ಲ. ಅರಳುವುದು ಅದರ ಸಹಜ ಧರ್ಮ. ಹಾಗೆಯೇ ಅನುಭಾವಿಗಳೂ ಎಲ್ಲ ಜಾತಿ ಮತ ಪಂಥದ ವರಲ್ಲೂ ರೂಪುಗೊಳ್ಳುವರು. ಹಿಂದಿನ ಶಾಸ್ತ್ರಗಳಲ್ಲಿ ಉಲ್ಲೇಖವಿರಲಿಕ್ಕಿಲ್ಲ ; ಈಗ ಆಗಿದ್ದಾರಲ್ಲಾ ? ಅವರ ಹೆಸರನ್ನು ತತ್ತ್ವವೇತ್ತರ ಸಾಲಿನಲ್ಲಿ ಸೇರಿಸಿಕೊಳ್ಳಿರಿ.

ಹಿಂದಿನ ವೇದಾಗಮಗಳನ್ನು ತೋರಿಸಿ, ಇಂದಿನವರ ಸಾಧನೆಯನ್ನು ಅಲ್ಲಗಳೆಯ ಬೇಡಿ. ಪ್ರತ್ಯಕ್ಷವಾಗಿ ಇವರು ಪ್ರಮಾಣವಾಗಿ (proof) ನಿಂತಿರುವಾಗ ಇನ್ನಾವ ಶಾಸ್ತ್ರವು ಸಾಕ್ಷಿ ಹೇಳಬೇಕು? " ಹೀಗೆ ಶಾಸ್ತ್ರಕ್ಕಿಂತಲೂ ಅನುಭವವನ್ನೇ ಪ್ರಗತಿಪರ ಧರ್ಮವು ಆಧಾರವಾಗಿ ಇಟ್ಟುಕೊಳ್ಳುವುದು. ಇದಕ್ಕೆ ಇನ್ನೊಂದು ಮಹತ್ವದ ವಚನ ಉದಾಹರಿಸಬಹುದು.

ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳನಿಕ್ಕುವೆ.
ತರ್ಕದ ಬೆನ್ನಬಾರನೆತ್ತುವೆ ಆಗಮದ ಮೂಗಕೊಯ್ವೆ ನೋಡಯ್ಯ
ಮಹಾದಾನಿ ಕೂಡಲ ಸಂಗಮದೇವಾ,
ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯ,

—ಬ.ಷ.ವ. ೭೧೬

2. ಬ್ರಾಹ್ಮಣ ಧರ್ಮವು ಪೌರಾಣಿಕ ಧರ್ಮವಾಗಿ ಪುರಾಣಗಳ ಆಧಾರದ ಮೇಲೆ ತಾತ್ತ್ವಿಕ ನಂಬಿಕೆಗಳನ್ನು ರೂಪಿಸಿದರೆ, ಪ್ರಗತಿಪರ ಧರ್ಮವಾದ ಲಿಂಗಾಯತ

ಧರ್ಮವು ಅನುಭವ, ತರ್ಕ ಮತ್ತು ತತ್ತ್ವಗಳ ಆಧಾರದ ಮೇಲೆ ನಂಬಿಕೆಗಳನ್ನು ಪರಿಷ್ಕರಿಸುತ್ತದೆ.

ಆದಿ ಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಿಂಗೆ ಮಾರಿ
ರಾಮಪುರಾಣ ರಕ್ಕಸರಿಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ
ಕೂಡಲ ಸಂಗಮದೇವಾ.

(ಬ.ಷ.ವ. ೫೭೦)

ವೇದ ಪುರಾಣಗಳು ಯಜ್ಞ-ಯಾಗಗಳ ರೂಪದಲ್ಲಿ ಹೋತ, ಅಶ್ವ ಮುಂತಾದ ಪ್ರಾಣಿಗಳನ್ನು ಬಲಿಗೊಟ್ಟರೆ ಅಷ್ಟು ಪುಣ್ಯ-ಇಷ್ಟು ಪುಣ್ಯ ಎಂದು ಫಲಪ್ರಾಪ್ತಿ ಬಗ್ಗೆ ಬಣ್ಣಿಸುವುದನ್ನು ಬಸವಣ್ಣನವರು ಪ್ರಶ್ನಿಸುತ್ತಾರೆ. ಜೀವ ಹಿಂಸೆ ಮಾಡಿದರೆ ಪುಣ್ಯ ಬರುವುದೆ ? ಎಂದು ಚಕಿತರಾಗಿ ಪ್ರಶ್ನಿಸುತ್ತಾರೆ. "ಅಶ್ವದಂತಹ ಉಪಯುಕ್ತ, ನಿರಾಯುಧವಾದ, ಮನುಷ್ಯನ ನಿಷ್ಠಾವಂತ ಸೇವಕನಾದ ಪ್ರಾಣಿಯನ್ನು ಕೊಲ್ಲ- ಬಹುದೆ ?" ಎಂದರೆ "ಶಾಸ್ತ್ರಗಳು ಹೇಳಿವೆಯಲ್ಲ ; ಆದ್ದರಿಂದ ಶಾಸ್ತ್ರ ವಾಕ್ಯದಂತೆ ನಡೆಯುವ ಕಾರಣ ನಮಗೆ ಪಾಪ ಬರದು" ಎನ್ನುವವರನ್ನು ಕಂಡು ಕನಲಿ ಕೇಳು ತ್ತಾರೆ, "ನಾನು ಕೊಲ್ಲಲಿಲ್ಲ ; ನಾನು ಹಾಕಿದ ಹಗ್ಗದ ಕುಣಿಕೆ ಕೊಂದಿತು ಎಂಬಷ್ಟೇ ಹಾಸ್ಯಾಸ್ಪದವಲ್ಲವೇ ?" ಎಂದು. ಆದ್ದರಿಂದ ತತ್ತ್ವಜ್ಞಾನದ ಹಿನ್ನೆಲೆಯಲ್ಲಿ, ತರ್ಕದ ಆಧಾರದ ಮೇಲೆ ಸತ್ಯಾರ್ಥ ನಿರ್ಣಯ ಮಾಡಬೇಕೇ ವಿನಾ ಶಾಸ್ತ್ರ-ಪುರಾಣಗಳ ಆಧಾರದ ಮೇಲೆ ಅಲ್ಲ ಎಂಬುದು ಪ್ರಗತಿಪರ ಧರ್ಮದ ನಿಲುವು. ಪುರಾಣಗಳು ವ್ಯಕ್ತಿಯ ವಿಚಾರಶಕ್ತಿಯನ್ನೇ ಮಂಕುಗೊಳಿಸುತ್ತವೆ. ಅವನ ಬೌದ್ಧಿಕ ಅಭಿರುಚಿ (Intellectual taste)ಯನ್ನೇ ಕೆಡಿಸುತ್ತವೆ. ಅಕರಾಳ ವಿಕರಾಳದ ದೇವತೆ ಗಳನ್ನು ಸೃಷ್ಟಿಮಾಡಿ, ಅವುಗಳನ್ನು ವೈಭವೀಕರಿಸಿ, ಅವುಗಳನ್ನೇ ದೇವರೆಂದು ಪೂಜಿಸಲು ಕಲಿಸಿ, ನಿಜ ದೇವರ ಮಹತ್ವವನ್ನೇ ಕಳೆಯುತ್ತವೆ. ಅದಕ್ಕಾಗಿಯೇ ಶರಣರು "ಪುರಾಣವೆಂಬುದು ಪುಂಡರ ಗೋಷ್ಠಿ" ಎಂಬುದಾಗಿ ಕರೆದು ಪುರಾಣ ಶ್ರವಣವನ್ನೇ ನಿಷೇಧಿಸಿದರು.

3. ಪೌರಾಣಿಕ ಧರ್ಮವು ಶಾಸ್ತ್ರ ದಾಸ್ಯದೊಡನೆ ಮತೀಯ ದೃಷ್ಟಿಯನ್ನು ಬೆಳೆಸಿ ಮತಾಂಧತೆಯನ್ನು ಪ್ರೋತ್ಸಾಹಿಸಿದರೆ, ಪ್ರಗತಿಪರ ಧರ್ಮವು ಮತಿಯ (Intelle ctual) ದೃಷ್ಟಿಯನ್ನು ಬೆಳೆಸುತ್ತದೆ. ಹಿಂದೂ ದೇಶದ ಇತಿಹಾಸದಲ್ಲಿ ಶೈವ-

ವೈಷ್ಣವ-ಜೈನ ಮತಗಳವರ ನಡುವೆ ನಡೆದ ತಿಕ್ಕಾಟ-ಘರ್ಷಣೆ ನೋಡಿದರೆ ಆಶ್ಚರ್ಯ ವೆನಿಸುತ್ತದೆ, ಜಿನಾಲಯಗಳನ್ನು ಶೈವ-ವೈಷ್ಣವ ಮಂದಿರಗಳಾಗಿ ಪರಿವರ್ತಿಸುವು ದನ್ನು, ಶಿವಾಲಯಗಳನ್ನು ಜಿನಾಲಯಗಳನ್ನಾಗಿ ಮಾಡುವುದನ್ನು ಕಾಣಬಹುದಾಗಿದೆ.

ಧರ್ಮಗುರು ಬಸವಣ್ಣನವರು ಈ ಆಲಯಗಳ ತಂಟೆಗೇ ಹೋಗದೆ ವೈಯಕ್ತಿಕ ಸಾಧನೆಯಿಂದ ದೇಹವನ್ನು ದೇವಾಲಯ ಮಾಡುವ, ಸಮಾಜ ಸಂಘಟನೆಗೆ-ಸಂಸ್ಕಾ ರಕ್ಕೆ ಅನುಭವ ಮಂಟಪ ಕಟ್ಟುವ ಶ್ರೇಷ್ಠವಿಧಾನ ಅನುಸರಿಸಿದರು. ಹೀಗಾಗಿ ಪೌರಾ ಣಿಕ ಧರ್ಮದಿಂದ ಉಂಟಾಗುವ ಮತಾಂಧತೆಯನ್ನು ನಿವಾರಿಸಿದರು.

ಇಲ್ಲಿ ಒಂದು ಸಂದೇಹವನ್ನು ಪ್ರಾಜ್ಞರು ಎತ್ತಬಹುದು. ಕೆಲವು ವಚನಗಳಲ್ಲಿ, ಚನ್ನಬಸವಣ್ಣನವರು ಹೀಗೆ ಹೇಳಿದ್ದಾಗಿ ಉಲ್ಲೇಖವಾಗಿದೆ—ವ : ೧೦೫.

ಷಟಸ್ಥಲದವರ ಧಿಕ್ಕರಿಸುವ ಜನರ
ಸೀಳುವೆನೆಂಬುವ ವ್ರತವೆ ಎಂಟನೆಯ ಆಚಾರ.
ಲಿಂಗದ್ರೋಹವ ಮಾಡಿದವನ ಪ್ರಾಣವ ಛೇದಿಸುವುದೆ
ನಾಲವತ್ತೈದನೆಯ ಆಚಾರ.
ಜಂಗಮ ದ್ರೋಹವ ಮಾಡಿದವನ ಶಿರವ ನೀಡಾಡುವುದೆ
ನಾಲವತ್ತಾರನೆಯ ಆಚಾರ

ಭಿನ್ನವಿಚಾರದವರ ಪ್ರಾಣವನ್ನೇ ತೆಗೆಯಬೇಕು ಎಂಬ ಮತಾಂಧತೆಯ ಮಾತುಗಳು ಇಲ್ಲಿ ಕಾಣಬರುತ್ತವೆ; ಈ ವಚನವಾಕ್ಯ ಮತಾಂಧ ಅನುಯಾಯಿಗಳಿಂದ ಸೇರಿ ಸಲ್ಪಟ್ಟುದೇ ವಿನಾ ಆದಿ ಶರಣರದಲ್ಲ ಎಂದು ನನಗೆ ಅನ್ನಿಸುತ್ತದೆ. ಧರ್ಮವು ಜೀವಂತಿ ಕೆಯನ್ನು ಕಳೆದುಕೊಂಡಾಗ ಅದು ಮಡುಗಟ್ಟಿ, ಜಡಗಟ್ಟಿ ಅನುಯಾಯಿಗಳನ್ನು ಮತ್ತು ಪರಮತೀಯರನ್ನು ಆಕರ್ಷಿಸಲು ಅಸಮರ್ಥವಾದಾಗ ಮತಾಂಧತೆಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬಯಸುತ್ತದೆ. ಆದಿ ಶರಣರ ಕಾಲದಲ್ಲಿ ಅದೇ ಆಗ ಅರಳಿ, ಪೂರ್ಣ ಜೀವಂತಿಕೆಯಿಂದ ಮುಮುಕ್ಷುಗಳನ್ನು ಆಕರ್ಷಿಸುತ್ತಿದ್ದ ಬಸವ ಧರ್ಮ ಭಿನ್ನ ಮತೀಯರನ್ನು ಕೊಲ್ಲುವ ಮಟ್ಟಕ್ಕೆ ಇಳಿದಿರಲಿಲ್ಲ, ಇಂದಿನವರೆಗೂ ಎಂದೂ ಇಳಿಯ ಲಿಲ್ಲ. ಅಂತ ತಿಳಿದೇ ಸತ್ಯದ ಸಾಧಕರು, ಶೋಧಕರು ಆಕರ್ಷಿತರಾಗಿ ಬಂದರು. ಚನ್ನ ಬಸವಣ್ಣನ ವಚನಗಳಲ್ಲಿ (ಸೇರಿಸಲ್ಪಟ್ಟು) ಕಾಣಬರುವ ಮತಾಂಧತೆ ಆಗ ಇದ್ದಿದ್ದರೆ ಅಲ್ಲಮ ಪ್ರಭುವಿನಂತಹ ಮಹಾವಿಚಾರವಾದಿ, ಸಿದ್ಧರಾಮೇಶ್ವರರಂತಹ (ಹೆಣ್ಣು ಹೃದಯದ) ಮಹಾಸಿದ್ಧಪುರುಷ ಈ ಧರ್ಮವನ್ನು ಸ್ವೀಕರಿಸಲು ಸಾಧ್ಯವಿರಲಿಲ್ಲ. ಶರಣರದು ಮನವರಿಕೆ ಮಾಡಿಕೊಟ್ಟು ಪರಿವರ್ತಿಸುವ ವಿಧಾನವೇ ವಿನಾ ಭಿನ್ನಮ ತೀಯರನ್ನು ಸಂಹರಿಸುವ ವಿಧಾನವಲ್ಲ.

4. ಲಿಂಗಾಯತ ಧರ್ಮವು ಬೌದ್ಧಿಕ ಪ್ರಾಮಾಣಿಕತೆಗೆ ಒತ್ತುಕೊಡುವ ಧರ್ಮ, ಸಂಪ್ರದಾಯ ಶ್ರದ್ಧೆಯಿಂದ ಮತಾಂಧತೆಯನ್ನು ಪೋಷಿಸುವ ಧರ್ಮವಲ್ಲ. ಸತ್ಯ

ಕಹಿಯಾಗಿ ಇದ್ದರೂ ಅದನ್ನು ಸ್ವೀಕರಿಸಬೇಕೆಂದು
ವನ್ನು ತಿಳಿದ ಬಳಿಕ ಅದು ಎಷ್ಟೇ ಕಹಿಯಾಗಿ ಇದ್ದರೂ ಅದನ್ನು ಸ್ವೀಕರಿಸಬೇಕೆಂದು ಹೇಳುತ್ತದೆ. ತಾನು ನಂಬಿದುದನ್ನು ಸಂಪ್ರದಾಯದಲ್ಲಿ ರೂಢಿಯಲ್ಲಿರುವುದನ್ನು ಸತ್ಯವೆಂದು ಸಾಧಿಸುವ ಹಟಮಾಡದೆ, ಸತ್ಯವನ್ನು ಸ್ವೀಕರಿಸುವ ಬೌದ್ಧಿಕ ಪ್ರಾಮಾಣಿ ಕತೆಯನ್ನು ಹೊಂದಿದೆ.

ಅದೇ ರೀತಿ, ಸತ್ಯವನ್ನು ಪ್ರತಿಪಾದಿಸುವಾಗ ಅದು ಎಷ್ಟೇ ಕಟುವಾಗಿದ್ದರೂ ಸತ್ಯವನ್ನೇ ಪ್ರತಿಪಾದಿಸಬೇಕೆಂದು, ಇನ್ನೊಬ್ಬರ ಮನಸ್ಸನ್ನು ರಂಜಿಸುತ್ತದೆ ಎಂದು ಸುಳ್ಳನ್ನು ಹೇಳಬಾರದು ಎಂದು ಬಸವ ಧರ್ಮವು ಪ್ರತಿಪಾದಿಸುತ್ತದೆ "ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ" ಅದು ಕಹಿಯಿದ್ದರೂ ಹಿತವಾಗಿರುತ್ತದೆ ಎಂದೇ ಹೇಳುತ್ತದೆ.

5. ಪ್ರಗತಿಪರ ಧರ್ಮವು ವಿಶಾಲ ದೃಷ್ಟಿಯನ್ನು ಬೆಳೆಸಿದರೆ ಪೌರಾಣಿಕ ಧರ್ಮವು ಕೂಪ ಮಂಡೂಕ ವೃತ್ತಿಯನ್ನು ಬೆಳೆಸುತ್ತದೆ. ಹಳತಾದುದು, ಸಂಪ್ರಾದಾಯ- ದಲ್ಲಿರುವುದೇ ಪರಮ ಸತ್ಯವೆಂಬ ಕೂಪ ಮಂಡೂಕ ವೃತ್ತಿ ಮೂಢ ಅನುಯಾಯಿ ಗಳಲ್ಲಿ ಬೆಳೆದರೆ ಪ್ರಗತಿಪರ ಧರ್ಮವು ಹೊಸ ಅನ್ವೇಷಣೆಗಳನ್ನು ಸ್ವಾಗತಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಧಾರ್ಮಿಕ ಶಾಸ್ತ್ರಗಳಿಗೆ ಜೋತು ಬೀಳದೆ ತತ್ತ್ವಜ್ಞಾನ- ತರ್ಕ-ಅನುಭವಗಳ ಮೇಲೆ ಸತ್ಯವನ್ನು ನಿರ್ಧರಿಸಲು ಪ್ರಯತ್ನಿಸುವುದು.

ಶಾಸ್ತ್ರ ದಾಸ್ಯವು ಬದಲಾದ ಪರಿಸರದಲ್ಲಿ ಅನುಯಾಯಿಗಳಿಗೆ ಬಹಳ ಬಾಧೆ ಯನ್ನು ಉಂಟು ಮಾಡುವುದನ್ನು ಕಾಣಬಹುದು. ಪ್ರಗತಿಪರ ಧರ್ಮವು ವಿಚಾರ- ಆಚಾರ ಸ್ವಾತಂತ್ರ್ಯಗಳಿಗೆ ಅವಕಾಶ ನೀಡುತ್ತದೆ.

6. ಪ್ರಗತಿಪರ ಧರ್ಮವು ಜ್ಞಾನ ಪ್ರಧಾನವಾಗಿದ್ದರೆ, ಪೌರಾಣಿಕ ಧರ್ಮವು ಕರ್ಮ ಪ್ರಧಾನವಾಗಿರುತ್ತದೆ. ನಾವು ಮಾಡುವ ಪ್ರತಿಯೊಂದು ಆಚರಣೆಗಳನ್ನು ತರ್ಕದ ಒರೆಗೆ ಹಚ್ಚಿ ಆಚರಣೆಯಲ್ಲಿರುವ ಅರ್ಥವನ್ನು ಅರಿತು ಅಳವಡಿಸಿಕೊಳ್ಳಬೇಕೆಂದು ಹೇಳುವದು.

ಒಲೆಯ ಬೂದಿ ಬಿಲಿಯಲು ಬೇಡ
ಒಲಿದಂತೆ ಪೂಸಿಕೊಂಡಿಪ್ಪುದು
ಪೂಸಿ ಏನುಫಲ, ಮನದಲ್ಲಿ ಲೇಸಿಲ್ಲದನ್ನಕ್ಕ ?
ಒಂದನಾಡ ಹೋಗಿ ಒಂಭತ್ತನಾಡುವ
ಡಂಭಕರ ಮೆಚ್ಚ ನಮ್ಮ ಕೂಡಲ ಸಂಗಮದೇವ (-೧೧೪)

ವೈದಿಕ ಧರ್ಮವು ಅಧ್ಯಾತ್ಮಿಕ ಆಚರಣೆಗಳಿಗಿಂತಲೂ ಹೋಮ-ಹವನ, ಯಜ್ಞ- ಯಾಗ, ನವಗ್ರಹ ಪೂಜೆ ಮುಂತಾದ ಕರ್ಮಗಳಿಗೇ ಹೆಚ್ಚು ಒತ್ತು ಕೊಡುವುದನ್ನು ಕಾಣಬಹುದು.

ಆಚರಣೆಗಳು ವಿಧಿ-ವಿಧಾನಗಳು ಎಲ್ಲ ಧರ್ಮಗಳಲ್ಲಿಯೂ ಇರುತ್ತವೆ. ಆಚರಣೆ ಇಲ್ಲದುದು ಧರ್ಮವೇ ಅಲ್ಲ. ಆದರೆ ಆಚರಣೆಗಳು ಅಧ್ಯಾತ್ಮಿಕವಾಗಿ, ಅರ್ಥಪೂರಿತ

ವಾಗಿ ಇರಬೇಕು. ಹಿಂದುಗಳ ಹಬ್ಬಗಳನ್ನು ಗಮನಿಸಿದರೆ ಬರೀ ನೀರು ಎರೆದುಕೊಳ್ಳು
ವುದು, ಮನೆಯಲ್ಲಿ ಹತ್ತಾರು ದೇವತೆಗಳ ಪೂಜೆ ಮಾಡುವುದು, ಆ ಮೇಲೆ ಬಗೆಬಗೆಯ
ಅಡಿಗೆ ಮಾಡಿಕೊಂಡು ಮನೆಮಂದಿ ಉಣ್ಣುವುದನ್ನು ಕಾಣುತ್ತೇವೆ. ಗುಡಿಗಳಿಗೆ
ಹೋದರೂ ಮನಸ್ಸು ಬಂದಾಗ ಹೋಗಿ ಗಂಟೆಬಾರಿಸಿ, ಕಾಯಿ ಒಡೆದು ಗದ್ದಲ
ಹಾಕಿ ಬಂದುಬಿಡುವರು. ಇವರ ಹಬ್ಬಗಳು ಸಾಮಾಜಿಕ ಸಂಘಟನೆಗೆ ಯಾವುದೇ
ರೀತಿ ಸಹಕಾರಿಯಾಗವು.

ಮುಸ್ಲೀಮರ ಹಬ್ಬಗಳಂದು ಅವರು ಮನೆಯಲ್ಲಿ ಏನು ಉಣ್ಣುವರೋ ಬಿಡು
ವರೋ ಒಂದೇ ಸಮಯದಲ್ಲಿ ಎಲ್ಲರೂ ಒಂದು ಸ್ಥಳದಲ್ಲಿ ಸೇರಿ ಶಿಸ್ತಿನಿಂದ ಪ್ರಾರ್ಥಿಸಿ
ಭ್ರಾತೃಭಾವನೆ ಪ್ರದರ್ಶಿಸುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ, ಯಾವುದೇ
ಆಚರಣೆ ವೈಯಕ್ತಿಕ ಆತ್ಮವಿಕಾಸಕ್ಕೆ, ಸಾಮೂಹಿಕ ಶಿಸ್ತಿಗೆ, ಸಮಾಜ ಸಂಘಟನೆಗೆ
ಸಹಕಾರಿಯಾದರೆ ಒಳ್ಳೆಯದು. ಇಲ್ಲವಾದರೆ ಆಚರಣೆಗಳು ವ್ಯಕ್ತಿಗೆ ಹೊರೆ
ಯಾಗುವುವು.

ವಿಧಿವಿಧಾನಗಳು ಶರೀರದ ಕಸರತ್ತುಗಳಾಗದೆ ಮಾನಸಿಕ ಉಲ್ಲಾಸಕ್ಕೆ ಕಾರಣವಾಗ
ಬೇಕು. ಪ್ರಗತಿಪರ ಧರ್ಮವು ಅಂಥ ಆತ್ಮವಿಕಾಸದ ಆಚರಣೆಗಳನ್ನು ಬೋಧಿಸುತ್ತದೆ.
ಅಂತರಂಗದ ವಿಕಾಸಕ್ಕೆ ಕಾರಣವಾಗುವ ಆಚರಣೆಗಳನ್ನು ಪ್ರೋತ್ಸಾಹಿಸುವುದೇ ವಿನಾ
ಬಹಿರಂಗದ ಪರಿಶ್ರಮವನ್ನಲ್ಲ. ಪೂಜೆ-ಪ್ರಾರ್ಥನೆ-ಧ್ಯಾನ ಮುಂತಾದುವು ಈ ವಿಕಾಸಕ್ಕೆ
ಕಾರಣವಾಗುತ್ತವೆ. ಗಿಡಗಳನ್ನು ಆಶ್ರಯಿಸಿಕೊಂಡು ಕೆಲವು ಬಳ್ಳಿಗಳು ಬೆಳೆಯುತ್ತವೆ
ಸುಂದರವಾದ ಹೂವು ಅರಳಿಸಿದಾಗ ಆ ಗಿಡದ ಕಾಂಡವು ಸುಂದರವಾಗಿ ಕಾಣುತ್ತವೆ.
ಮತ್ತೆ ಕೆಲವು ಬಳ್ಳಿಗಳು ಗಿಡವನ್ನು ಬರೀ ಆಶ್ರಯಿಸಿಕೊಳ್ಳುವುದಿಲ್ಲ. ಗಿಡಗಳ ಕಾಂಡ-
ವನ್ನೇ ಕೊರೆಯತೊಡಗುತ್ತವೆ. ಪೂಜೆ-ಪ್ರಾರ್ಥನೆ-ಧ್ಯಾನದಂತಹವು ಧರ್ಮದ
ವೃಕ್ಷವನ್ನು ಅಲಂಕರಿಸುವ ಸುಂದರ ಬಳ್ಳಿಗಳಾದರೆ ಕರ್ಮಠ ಆಚರಣೆಗಳು ಧರ್ಮದ
ಕಾಂಡವನ್ನೇ ಕೊರೆಯುತ್ತವೆ. ಅದರಲ್ಲೂ ಡಾಂಭಿಕತೆಯಂತೂ ಧರ್ಮದ ಪರಮ
ಶತ್ರು. ಧರ್ಮಗುರು ಬಸವಣ್ಣನವರು ಹೇಳುತ್ತಾರೆ :

* **ಹಸಾರಕ್ಕೆ** ಅನುವಿಲ್ಲ, ಬಂದ ತತ್ಕಾಲಕ್ಕುಂಟು

* ಹರಸಿ ಮಾಡುವುದು ಹರಕೆಯ ದಂಡ

ನೆರಹಿ ಮಾಡುವುದು ಡಂಭಿನ ಭಕ್ತಿ

ಕೆಲವು ಮಹಾಧರ್ಮವಂತರೆಂದು ಹೊಗಳಿಸಿಕೊಳ್ಳಲು ಪೂಜೆಗಳನ್ನು ದಾಸೋಹ-
ಸಮಾರಾಧನೆ ಮಾಡುವರು. ಬೇರೆ ಸಮಯದಲ್ಲಿ ಹಸಿದು ಬಂದವರಿಗೆ ಒಂದು
ತುತ್ತು ಉಣಲಿಕ್ಕುವುದಿಲ್ಲ. ಶರಣರು ಪ್ರದರ್ಶಿಸಿಕೊಳ್ಳಲು ಮಾಡದೆ, ಅಗತ್ಯವನ್ನು
ಅನುಸರಿಸಿ ಮಾಡುವರು. ಇದಕ್ಕೆ ಸಮಯಾಚಾರ ಎನ್ನುವರು.

ಡಾಂಭಿಕತೆ ಮತ್ತು ಮತಾಂಧತೆಗಳು ಧರ್ಮವನ್ನು ಉಳಿಸಿ, ಬೆಳೆಸುವುದ
ಕ್ಕಿಂತಲೂ ಅದರ ನಾಶಕ್ಕೆ ಕಾರಣವಾಗುತ್ತವೆ. ಅದನ್ನು ಹೀಗೆ ಹೇಳಬಹುದು.
ಸಂಗೀತವು ನಾದಯೋಗಿಯಲ್ಲಿ ಹುಟ್ಟಿ, ಗಾಯಕರಿಂದ ವಿದ್ವಾಂಸರಿಂದ ಬೆಳೆದು,
ಕೊರವರಲ್ಲಿ ಸಾಯುವುದು (ಇಲ್ಲಿ ಕೊರವರು ಎಂದರೆ ಜಾತಿವಾಚಕವಲ್ಲ, ಮನಸ್ಸಿಗೆ
ಬಂದಂತೆ ಕಿರುಚಿತ್ತ ತಿರುಗುವವರೆಂದು ಅರ್ಥ.) ನೃತ್ಯವಿದ್ಯೆಯು ನಾಟ್ಯಾಚಾರ (ಶಿವ)
ನಿಂದ ಹುಟ್ಟಿ ನರ್ತಕರಲ್ಲಿ ಬೆಳೆದು ಕ್ಯಾಬರೆ ಕುಣಿತದವರಲ್ಲಿ ಸಾಯುವುದು. ಅದೇ
ರೀತಿ ಧರ್ಮವು ಸಹ ಪ್ರವಾದಿಗಳಿಂದ ಹುಟ್ಟಿ, ಪಂಡಿತರು–ದಾರ್ಶನಿಕರಲ್ಲಿ ಬೆಳೆದು
ಡಾಂಭಿಕರು ಮತಾಂಧರಿಂದ ಸಾಯುವುದು. ಸಾಮಾನ್ಯವಾಗಿ ಡಾಂಭಿಕರು ಕತ್ತೆಯು
ಸಕ್ಕರೆ ಮೂಟೆ ಹೊತ್ತಂತೆ ಧರ್ಮಲಾಂಛನಗಳನ್ನು ಹೊರು (ಧರಿಸು)ವರು. ಸಕ್ಕರೆಯ
ಸವಿಯನ್ನು ಕತ್ತೆಯು ಸವಿಯಲಾರದೆಂತೋ ಹಾಗೆ ಇವರು ಸಹ ಅನುಭಾವದ ಸೊಗ-
ಸನ್ನು ಸವಿಯರು.

ಪ್ರಗತಿಪರ ಧರ್ಮವು ವ್ಯಕ್ತಿಯಲ್ಲಿ ಪ್ರಯತ್ನಶೀಲತೆಯನ್ನು ಬೆಳೆಸುವುದು.
ಪೌರಾಣಿಕ ಧರ್ಮವು ವ್ಯಕ್ತಿಯನ್ನು ವಿಧಿವಾದಿ (ಅದೃಷ್ಟವಾದಿ)ಯನ್ನಾಗಿ ಮಾಡು
ವುದು, ಪ್ರಯತ್ನಶೀಲತೆಯನ್ನು ಕುಂಠಿತಗೊಳಿಸುವುದು, ಗ್ರಹಬಲ, ತಾರಾಬಲ,
ಅವುಗಳ ಮುಂದೆ ಮನುಷ್ಯನು ನಿಸ್ಸಹಾಯಕ; ಜೀವನವು ಪೂರ್ವ ನಿರ್ಧಾರಿತ.
ಹಣೆ ಬರಹದಲ್ಲಿ ಇದ್ದಂತೆ ಆಗುತ್ತದೆ. ಈ ಬಗೆಯ ನಿರುತ್ಸಾಹವನ್ನು ಪೌರಾಣಿಕ
ಧರ್ಮವು ಬೋಧಿಸಿದರೆ ಪ್ರಗತಿಪರ ಧರ್ಮವು ವ್ಯಕ್ತಿಯು ತನ್ನ ಮುಂಬಾಳನ್ನು
ರೂಪಿಸಿಕೊಳ್ಳಲು ಸಾಕಷ್ಟು ಅವಕಾಶವಿದೆ "ಹಿಂದಣ ಜನನವೇನಾದೊಡಾಗಲೀ
ಮುಂದೆ ನೀ ಕರುಣಿಸು," "ಕೂಡಲ ಸಂಗಮ ದೇವರ ಪೂಜಿಸಿದ ಫಲ ಅಂಗೈಯ
ಮೇಲೆ" ಪ್ರಯತ್ನಕ್ಕೆ ಫಲವು ಇದ್ದೇ ಇರುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ.
ಪರಮಾತ್ಮನ ಕೃಪೆಯಾದರೆ ಹಿಂದಿನ ಜನ್ಮ ನಿವೃತ್ತಿಯಾಗುತ್ತದೆ ಎಂದು ಬೋಧಿಸು
ತ್ತದೆ. ಹೀಗೆ ವ್ಯಕ್ತಿಯನ್ನು ಪ್ರಯತ್ನಶೀಲನನ್ನಾಗಿ ಮಾಡುತ್ತದೆ.

ಪೌರಾಣಿಕ ಧರ್ಮವು ಭೀತಿಯ ತಳಹದಿಯ ಮೇಲೆ ನಂಬಿಕೆಯನ್ನು ಬೆಳೆಸಿದರೆ
ಪೌರಾಣಿಕ ಧರ್ಮವು ಆತ್ಮವಿಶ್ವಾಸದ ತಳಹದಿಯ ಮೇಲೆ ನಂಬಿಕೆಯನ್ನು ಬೆಳೆಸುತ್ತದೆ.
ನಾಗಪೂಜೆ, ನವಗ್ರಹ ಪೂಜೆ, ಗಣಪತಿ-ಸರಸ್ವತಿ-ಲಕ್ಷ್ಮಿ ಮುಂತಾದ ದೇವತೆಗಳ
ಪೂಜೆಗಳಲ್ಲಿ ಭಯವೇ ಜಾಸ್ತಿಯಾಗಿರುತ್ತದೆ. ಇವುಗಳನ್ನು ಪೂಜಿಸದಿದ್ದರೆ ಏನು
ಕೆಡುಕಾಗುವುದೋ ಎಂಬ ಭೀತಿಯೇ ಪೂಜೆಗೆ ಪ್ರೇರಣೆ. ಪ್ರಗತಿಪರ ಧರ್ಮವು ಈ
ರೀತಿ ಭಯವನ್ನು ಬೋಧಿಸದೆ "ದೇವರು ಸೃಷ್ಟಿಕರ್ತ, ಮಹಾದಾನಿ, ಕರುಣಾಶಾಲಿ,

ಪ್ರೇಮ ಸ್ವರೂಪ, ಸೃಷ್ಟಿಯನ್ನು ಮತ್ತು ನಮ್ಮನ್ನು ಸೃಷ್ಟಿಸಿದ್ದಕ್ಕೆ ಕೃತಜ್ಞತೆಯಿಂದ ಅವನನ್ನು ಸ್ಮರಿಸಬೇಕು. ನಾವು ಅವನಿಗೆ ಕೊಡುವುದಕ್ಕಿಂತಲೂ ಹೆಚ್ಚು ದೇವನು ನಮಗೆ ಕೊಡುವನು. ಅವನನ್ನು ಪೂಜಿಸುವುದು ನಮ್ಮ ಕರ್ತವ್ಯ" ಈ ರೀತಿಯಾಗಿ ಬೋಧಿಸುತ್ತದೆ. ಹೀಗಾಗಿ ಆತ್ಮವಿಶ್ವಾಸ ಮೊಳೆಯುತ್ತದೆ; ಭೀತಿಯಳಿದು ಶಾಂತಿ-ಸಂತೃಪ್ತಿ ಅಳವಡುತ್ತವೆ. ಮೂಢ ಭಕ್ತಿ ಭಯದಿಂದ ತೊಳಲುವವನು ಅಜ್ಞಾನಿಯಾದರೆ ಅರಿತು ಪೂಜಿಸುವವನು ಸುಜ್ಞಾನಿಯಾಗುತ್ತಾನೆ. ಮೂಢನ ಶ್ರದ್ಧೆ ಒಂದು ದೇವತೆಯಿಂದ ಇನ್ನೊಂದು ದೇವತೆಗೆ ಬದಲಾಗುತ್ತಿದ್ದರೆ, ಜ್ಞಾನಿಯ ಭಕ್ತಿ ಕರ್ತನಲ್ಲಿ ಅಚಲವಾಗಿ ನಿಲ್ಲುತ್ತದೆ.

ಪೌರಾಣಿಕ ಧರ್ಮವು ವ್ಯಕ್ತಿಗಳಲ್ಲಿರುವ ವಿಚಾರ ಭಿನ್ನತೆಯನ್ನು ಗೌರವಿಸುತ್ತೇನೆ, ಅದೇ ಸಮನ್ವಯ ಎಂದು ಪ್ರತಿಪಾದಿಸಿ ಜನರನ್ನು ಅವರವರ ಅಜ್ಞಾನದಲ್ಲಿಯೇ ಇಡುತ್ತದೆ. "ಯಾರ ಮನಸ್ಸಿಗೂ ನೋವುಂಟು ಮಾಡಬಾರದು; ಅವರವರ ನಂಬಿಕೆ ಅವರದು." ಎಂದು ಅಜ್ಞಾನಿಗಳನ್ನು ಮೂಢರನ್ನು ಅವರ ಮೌಢ್ಯತೆಯ ಕೆಸರಿನಲ್ಲೇ ಅವರು ಸಿಕ್ಕಿ ನಾಶವಾಗುವಂತೆ ಮಾಡುತ್ತದೆ. ಪ್ರಗತಿಪರ ಧರ್ಮವು ಕಟುವಾದ ಮಾತುಗಳನ್ನಾಡಿಯೂ, ವೈದ್ಯನು ರೋಗಿಗೆ ಶಸ್ತ್ರಚಿಕಿತ್ಸೆ ಮಾಡುವಂತೆ ಅತ್ಯಂತ ಕಳಕಳಿಯಿಂದ ಮೂಢನ ಮೌಢ್ಯತೆಯನ್ನು ಕಳೆದು ಅವನನ್ನು ವೈಚಾರಿಕ ಮಟ್ಟಕೆ ಏರಿಸಲು ಪ್ರಯತ್ನಿಸುತ್ತದೆ. ತನ್ನ ಧರ್ಮದ ಅನುಯಾಯಿಗಳೆಲ್ಲ ಏಕರೂಪದ ವೈಚಾರಿಕ ಆಚಾರ-ವಿಚಾರಗಳಿಂದ ಪ್ರೌಢಭಕ್ತರಾಗಬೇಕೆಂಬ ಕಳಕಳಿ ಪ್ರಗತಿಪರ ಧರ್ಮದ್ದು.

ಪೌರಾಣಿಕ ಧರ್ಮ ವ್ಯಕ್ತಿ-ಭಕ್ತಿಯನ್ನು ಪ್ರಚೋದಿಸಿದರೆ, ಪ್ರಗತಿಪರ ಧರ್ಮ ತತ್ತ್ವದ ಭಕ್ತಿಯನ್ನು, ಸೃಷ್ಟಿಕರ್ತನ ಮೇಲೆ ಶ್ರದ್ಧೆಯನ್ನು ಪ್ರೇರೇಪಿಸುತ್ತದೆ. ಇದಕ್ಕೆ ಬ್ರಾಹ್ಮಣ ಧರ್ಮ, ವೈಷ್ಣವ ಮತಗಳು ಜ್ವಲಂತ ಉದಾಹರಣೆಗಳು. ಇವುಗಳ ಅನುಯಾಯಿಗಳಿಗೆ ಆಕಾರವಿರಹಿತ ಜಗತ್ಕರ್ತನ ಕಲ್ಪನೆ ಸಹ ಮಾಡಿಕೊಳ್ಳಲು ಸಾಧ್ಯವಿಲ್ಲದಷ್ಟು ದೇವತೆಗಳನ್ನು ಪೂಜಿಸುತ್ತಾರೆ. 'ದೇವರು' ಅಂದ ತಕ್ಷಣ ದೇವಿ, ಗಣಪತಿ, ರಾಮ, ಕೃಷ್ಣ, ಹನುಮಂತ ಇಂಥವರದೇ ಕಲ್ಪನೆ. ಈ ವ್ಯಕ್ತಿ ಆರಾಧನೆಯು ಬಹುದೇವತೋಪಾಸನೆ, ಸ್ಥಾನಿಕ ಪಂಥಗಳನ್ನು ವಿಪರೀತವಾಗಿ ಬೆಳೆಸುತ್ತದೆ. ಶ್ರದ್ಧಾ ಕೇಂದ್ರಗಳು ಬದಲಾಗುತ್ತಲೇ ಇರುತ್ತವೆ. ವೆಂಕಟೇಶ್ವರ, ರಾಘವೇಂದ್ರ, ಮಂಜುನಾಥ, ಮಹಾಲಕ್ಷ್ಮಿ, ಭವಾನಿ ಇತ್ಯಾದಿ. ಇವುಗಳ ಜೊತೆಗೆ ಇನ್ನು ಬದುಕಿರುವ ವ್ಯಕ್ತಿಗಳೂ ಸೇರುತ್ತಾರೆ. ಇಂಥ ಜನರಿಗೆ ಸೃಷ್ಟಿಕರ್ತನ ಬಗ್ಗೆ ಜ್ಞಾನ ಒತ್ತಟ್ಟಿಗಿರಲಿ ಕಲ್ಪನೆ ಸಹ ಬರುವುದಿಲ್ಲ.

ಇಸ್ಲಾಂ ಧರ್ಮಾನುಯಾಯಿಗಳಲ್ಲಿ ಮೊಹಮದ್ ಬಗ್ಗೆ, ಕ್ರೈಸ್ತರಲ್ಲಿ ಏಸು ಕ್ರಿಸ್ತನ ಬಗ್ಗೆ, ಬೌದ್ಧರಲ್ಲಿ ಬುದ್ಧನ ಬಗ್ಗೆ ಒಂದು ರೀತಿಯಲ್ಲಿ ವ್ಯಕ್ತಿ ಭಕ್ತಿ, ಗುರು ನಿಷ್ಠೆ ಇದೆಯಾದರೂ ಆ ಭಕ್ತಿ ಯಾವುದೇ ರೀತಿಯಲ್ಲಿ ತಾತ್ತ್ವಿಕ ನಿಷ್ಠೆಯನ್ನು ಶಿಥಿಲಗೊಳಿಸದು. ಈ ಗುರುನಿಷ್ಠೆ ದೇವರ ಮಹಿಮೆ ಅರಿಯಲು – ಸಾರಲು ಸಹಾಯಕವಾಗುತ್ತದೆ. ಅದೇ ಬ್ರಾಹ್ಮಣ ಧರ್ಮದ ವ್ಯಕ್ತಿ ಭಕ್ತಿ ದೇವರನ್ನು ಮರೆಸಿ ಓರ್ವ ವ್ಯಕ್ತಿಯ ಕೇಂದ್ರದ ಸುತ್ತ ಸುತ್ತುತ್ತದೆ. ವಿಶ್ವಗುರು ಬಸವಣ್ಣನವರನ್ನು ತೆಗೆದುಕೊಳ್ಳೋಣ. ಆರಾಧನಾ ಭಾವದಿಂದ ನಾವು ಅವರ ಸಾಹಿತ್ಯವನ್ನು ಓದುತ್ತ ಹೋದಂತೆ ಇವರ ಬಗ್ಗೆ ನಮಗೆ ಭಕ್ತಿಯೂ ಎಷ್ಟೇ ಉತ್ಕಟವಾದರೂ, ದೇವರ ಅಸ್ತಿತ್ವ-ಸ್ವರೂಪ ಮನವರಿಕೆಯಾಗಿ ಲಿಂಗಭಕ್ತಿಯು ಅಧಿಕವಾಗುತ್ತದೆ, ನಿಷ್ಠೆಯಲ್ಲಿ ನೆಲೆ ನಿಲ್ಲುತ್ತದೆ. ವೈಷ್ಣವ-ಶೈವ ಭಕ್ತಿಗಳು ದೇವರನ್ನು ಸಾಮಾನ್ಯ ಸಂಸಾರಿಯಂತೆ ಕಂಡು ಮಲಗಿಸುವುದು, ಎಬ್ಬಿಸುವುದು, ಅವನಿಗೆ ಮದುವೆ ಮಾಡಿಸುವುದು ಮುಂತಾದ ಹಾಸ್ಯಾಸ್ಪದ ವರ್ತನೆಗಳನ್ನೆಲ್ಲ ಧಾರ್ಮಿಕ ಉತ್ಸವಗಳಂತೆ ಆಚರಿಸಲು ಅವಕಾಶ ಮಾಡಿವೆ. ಯಾವುದನ್ನಾದರೂ ದೇವರು-ಪೂಜ್ಯ ಎಂದು ಭಾವಿಸಿದ ಮೇಲೆ ಕಾಯಾ ವಾಚಾ ಮನಸಾ ಅದನ್ನು ಗೌರವಿಸಬೇಕು. ಹಿಂದುಗಳು ಹಾಸ್ಯಲೇಖನ ಬರೆಯುವುದು, ಗಾದೆ ಮಾತುಗಳಂತೆ ದೇವತೆಗಳನ್ನು ಬಳಸುವುದು ಮಾಡುತ್ತಾರೆ. ಬಸವಣ್ಣನವರು ವಿಡಂಬಿಸುವಂತೆ, "ಹೊಸ್ತಿಲ ಪೂಜಿಸಿ ಹೊರವಟ್ಟು ಹೋದ ಒಕ್ಕಲತಿಯಂತೆ" ಆಗುವುದು. ಹೊಸ್ತಿಲನ್ನು ದೇವರೆಂದು ಪೂಜಿಸುವರು, ನಂತರ ತುಳಿದೇ ಓಡಾಡುವರು, ಒಳಕಲ್ಲನ್ನು ದೇವರೆನ್ನುವರು, ರುಬ್ಬಲು ಬಳಸುವರು ; ಒನಕೆಯನ್ನು ದೇವರು ಎನ್ನುವರು ಕುಟ್ಟಲು ಬಳಸುವರು. ಅಂದರೆ ಇವರ ದೇವರ ಯೋಗ್ಯತೆ ಇಷ್ಟೆ ಕುಟ್ಟಿಕೊಡುವುದು, ಬೀಸಿ ಕೊಡುವುದು, ರುಬ್ಬಿ ಕೊಡುವುದು. ತಿರುಪತಿಗೆ ಹೋಗಿ ಕೂದಲು ಕೊಡುವುದು ಶ್ರೇಷ್ಠ ಎಂದು ಒಂದು ನಂಬಿಕೆ, ಅವನು ತಿರುಪತಿ ಕ್ಷೌರ (ಮೋಸ) ಮಾಡಿದ ಅನ್ನುವುದು ಮತ್ತೊಂದು ಕಡೆ. ಅದೇ ರೀತಿ ತಿರುಪತಿ ಪಂಗನಾಮ ಎನ್ನುವುದೂ ರೂಢಿಗೊಂಡಿದೆ. ಅಂದರೆ ತಿರುಪತಿ ದೇವರು ತಲೆಬೋಳಿಸಿ, ಪಂಗನಾಮ (ದೊಡ್ಡ ಮೋಸ) ಹಾಕುವವನು ಎಂದರ್ಥವಾಗದೆ. ರಾಮ-ಕೃಷ್ಣರನ್ನು ದೇವರು, ಪರಮಾತ್ಮ ಎಂದು ಹಾಡಿ ಹೊಗಳುತ್ತಾರೆ, ಹೆಂಡತಿಯ ಶೀಲದ ಬಗ್ಗೆ ಸಂಶಯ ಪಡುವವನನ್ನು 'ರಾಮ' ಎಂದು, ವಿಷಯ ಲೋಲುಪನಾಗಿ ರಸಿಕನಾಗಿ ಉಡಾಳನಾಗಿ ತಿರುಗುವವನನ್ನು 'ಕೃಷ್ಣ' ಎಂದು ಹೋಲಿಸುತ್ತಾರೆ. ಅವರ ಆಚರಣೆಗಳು ಸರಿಯಲ್ಲ ಎಂದು ಟೀಕಿಸುತ್ತಾರೆ. ಮತ್ತೆ ಅವರನ್ನು ಪೂಜಿಸುತ್ತಾರೆ.

ಇಂಥ ಗೊಂದಲಗಳು ಪ್ರಗತಿಪರ ಧರ್ಮವಾದ ಲಿಂಗಾಯತ ಧರ್ಮದಲ್ಲಿ ಇಲ್ಲ. ಶಿವನ ಬಗ್ಗೆ ಗೌರವವು ವ್ಯಕ್ತವಾದರೂ ಅವನನ್ನು ದೇವರು ಎನ್ನದೆ ಸೃಷ್ಟಿಕರ್ತನನ್ನು ಮಾತ್ರ ದೇವರು ಎನ್ನುತ್ತದೆ ವಚನಶಾಸ್ತ್ರ. ಅವನಿಗೆ ಪರಮೋಚ್ಚ ಸ್ಥಾನವನ್ನು ನೀಡುತ್ತದೆ. ಅದೇ ನಿಜವಾದ ವೇದ ಸಂದೇಶ ಎಂದು ಕೂಡ ಪ್ರತಿಪಾದಿಸುತ್ತಾರೆ. ವಿಶ್ವಗುರು ಬಸವಣ್ಣನವರು ಮತ್ತು ದಯಾನಂದ ಸರಸ್ವತಿಯವರು.

[ಮುಂದುವರಿಯುವುದು]

ಜಯಂತಿ-ವರ್ಧಂತಿ ಆಚರಣೆ

ಕೂಡಲ ಸಂಗಮ ಉಮರಾಣಿ, ಐಗಳಿ ಅವರಿಂದ

ಪ್ರಶ್ನೆ : ವರ್ಧಂತಿ–ಜಯಂತಿಗಳನ್ನು ಆಚರಿಸುವ ವಿಧಾನವನ್ನು ವಿಸ್ತಾರವಾಗಿ ಕಲ್ಯಾಣ ಕಿರಣದಲ್ಲಿ ಪ್ರಕಟಿಸಬೇಕೆಂದು ಕೋರುವೆವು.

'ಬಸವ ಧರ್ಮದ ಹಬ್ಬ–ಹುಣ್ಣಿಮೆ–ಉತ್ಸವಗಳು' ಈ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದೆ. ಆದರೂ ಎಲ್ಲ ಓದುಗರಿಗೂ ತಿಳಿಯಲೆಂದು ನಿಮ್ಮ ಕೋರಿಕೆಯಂತೆ ಬರೆಯುತ್ತಿರುವೆ. ವರ್ಧಂತಿ–ಇದು ಜೀವಂತವಿರುವವರ ಹುಟ್ಟುಹಬ್ಬದ ಆಚರಣೆ ಜಯಂತಿ–ಇದು ತೀರಿಕೊಂಡವರ ಹುಟ್ಟಿದ ಹಬ್ಬದ ಆಚರಣೆ. ಹುಟ್ಟುಹಬ್ಬಗಳ ಆಚರಣೆ ಒಳ್ಳೆಯ ಆಚರಣೆ. ದೊಡ್ಡವ್ಯಕ್ತಿಗಳ ಹುಟ್ಟುಹಬ್ಬವನ್ನು ಎಲ್ಲರೂ ಕೂಡಿ ಆಚರಿಸುವುದರಲ್ಲಿ ಅವರ ಬಗ್ಗೆ ಗೌರವ-ಅಭಿಮಾನ-ಅಕ್ಕರೆ ವ್ಯಕ್ತವಾಗುವವು. ಕೃತ-ಜ್ಞತೆ ಅಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. "ನೀವು ನಮಗೆ, ನಮ್ಮ ಸಮಾಜಕ್ಕೆ ಒಳ್ಳೆಯದನ್ನು ಮಾಡಿದಿರಿ" ಎಂದು ಎಲ್ಲರೂ ಕೊಂಡಾಡುವರು. ಇಂಥ ಆಚರಣೆ ಆ ವ್ಯಕ್ತಿಗಳಿಗೆ ಸ್ಫೂರ್ತಿ-ಉತ್ಸಾಹಗಳನ್ನು ತುಂಬುವುದು.

ಅಂದು ಆ ವ್ಯಕ್ತಿಗೆ ಅಭ್ಯಂಗನ ಸ್ನಾನ ಮಾಡಿಸಬೇಕು. ಅವರು ಇಷ್ಟಲಿಂಗಾರ್ಚನೆ ಮತ್ತು ಬಸವೇಶ್ವರ ಪೂಜಾವ್ರತಗಳನ್ನು ನೆರವೇರಿಸಬೇಕು. ಗುರು-ಹಿರಿಯರಿದ್ದರೆ ಭಕ್ತರು, ಕಿರಿಯರು ಪಾದಪೂಜೆ ಮಾಡಬಹುದು. ಮಾಲಾರ್ಪಣೆ, ಪುಷ್ಪವೃಷ್ಟಿ ಆರತಿ ಮಾಡಬೇಕು. ಅವರ ವಯಸ್ಸು ಎಷ್ಟಿರುವದೋ ಅಷ್ಟು ಆರತಿಗಳನ್ನು ಸಿದ್ಧ ಪಡಿಸಿ ಬೆಳಗಿ ಶುಭಹರಸಿ, ಕೊಡಲು ಉದ್ದೇಶಿಸಿರುವ ಕೊಡುಗೆಗಳನ್ನು ಕೊಡಬೇಕು. ಈ ಕೊಡುಗೆಗಳ ಸಮರ್ಪಣೆಯ ನಂತರ ನುಡಿಕಾಣಿಕೆ. ಅವರ ಬಗ್ಗೆ ಗುಣಗಾನ ಮಾಡಿ, ಉಪನ್ಯಾಸ ಮಾಡಬೇಕು. ಅವರ ಹೆಸರಿನಲ್ಲಿ ವಿಶೇಷ ದಾನಗಳನ್ನೂ ಘೋಷಿ ಸಬಹುದು. ಇವು ಜ್ಞಾನಾತ್ಮಕವಾಗಿರಬೇಕು.

ಮನೆಯ ಜನರ ಹುಟ್ಟುಹಬ್ಬಗಳನ್ನು ಆಚರಿಸುವುದು ಒಳ್ಳೆಯ ಆಚರಣೆ. ಇಂದಿನ ಕೃತಕ ವಾತಾವರಣದಲ್ಲಿ ವಿಭಜಿತ ಕುಟುಂಬಗಳೇ ಜಾಸ್ತಿ, ಹುಟ್ಟುಹಬ್ಬದ ನಿಮಿತ್ತವಾದರೂ ಒಬ್ಬರಿಗೊಬ್ಬರು ಭೇಟಿಯಾಗುವರು, ಸೇರುವರು. ಕಡೆಗೆ ನೆನಪಿಟ್ಟು ಕೊಂಡು ಶುಭಾಶಯಗಳನ್ನಾದರೂ ಕಳಿಸಿ ಮಾನಸಿಕ ಉಲ್ಲಾಸ ನೀಡುವರು. ಮನೆಯಲ್ಲಿ ಮಕ್ಕಳ ಹುಟ್ಟುಹಬ್ಬ ಆಚರಣೆ ಸಹ ಒಳ್ಳೆಯದು. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅಹಂ ಇರುತ್ತದೆ. ವರ್ಷಕ್ಕೊಮ್ಮೆಯಾದರೂ ಅವರ ಹುಟ್ಟುಹಬ್ಬ ನೆನಪಿಸಿಕೊಂಡು ಆಚರಿಸಿ, ಸಿಹಿ ಮಾಡಿ ಉಣ್ಣಿಸುವುದರಿಂದ ಆ ವ್ಯಕ್ತಿಗೂ ಸಂತೋಷ–ಮಕ್ಕಳು ಇಡೀ

ವರ್ಷ ತನ್ನ ಹುಟ್ಟು ಹಬ್ಬದ ದಿನಕ್ಕಾಗಿ ಕಾತುರದಿಂದ ಕಾಯುವುದನ್ನು ಕಾಣುತ್ತೇವೆ. ಬೆಳಿಗ್ಗೆ ಮಕ್ಕಳಿಗೆ (ದೊಡ್ಡವರಿಗೂ) ಅಭ್ಯಂಗನ ಸ್ನಾನ ಮಾಡಿಸಿ, ಇಷ್ಟಲಿಂಗಾರ್ಚನೆ ಅವರ ಕೈಲಿ ಮಾಡಿಸಿ, ಬಸವೇಶ್ವರ ಪೂಜಾವ್ರತ ಅವರ ಕೈಲಿ ಮಾಡಿಸಿ (ತೀರಾ ಚಿಕ್ಕ ಮಕ್ಕಳಿದ್ದರೆ ಅವರ ಪರವಾಗಿ ತಾವೇ ಮಾಡಿ) ಪ್ರಸಾದ ಕೊಡಬೇಕು. ಸಂಜೆ ಒಂದು ಕುರ್ಚಿಯನ್ನಿಟ್ಟು ಅಲಂಕರಿಸಿ, ಹೊಸಬಟ್ಟೆಗಳನ್ನುಡಿಸಿ, ಬಸವ ಭಾವಚಿತ್ರಕ್ಕೆ ಅವರಿಂದ ಆರತಿ ಮಾಡಿಸಿ, ನಂತರ ಅಲಂಕರಿಸಿದ ಕುರ್ಚಿ (ಮಣೆ)ಯ ಮೇಲೆ ಕುಳ್ಳಿರಿಸಬೇಕು. ಮನೆಯ ಹಿರಿಯರು ಮಗುವಿಗೆ ವಿಭೂತಿ ಧರಿಸಿ, ಮಾಲೆ ಹಾಕಿ, ಆರತಿ ಮಾಡಬೇಕು. ಎಷ್ಟು ವರ್ಷಗಳಾಗಿವೆಯೋ ಅಷ್ಟು ಆರತಿಗಳನ್ನು ಬೆಳಗಬೇಕು. ಇಂಥ ಸನ್ನಿವೇಶ ದಲ್ಲಿ ಸಾಮೂಹಿಕ ಪ್ರಾರ್ಥನೆ ಸಹ ನಡೆಸಬಹುದು. ನಂತರ ನೆರೆದವರಿಗೆಲ್ಲ ಏನಾದರೂ ಸಿಹಿ ಹಂಚಿಸಬಹುದು. ಅವರು ಏನಾದರೂ ನೆನಪಿನ ಕಾಣಿಕೆ ಕೊಡುವುದಿದ್ದರೆ ಕೊಡ ಬಹುದು. ವಿಭೂತಿಯ ಬೊಟ್ಟನ್ನಿಟ್ಟು ಹಿರಿಯರು ಹರಸಬೇಕು. ಆರತಿ ಬೆಳಗಬೇಕು.

ವಿಶೇಷ ಸೂಚನೆ : ಕೇಕ್ ಕತ್ತರಿಸುವ ಮತ್ತು ಮೇಣದ ಬತ್ತಿ ಆರಿಸುವ ಕೆಟ್ಟ ಆಚರಣೆಯನ್ನು ಹಿಂದುಗಳು ಮಾಡುತ್ತಿರುವುದು ಕಾಣಬರುತ್ತಿದೆ. ಮೊಟ್ಟೆ ಹಾಕಿ ಮಾಡಿದ ಕೇಕನ್ನು ಕತ್ತರಿಸಿ ಹಂಚುವುದು ತೀರಾ ಖಂಡನೀಯ. ಮೊದಲು ಭಾವಚಿತ್ರಕ್ಕೆ ನೈವೇದ್ಯ ಮಾಡಿದ ಸಿಹಿ ಪ್ರಸಾದವನ್ನು ವ್ಯಕ್ತಿಯ ಕೈಯಲ್ಲಿ ಮುಟ್ಟಿಸಿ ಎಲ್ಲರಿಗೂ ವಿತರಿಸಬೇಕು. ದೀಪ ಆರಿಸುವುದು ಹಿಂದೂ ಸಂಸ್ಕೃತಿಯಲ್ಲಿ ಅಶುಭ. ದೀಪಗಳನ್ನು ಹೊಂದಿಸಿಟ್ಟು ಮೊದಲನೆಯದನ್ನು ಹುಟ್ಟುಹಬ್ಬ ಮಾಡುವವರ ಕೈಯಲ್ಲಿ ಹೊತ್ತಿಸಬೇಕು. ನಂತರ ಬೆಳಗಬೇಕು. ಕ್ರೈಸ್ತ ಸಂಸ್ಕೃತಿಯಾದ ಕೇಕ್ ಕತ್ತ ರಿಸಿ, ದೀಪ ಆರಿಸುವುದನ್ನು ತೀವ್ರವಾಗಿ–ಯಾರೇ ಮಾಡಲಿ–ಖಂಡಿಸಬೇಕು.

ಬೆಳಗಲು ದೀಪಗಳನ್ನು ಎಲ್ಲಿಂದ ತರುವುದು ? ಗೋಧಿಯ ಹಿಟ್ಟನ್ನು ಚೆನ್ನಾಗಿ ಕಲಿಸಿ, ನಾದಿ, ಬಟ್ಟಲಿನಂತೆ ಮಾಡಿ, ತುದಿಯಲ್ಲಿ ಬತ್ತಿಹಾಕಲು ಮೂತಿ ಮಾಡಿ ಪ್ರಣ ತೆಗಳನ್ನು ಸಿದ್ಧಪಡಿಸಬಹುದು. ಕಡಲೆ(ಹೂ)ಬತ್ತಿ ಮಾಡಿ ಸಹ ಮಧ್ಯೆ ಇಟ್ಟು ಎಣ್ಣೆ ಹಾಕಬಹುದು.

ರಾಷ್ಟ್ರೀಯ ಬಸವ ದಳದ ಸದಸ್ಯರಾದ ಶರಣ ಬಂಧುಗಳು ತಮ್ಮ ಹುಟ್ಟು ಹಬ್ಬದಂದು (ಅಥವಾ ಹುಟ್ಟುಹಬ್ಬ ಬಂದ ದಿನವನ್ನೊಳಗೊಂಡ ವಾರದ ಪ್ರಾರ್ಥನಾ ದಿವಸ) ರಾಷ್ಟ್ರೀಯ ಬಸವ ದಳದ ಪ್ರಾರ್ಥನೆ ನಡೆಯುವ ಬಸವ-ಮಂಟಪದಲ್ಲಿ ವಿಶೇಷ ಪೂಜೆ ಏರ್ಪಡಿಸಬಹುದು. ಪೂಜೆ-ಉಪನ್ಯಾಸ-ಪ್ರಸಾದ ವಿತರಣೆಯ ಖರ್ಚು ವಹಿಸಿಕೊಂಡು ಶರಣ ಬಂಧುಗಳನ್ನು ಆಹ್ವಾನಿಸಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳ ಬಹುದು. ತಮ್ಮ ಮನೆಯಲ್ಲಿ ವೈಯಕ್ತಿಕವಾಗಿ, ಕೌಟುಂಬಿಕವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುವುದಕ್ಕಿಂತಲೂ ಇದು ಹೆಚ್ಚು ಅಭಿನಂದನಾರ್ಹ ಮತ್ತು ಅರ್ಥಪೂರಿತ.

ಘನವಂತರಾಗಿ, ಹಿರಿದಾದ ಸಾಧನೆ ಮಾಡಿ, ತೀರಿ ಹೋದವರ ಹೆಸರಿನಲ್ಲಿ ಅವರ ಜನ್ಮದಿನದಂದು ಮಾಡುವುದೇ ಜಯಂತಿ. ಬಸವ ಜಯಂತಿ, ಚನ್ನಬಸವ ಜಯಂತಿ, ಗಾಂಧಿ ಜಯಂತಿ, ಅಂಬೇಡ್ಕರ್ ಜಯಂತಿ, ಮುಂತಾದುವು ಈ ಸಾಲಿನಲ್ಲಿ ಬರುತ್ತವೆ; ಒಂದೇ ದಿನದ ಕಾರ್ಯಕ್ರಮ ಇಟ್ಟುಕೊಳ್ಳಬಹುದು ಅಥವಾ ಆ ದಿನಕ್ಕೆ ಹೊಂದಿಕೊಂಡು ಅನುಕೂಲವಾದಷ್ಟು ದಿನ ಕಾರ್ಯಕ್ರಮ ಇಟ್ಟುಕೊಳ್ಳಬಹುದು. ಬಸವ ಧರ್ಮೀಯರು ಆದಿಶರಣರು, ಶಿವಯೋಗಿಗಳು ಮುಂತಾದವರ ಜಯಂತಿ ಆಚರಿಸಬೇಕು.

ಬಸವ ಜಯಂತಿಯಂದು ಬೆಳಿಗ್ಗೆ ಬಸವೇಶ್ವರ ಪೂಜಾವ್ರತ ಮಾಡಿ, ತೊಟ್ಟಿಲು ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಪೂಜಾವ್ರತದ ನಂತರ ಭಾವಚಿತ್ರವನ್ನು ತೊಟ್ಟಿಲಿನಲ್ಲಿ ಇಟ್ಟು, ಜೋಗುಳ ಹಾಡುತ್ತ ತೂಗಿ, ಮಂಗಲಾರತಿ ಮಾಡಬೇಕು. ಎಲ್ಲರೂ ಪುಷ್ಪ ಏರಿಸಿ, ಮಂಗಲಾರತಿ ಮಾಡಿ ನಮಸ್ಕರಿಸಿ ಕುಳಿತುಕೊಳ್ಳಬೇಕು. ಸಾಮೂಹಿಕ ಪ್ರಾರ್ಥನೆ ಮಾಡಿ, ಪ್ರಸಾದ ವಿತರಣೆ ಮಾಡಬೇಕು.

ಶರಣರ ಜಯಂತಿಗಳಂದು ತಪ್ಪದೆ ಬಸವ ಧ್ವಜಾರೋಹಣ ಮಾಡಬೇಕು. ಮೆರವಣಿಗೆ ಹೊರಡಿಸುವ ಪೂರ್ವದಲ್ಲಿ, ಅಥವಾ ಸಾರ್ವಜನಿಕ ಸಭಾ ಕಾರ್ಯಕ್ರಮ ಪ್ರಾರಂಭಿಸುವ ಮೊದಲು ಈ ಧ್ವಜಾರೋಹಣ ಕಾರ್ಯಕ್ರಮ ನೆರವೇರಬೇಕು. ಸಂಕಲ್ಪಗೀತೆ–ಧ್ವಜಾರೋಹಣ-ಧ್ವಜಗೀತೆ ಪ್ರತಿಜ್ಞಾವಿಧಿ ಗೀತೆ ಈ ನಾಲ್ಕನ್ನು ಧ್ವಜಾರೋಹಣ ಸನ್ನಿವೇಶದಲ್ಲಿ ನೆರವೇರಿಸುವ ಶಿಸ್ತು ಬೆಳೆಸಿಕೊಳ್ಳಬೇಕು.

ಶರಣರ ಜಯಂತಿ ಆಚರಿಸುವಾಗ ಧ್ವಜಾರೋಹಣ ಕಡ್ಡಾಯ ವಿಧಿಯಾದಂತೆ, ಆಯಾ ಶರಣರನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸಬೇಕು. ಆ ಶರಣರ ಕುರಿತು ಪುಟ್ಟ ಪುಟ್ಟ ವಚನ ಗ್ರಂಥಗಳನ್ನು ಪ್ರಕಟಿಸಿ ಹಂಚಬೇಕು. ಅವರವರ ಶಕ್ತ್ಯಾನುಸಾರ ಶರಣರ ಸಂದೇಶಗಳನ್ನು ಮುದ್ರಿಸಿ ಹಂಚಬಹುದು. ಮೊದಲೇ ವಚನ ಕಂಠ ಪಾಠ ಸ್ಪರ್ಧೆ, ಗಾಯನ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಲೇಖನ ಸ್ಪರ್ಧೆ ಏರ್ಪಡಿಸಿ ಜಯಂತಿಗಳ ಆಚರಣೆಯ ಸಮಯದಲ್ಲಿ ಬಹುಮಾನ ವಿತರಣೆ ಮಾಡಬೇಕು. ಜಯಂತಿ ಆಚರಿಸುವಾಗ ಆ ಶರಣರ ಭಾವಚಿತ್ರಗಳನ್ನು ಕಡ್ಡಾಯವಾಗಿ ಇಡಬೇಕಾದ ವಿಶ್ವಗುರು, ಧರ್ಮಪಿತ ಬಸವಣ್ಣನವರ ಭಾವಚಿತ್ರದೊಡನೆ ಇಟ್ಟು, ಅಲಂಕರಿಸ 'ೀಕು.

ಬೇರೆ ಬೇರೆ ಅತಿಥಿಗಳನ್ನು ಕರೆಸಿ, ಉಪನ್ಯಾಸ ಏರ್ಪಡಿಸಿ, ನಂತರ ಮಂಗಲ ಮಾಡಿ ಪ್ರಸಾದ ವಿತರಣೆ ಮಾಡಬಹುದು. ಈ ರೀತಿಯಲ್ಲಿ ಪ್ರಮುಖ ಶರಣರ ಜಯಂತಿಗಳನ್ನಾದರೂ ನಡೆಸುವ ಪರಿಪಾಠ ಬೆಳೆಸಿಕೊಳ್ಳಬೇಕು. —ಮಾತಾಜಿ

[ಈ ಬಗ್ಗೆ ಹೆಚ್ಚಿನ ಸಲಹೆ-ಸೂಚನೆ ಇದ್ದರೆ ಶರಣ ಬಂಧುಗಳು ಪತ್ರ ಬರೆಯಿರಿ.]

★★

ಕೂಡಲ ಸಂಗಮದಲ್ಲಿ
ಅತಿವೃಷ್ಟಿ ಸಂತ್ರಸ್ತರಿಗೆ ಪರಿಹಾರ ಧನ ವಿತರಣೆ

—ಮಾತಾಜಿ

ಸೆಪ್ಟಂಬರ 30 ರಂದು ನಾವು ರಾಜಸ್ಥಾನದ ಜಯಪುರದಲ್ಲಿದ್ದೆವು. ಮಹಾರಾಷ್ಟ್ರ–ಕರ್ನಾಟಕಗಳಲ್ಲಿ ಭೂಕಂಪದಿಂದ ಬಹಳ ಅನಾಹುತವಾಗಿರುವುದನ್ನು ನಾವು ಇಳಿದುಕೊಂಡಿದ್ದ ಅಮರಾಪುರ ಸಂಸ್ಥಾನದವರು ತಿಳಿಸಿದರು, ಮರುದಿನದ ಪತ್ರಿಕೆಗಳಲ್ಲಿ ಭೂಕಂಪದ ಅನಾಹುತಗಳು ಬಗೆಬಗೆಯಾಗಿ ವಿವರಿಸಲ್ಪಟ್ಟಿದ್ದವು. ಕೈಗೊಂಡ ಪ್ರವಾಸ ಮುಗಿಸಿ ಮರಳಿ ಬರಲು ಅಕ್ಟೋಬರ 8 ಆಯಿತು. ಬೀಡ್ ಜಿಲ್ಲೆಯ ಮಾಂಜರಸುಂಬಾ ಮೇಲೆ ಬರುವಾಗ ಸಮೀಪದ ಲಾತೂರು ಮುಂತಾದಲ್ಲಿ ಆದ ಅನಾಹುತಗಳ ಬಗ್ಗೆ ಜನರು ಬಣ್ಣಿಸುತ್ತಿದ್ದರು. ಮಾಂಜರಸುಂಬಾ ಮೂಲಕವೇ, ಇದು ಹೆದ್ದಾರಿಯ ಮೇಲಿರುವ ಕಾರಣ ಭೂಕಂಪ ಪೀಡಿತ ಪ್ರದೇಶಗಳಿಗೆ ನೆರವು ಹೋದ ಬಗ್ಗೆಯೂ ಜನರು ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ನಾವೂ ಸಹ ನೊಂದ ಜನರಿಗಾಗಿ ಏನನ್ನಾದರೂ ಮಾಡಬೇಕೆಂಬ ಹಂಬಲ ತುಡಿಯುತ್ತಿತ್ತು. ಕೂಡಲ ಸಂಗಮವನ್ನು ತಲುಪುತ್ತಲೇ ಕೈಲಾದ ಕಾರ್ಯವನ್ನು ಕೈಗೊಳ್ಳಬೇಕೆಂದು ಸಂಕಲ್ಪಿಸಿದ್ದೆವು. ಪೂಜ್ಯ ಅಪ್ಪಾಜಿಯವರು ಸಹ ಜತ್ತದಲ್ಲಿ ಪ್ರವಚನವು ನಡೆಯುವ ಕಾಲಕ್ಕೆ ಸಂತ್ರಸ್ತ ಬಂಧುಗಳಿಗೆ ಉದಾರ ನೆರವು ನೀಡುವಂತೆ ಜನರಿಗೆ ಕರೆಕೊಟ್ಟಿದ್ದರಂತೆ.

ಕೂಡಲ ಸಂಗಮವನ್ನು ಅಕ್ಟೋಬರ 8ನೆಯ ತಾರೀಖು ರಾತ್ರಿ 10 ಕ್ಕೆ ತಲುಪಲು ಸಾಧ್ಯವಾಯಿತು. ಅಂದು ಬೆಳಿಗ್ಗೆಯೇ ಶಿಬಿರವು ಆರಂಭವಾಗಿತ್ತು; ಪೂಜ್ಯ ಅಪ್ಪಾಜಿಯವರ ದಿವ್ಯ ನೇತೃತ್ವದಲ್ಲಿ ಕಾರ್ಯಕ್ರಮ ಶುರುವಾಗಿತ್ತು; ಸ್ವಯಂ ಸೇವಕರ ತಂಡವನ್ನು ಕಳಿಸಿಕೊಡೋಣವೇ ಎಂದು ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ ವಿಜಯಕುಮಾರರ ಜೊತೆ ಸಮಾಲೋಚನೆ ಮಾಡಲಾಗಿ ತಿಳಿದುಬಂದುದಿಷ್ಟು. ಭೂಕಂಪವಾದ ಸುದ್ದಿ ತಿಳಿಯುತ್ತಲೇ ಬೀದರದಿಂದ ಸಾಕಷ್ಟು ಸಾಮಗ್ರಿಗಳನ್ನು ಆಹಾರ ಪದಾರ್ಥಗಳನ್ನು ಸಂಗ್ರಹಿಸಿಕೊಂಡು ರಾಷ್ಟ್ರೀಯ ಬಸವ ದಳದವರು ಅತ್ಯಂತ ಹೆಚ್ಚಿನ ಹಾನಿಗೊಳಗಾದ ಮಹಾರಾಷ್ಟ್ರ ರಾಜ್ಯದ ಗ್ರಾಮಗಳಿಗೆ ಧಾವಿಸಿದರಂತೆ. ತ್ವರಿತಗತಿಯಲ್ಲಿ ಅವರು ಧಾವಿಸಲು ಕಾರಣ ಮೂರು ; ಒಂದು, ನೊಂದವರಿಗೆ ಬೇಗನೆ ನೆರವು ನೀಡಬೇಕೆಂಬುದು. ಎರಡು, ಕಿಲಾರಿ ಮುಂತಾದ ಗ್ರಾಮಗಳು ಗಡಿನಾಡು ಗ್ರಾಮಗಳಾಗಿದ್ದು ಬೀದರ ಜಿಲ್ಲೆಯ

ಜನರೊಡನೆ ಬಹಳ ಸಂಬಂಧ ಇರುವುದು. ಮಾರು, ಹಾನಿಗೊಳಗಾದ ಗ್ರಾಮಗಳೆಲ್ಲ ಹೆಚ್ಚಾಗಿ ಲಿಂಗಾಯತ ಧರ್ಮಾನುಯಾಯಿಗಳು ಇರುವ ಗ್ರಾಮಗಳೇ ಆಗಿದ್ದುದು. ಬಂಧುಬಾಂಧವರನ್ನು ಕಳೆದುಕೊಂಡು ಧಾವಿಸುವ ಬೀದರ-ಗುಲಬರ್ಗಾ ಜನರ ಸಂಖ್ಯೆ ಬಹಳವಾಗಿತ್ತಂತೆ. ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು ಸೇವಾಕಾರ್ಯಕ್ಕೆ ತನು - ಮನ - ಧನಗಳಿಂದ ದುಡಿಯಬೇಕೆಂದು ಪತ್ರಿಕೆಗಳ ಮೂಲಕ ಕರೆಕೊಟ್ಟ ರಾಷ್ಟ್ರೀಯ ಬಸವದಳ ಕರ್ನಾಟಕ ರಾಜ್ಯ ಅಧ್ಯಕ್ಷ ಬಸವಕುಮಾರ್ ಪಾಟೀಲರು ಕಾರ್ಯಕರ್ತರ ತಂಡದೊಡನೆ ಭೂಕಂಪ ಪೀಡಿತ ಪ್ರದೇಶಗಳಿಗೆ ಧಾವಿಸಿದರಂತೆ. ಆಗ ಅಲ್ಲಿಯ ಸರ್ಕಾರಿ ಅಧಿಕಾರಿಗಳು ಮಿಲಿಟರಿ ಮತ್ತು ಪೋಲೀಸ್ ಸಿಬ್ಬಂದಿ ಸಾಕಷ್ಟು ಬಂದಿದ್ದು ಅಗತ್ಯ ಕಾರ್ಯಗಳನ್ನು ನಿರ್ವಹಿಸುತ್ತಿರುವುದಾಗಿಯೂ, ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರ ತಂಡಗಳು ಅಗತ್ಯವಿರುವುದಕ್ಕಿಂತಲೂ ಹೆಚ್ಚು ಬಂದುದರಿಂದ, ಅನಾನುಕೂಲತೆ ಉಂಟಾಗುತ್ತಿದೆ ಎಂದರಂತೆ. ಅಗತ್ಯಬಿದ್ದರೆ ಹೇಳಿಕಳಿಸುವುದಾಗಿ ವಿಳಾಸಗಳನ್ನು ದಾಖಲಿಸಿಕೊಂಡರಂತೆ. ಪರಿಹಾರ ಸಾಮಗ್ರಿಗಳನ್ನು ವಿತರಿಸಿ ರಾಷ್ಟ್ರೀಯ ಬಸವ ದಳದವರು ಮರಳಿ ಬಂದರಂತೆ.

ಈ ವಿವರವನ್ನು ತಿಳಿದಾದ ಬಳಿಕ ನಾವು ಬೇರೊಂದು ಚಿಂತನೆಗೆ ತೊಡಗಿದೆವು. "ಭೂಕಂಪದ ಅನಾಹುತಗಳು ಗುಲಬರ್ಗಾ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಅತ್ಯಂತ ತೀವ್ರವಾಗಿ ಆಗಿದ್ದರೂ, ಜನತೆ ತೀರಾ ಸಂಕಷ್ಟಕ್ಕೆ ಒಳಗಾಗಿದ್ದರೂ ಪರಿಹಾರ ಕಾರ್ಯ ಸೂಕ್ತವಾಗಿಲ್ಲ ಮಾತ್ರವಲ್ಲ ಇಡೀ ಜಗತ್ತಿನ ಪರಿಹಾರದ ಮಹಾಪೂರವು ಮಹಾರಾಷ್ಟ್ರದ ಪ್ರದೇಶಗಳತ್ತ ಹರಿಯುತ್ತಿದೆ. ಆದ್ದರಿಂದ ನಾವು ಆದಷ್ಟು ಹಣವನ್ನು ಸಂಗ್ರಹಿಸಿ ಕರ್ನಾಟಕದ ಗ್ರಾಮಗಳಲ್ಲಿಯೇ ವಿತರಿಸೋಣ: ಅಕ್ಟೋಬರ 17ರಂದು ಶಿಬಿರವು ಮುಗಿಯುತ್ತಲೇ 18 ರಂದು ರಾಷ್ಟ್ರೀಯ ಬಸವ ದಳಗಳ ಪ್ರಮುಖ ಕಾರ್ಯಕರ್ತರು ಗ್ರಾಮಗಳ ಪಟ್ಟಿಮಾಡಿ, ಆಯ್ದುಕೊಂಡ ಸ್ಥಳಗಳಿಗೆ ಹೋಗುವುದು." ಎಂದು ನಿರ್ಧರಿಸಲಾಯಿತು. ಸಂಗ್ರಹಿಸಿದ ಹಣವನ್ನು ಮುಖ್ಯಮಂತ್ರಿಗಳ ನಿಧಿಗೆ, ಜಿಲ್ಲಾಧಿಕಾರಿಗಳ ನಿಧಿಗೆ, ಅರ್ಪಿಸುವುದಕ್ಕಿಂತಲೂ ನೇರವಾಗಿ ಸಂತ್ರಸ್ತರಿಗೇ ಹಂಚಿದರೆ ಸಮಾಧಾನವಿರುತ್ತದೆ. ಮತ್ತು ಪಾತ್ರೆ-ಪಡುಗ, ಹೊದೆಯುವ ಚಾದರ ಮುಂತಾದುವನ್ನು ಖರೀದಿಸಿ ಹಂಚಲು ನಿರ್ಣಯ ಕೈಗೊಳ್ಳಲಾಯಿತು. ಶಿಬಿರದಲ್ಲಿ ಈ ನಿರ್ಣಯವನ್ನು ಸಾರುತ್ತಲೇ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಬಸವ ಧರ್ಮ ಪೀಠದಿಂದ ಐದು ಸಾವಿರದ ಒಂದು, ಪೂಜ್ಯ ಸದಾನಂದ ಪ್ರಭುಸ್ವಾಮಿಗಳು ಸಾವಿರದ ಒಂದು ರೂಗಳನ್ನು ನೀಡಿದರು. ಕೆಲವು ರಾಷ್ಟ್ರೀಯ ಬಸವ ದಳಗಳವರು ನೇರವಾಗಿ ಆಗಲೇ ಅಲ್ಲಲೇ ಕೊಟ್ಟಿದ್ದರು. ಉಳಿದವರು ವಾಗ್ದಾನ ಮಾಡಿದ ಹಣ ೧೫೦೦೦_೦೦ ರೂ ಆಯಿತು. 18-10-93 ರಂದು ಧೂಳಖೇಡ, ಉಮರಾಣಿ ಮುಂತಾದ ಗ್ರಾಮಗಳಿಗೆ ತೆರಳಲು ಸಿದ್ಧತೆ ನಡೆದಿತ್ತು.

ಬಿಜಾಪುರ ಜಿಲ್ಲೆಯಲ್ಲಿ ಅತಿವೃಷ್ಟಿ

ಬಿಜಾಪುರ ಜಿಲ್ಲೆಯಲ್ಲಿ ಅದೂ ಕೂಡಲ ಸಂಗಮ, ಹುನಗುಂದ, ಇಳಕಲ್ ಇತ್ಯಾದಿ ಸ್ಥಳಗಳಲ್ಲಿ ಮಳೆಯು ವಿಪರೀತವಾಗಿ ಸುರಿಯತೊಡಗಿತು. ಬಿಟ್ಟೂ ಬಿಡದೆ ಮೂರು ದಿವಸಗಳ ಕಾಲ ಸುರಿದ ಮಳೆಯಿಂದಾಗಿ ವಿಪರೀತ ಅನಾಹುತದ ವರದಿಗಳು ಬಂದವು. ನದಿಗಳ ಪ್ರವಾಹ ಏರಿತು ; ಹಳ್ಳಿಗಳಲ್ಲಿ ಮನೆಗಳು ಕುಸಿದವು, ಗ್ರಾಮಗಳು ಜಲಾವೃತವಾದವು. ಕೂಡಲ ಸಂಗಮದಲ್ಲೇ ಎಷ್ಟೋ ಜನ ನಿರ್ವಸಿತರಾಗಿ ಸೊಸೈಟಿ ಕಟ್ಟಡ, ಶಾಲೆ, ಹಾಸ್ಟೆಲುಗಳಲ್ಲಿ ಆಶ್ರಯಪಡೆದ ಸುದ್ದಿ ತಲ್ಪಿತು. ನಮಗೆ ಧರ್ಮ ಸಂಕಟ ಪ್ರಾರಂಭವಾಯಿತು. ಇದ್ದೂರು ಮತ್ತು ಸಮೀಪದವರು ತೀವ್ರವಾದ ಸಂಕಷ್ಟಕ್ಕೆ ಒಳಗಾದಾಗ ಸಂಗ್ರಹಗೊಂಡ ಹಣವನ್ನು ದೂರಕ್ಕೆ ಒಯ್ಯುವುದು ಸೂಕ್ತವೆ ? ಇಲ್ಲಿಯವರ ನೆರವಿಗೆ ಬರುವವರಾರು ? ಹೀಗೆಲ್ಲ ಆಲೋಚಿಸಿ ಸೋಮವಾರ ದಿ. 18-10-93 ರಂದು ಕೈಗೊಳ್ಳಬೇಕಾದ ಪ್ರವಾಸ ರದ್ದುಪಡಿಸಿ ಒಂದು ಸಭೆ ಕರೆಯಲಾಯಿತು. ಅಂದು ಇನ್ನೂ ಉಳಿದಿದ್ದ ರಾಷ್ಟ್ರೀಯ ಬಸವ ದಳದ ಸದಸ್ಯರು ಮತ್ತು ಸ್ಥಳೀಯ ಪ್ರಮುಖರು ಸಮಾವೇಶವಾದ ಸಭೆಯಲ್ಲಿ ದೀರ್ಘಾಲೋಚನೆ ಮಾಡಲಾಯಿತು. ಎಲ್ಲರ ಅಭಿಪ್ರಾಯವೂ ಒಂದೇ ರೀತಿಯಲ್ಲಿ ಮೂಡಿಬಂದಿತು. ಅತಿವೃಷ್ಟಿಯಿಂದ ಹಾನಿಗೊಳಗಾದ ಮನೆಗಳನ್ನು ಸಂದರ್ಶಿಸಿ ಬರಲು ಒಂದು ಸಮಿತಿಯನ್ನು ರಚಿಸಲಾಯಿತು. ಮರುದಿವಸ ಶರಣ. ಬಸವಕುಮಾರ ಪಾಟೀಲ, ಶರಣ. ಡಿ. ಎಸ್. ವಿಜಯಕುಮಾರ, ಶರಣ. ವೀರಣ್ಣ ಶಿವಯೋಗಿ, ಶರಣ, ವೀರಣ್ಣ ಬನಹಟ್ಟಿ ಇವರುಗಳನ್ನು ಸಮೀಕ್ಷೆಗಾಗಿ ಕಳಿಸಲಾಯಿತು. ಅವರುಗಳು ಕೂಡಲ ಸಂಗಮ, ಚೌಡಕಮಲದಿನ್ನಿ, ಕೆಂಗಲ್, ಕಜಗಲ್ ಗ್ರಾಮಗಳನ್ನು ಸಂದರ್ಶಿಸಿ ಪಟ್ಟಿಯನ್ನು ಸಿದ್ಧಪಡಿಸಿದರು. ಲಭ್ಯವಿರುವ ಹಣವನ್ನು ಕೊಡಲು ಸಾಧ್ಯವಾಗುವಂತೆ ನಾಲ್ಕು ಗ್ರಾಮಗಳಿಂದ 56 ಜನರನ್ನು ಆಯ್ಕೆ ಮಾಡಲಾಯಿತು. ಗರಿಷ್ಠ ಮೊತ್ತ 500 ರೂ. ಕನಿಷ್ಟ ಮೊತ್ತ 200 ರೂ. ಮನೆಗಳ ರಿಪೇರಿಗಳನ್ನು ಗಮನದಲ್ಲಿಟ್ಟುಕೊಂಡು ಈ ಮೊತ್ತ ನಿರ್ಧರಿಸಿ, ಮಂಗಳವಾರ ದಿ. 19-10-93 ರಂದು ಮಹಾಮನೆ ಮಹಾಮಠಕ್ಕೆ ಬರಲು ಆಯ್ದ ಜನರಿಗೆ ತಿಳಿಸಲಾಯಿತು.

ಸಾಮೂಹಿಕ ಪ್ರಾರ್ಥನೆ ಮಾಡಿಸಿ, "ಈಗ ಕೊಡುತ್ತಿರುವ ಪರಿಹಾರ ಧನವು ಅತ್ಯಂತ ಪವಿತ್ರವಾದ ಬಸವ ಪ್ರಸಾದವೆಂದು, ಸತ್ಯ ಶುದ್ಧ ಕಾಯಕ ಮಾಡಿ ದಾಸೋಹಂ ಭಾವದಿಂದ ಶರಣರು ಈ ಹಣ ಕೊಟ್ಟಿರುವರೆಂದು. ಇದನ್ನು ದುರ್ಬಳಕೆ ಮಾಡಬಾರದು" ಎಂದು ನಾನು ಬೋಧೆ ಮಾಡಿದೆ. ಪುರಪ್ರಮುಖರಾದ ಜಿ. ಜಿ. ಪಾಟೀಲರು 'ಪರಿಹಾರ ನಿಧಿ ಸರ್ಕಾರದಿಂದ ಬಂದುದಲ್ಲ. ಬಸವ ಧರ್ಮ ಪೀಠ ಮತ್ತು

ಇದರ ಸದ್ಭಕ್ತರು ಹೃದಯಪೂರ್ವಕವಾಗಿ ಕೊಟ್ಟುದು'. ಎಂದು ವಿವರಿಸಿದರು. ಶರಣ; ಬಸವಕುಮಾರ್ ಪಾಟೀಲರು, ಪೂಜ್ಯ ಬಸವಾನಂದ ಸ್ವಾಮಿಗಳು, ಶರಣೆ. ಅನ್ನಪೂರ್ಣ ಹಂಗರಗಿ ಮಾತನಾಡಿದರು. ಪೂಜ್ಯ ಸದಾನಂದ ಪ್ರಭು ಸ್ವಾಮಿಗಳು ಮಾತನಾಡಿ, ಬಸವ ಧರ್ಮ ಪೀಠವು ಈಗ ಕೊಡುತ್ತಿರುವ ಪರಿಹಾರ ಧನ ಸಾಂಕೇತಿಕ. ಇದನ್ನು ಪಡೆಯುತ್ತಿದ್ದೀರಿ ಇಲ್ಲಿ ನಿರಂತರವಾಗಿ ಜ್ಞಾನದಾಸೋಹವು ನಡೆಯುತ್ತಿದೆ ಅದನ್ನೂ ಸದುಪಯೋಗ ಮಾಡಿಕೊಳ್ಳಿರಿ.' ಎಂದು ಕರೆ ನೀಡಿದರು,

ಪೀಠಾಧೀಶರಾದ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಗಳು ಆಶೀ-ರ್ವಚನ ನೀಡಿದರು, "ಈ ಪರಿಹಾರ ಹಣದ ಜೊತೆಗೆ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನೂ ನಿಮಗೆಲ್ಲ ಕೊಡುತ್ತಿದ್ದೇವೆ. ಮಂತ್ರಪುರುಷ ಬಸವಣ್ಣನವರ ಭಾವಚಿತ್ರ ನಿಮ್ಮ ಮನೆಯನ್ನು ಪ್ರವೇಶಿಸುತ್ತಿದೆ ಎಂದರೆ ಇನ್ನು ಮುಂದೆ ಯಾವ ಸಂಕಷ್ಟಗಳೂ ನಿಮ್ಮ ಮೇಲೆ ಎರಗುವುದಿಲ್ಲ. ನೀವು ಸದಾಚಾರ ಸಂಪನ್ನರಾಗಿ ದಿನ ನಿತ್ಯ ಪೂಜಿಸಿ, ಜೀವನವನ್ನು ಸಾರ್ಥಕ ಪಡಿಸಿಕೊಳ್ಳಿರಿ." ಕಾರ್ಯಕ್ರಮವನ್ನು ಮಂಗಲಗೊಳಿಸಿದ ಬಳಿಕ ಪರಿಹಾರ ಧನವನ್ನು ಫಲಾನುಭವಿಗಳ ಸಹಿ ಪಡೆದು ವಿತರಿಸಲಾಯಿತು. ಬಸವ ಕಿರಣ ಪತ್ರಿಕೆಯ ಸಂಪಾದಕ ಶರಣ. ವಿಜಯಕುಮಾರರು ಶರಣು ಸಮರ್ಪಣೆ ಮಾಡಿದರು. ತೀವ್ರವಾದ ಸಂಕಷ್ಟಕ್ಕೆ ಒಳಗಾದ ಜನರು ಕೃತಜ್ಞತಾ ಭಾವದಿಂದ ಹಣವನ್ನು, ಭಕ್ತಿಯಿಂದ ಬಸವ ಗುರುವಿನ ಭಾವಚಿತ್ರವನ್ನು ಪಡೆದರು. ಎಲ್ಲರ ಸಂಕಷ್ಟ ಕಳೆಯಲು ಸಾಧ್ಯವಿಲ್ಲದಿದ್ದರೂ ಕಷ್ಟ ಪೀಡಿತರಿಗೆ ಸ್ವಲ್ಪವಾದರೂ ಆಸರೆಯಾಗಲು ಸಾಧ್ಯವಾಯಿತಲ್ಲಾ ಎಂಬ ಸಮಾಧಾನ ಮತ್ತು ಧರ್ಮಪೀಠದಿಂದ ಕೊಟ್ಟ ಮೊತ್ತ ಎಷ್ಟೇ ಇರಲಿ ಸಂತ್ರಸ್ತರಿಗೆ ನೇರವಾಗಿ ಮುಟ್ಟಿತಲ್ಲಾ ಎಂಬ ಸಂತೃಪ್ತಿ ನಮಗೂ ಉಂಟಾಯಿತು.

ಬಡವರ ಪ್ರಾಮಾಣಿಕತೆ

ಓರ್ವ ವ್ಯಕ್ತಿ, ಹೆಸರು ನಾಗಪ್ಪ ಮಾಯಣ್ಣನವರು ಇವರಿಗೆ ಹಾನಿ ಹೆಚ್ಚಾಗಿ-ದ್ದುದರಿಂದ 400 ರೂ ನಿರ್ಧರಿಸಲಾಗಿದ್ದಿತು. ಆ ವ್ಯಕ್ತಿ ಹೇಳಿ ಕಳಿಸಿದರು, "ನಾನು ಬಡವನು ನಿಜ, ಆದರೆ ನನಗಿಂತಲೂ ದಯನೀಯ ಸ್ಥಿತಿಯಲ್ಲಿ ಇಬ್ಬರಿದ್ದಾರೆ. ಮನೆಯಲ್ಲಿ ಅಕ್ಕನ ಹೆರಿಗೆಯಾಗಿದೆ. ಮನೆ ಕುಸಿದಿದೆ. ಅಂಥವರು ಇಬ್ಬರಿಗೆ ನನಗೆ ಒದಗಿಸಿರುವ ಹಣ ಕೊಡಿರಿ." ಎಂದು ಇಬ್ಬರ ಹೆಸರು ಸೂಚಿಸಿದರು. ಈ ಮಾತಿನಿಂದ ನಮಗೆ ಅಚ್ಚರಿಯಾಯಿತು. ಆರ್ಥಿಕವಾಗಿ ಬಡವರಿದ್ದರೂ ಹೃದಯವಂತಿಕೆಗೆ ಬಡತನವಿಲ್ಲವಲ್ಲ ಎಂದು ಅವರು ಸೂಚಿಸಿದ ಇಬ್ಬರಿಗೆ ಇನ್ನೂ ಐವತ್ತು-ಐವತ್ತು ರೂ. ಹೆಚ್ಚು ಮಾಡಿ, ಒಬ್ಬೊಬ್ಬರಿಗೆ 250 ರೂ. ಕೊಟ್ಟೆವು.

ಹೆಚ್ಚಿನ ಜನರಿಂದ ಬೇಡಿಕೆ

ದಿ. 19-10-1993 ರಂದು ಪರಿಹಾರ ಧನವನ್ನು ಬಸವ ಧರ್ಮ ಪೀಠಾಧೀ-ಶರು ವಿತರಿಸುವ ಸಂಗತಿ ತಿಳಿದು, ಮನೆಗಳು ಬಿದ್ದಿರುವ ಅರ್ಹ ಜನರಿಗೆ ನೆರವು ಲಭ್ಯವಾಗಿದೆಯೆಂದೂ, ಇನ್ನೂ ಅಷ್ಟು ಜನರು ತೀವ್ರ ಸಂಕಷ್ಟದಲ್ಲಿದ್ದೇವೆಂದು ಅನೇಕರು ಬಂದರು. ಸದಾ ಜೋಳಿಗೆ (ದೇಣಿಗೆ)ಯ ಮೇಲೆಯೇ ಸಂಸ್ಥೆ ನಡೆಸುವ ನಮ್ಮ ಬಳಿಯೂ ಹಣವು ಮುಗಿದುಹೋಗಿದ್ದಿತು. ನಾವು ತಿಳಿಸಿದೆವು, 'ಕಲ್ಯಾಣ ಕಿರಣ ಮತ್ತು ಬಸವ ಕಿರಣ'ದ ಮೂಲಕ ನಾವು ಜನರಿಗೆ ತಿಳಿಸುವೆವು. ನಿಮ್ಮ ಹೆಸರುಗಳನ್ನು-ವಿಳಾಸವನ್ನು ಇಲ್ಲಿ ಬರೆಸಿ ಹೋಗಿರಿ. ಯಾರಾದರೂ ದಾನಿಗಳು ಹಣ ಕಳಿಸಿದರೆ ನಿಮ್ಮನ್ನು ಕರೆಸಿ ಕೊಡಲಾಗುವುದು. ಅದರಂತೆಯೇ ಕೆಲವರು ಹೆಸರುಗಳನ್ನು ಬರೆಸಿಹೋಗಿದ್ದಾರೆ. ಸ್ವಯಂ ಪ್ರೇರಣೆಯಿಂದ ದಾನಿಗಳು ಹಣವನ್ನು ಅತಿವೃಷ್ಟಿ ಪೀಡಿತರಿಗೆಂದೇ ಕಳಿಸಿಕೊಟ್ಟರೆ ಅದನ್ನು ಸ್ವೀಕರಿಸಿ ವಿತರಿಸಲಾಗುವುದು.

ಕಾಯಂ ನಿಧಿ ಸ್ಥಾಪನೆ

ಇಂತಹ ತುರ್ತು ಪ್ರಸಂಗಗಳಲ್ಲಿ ಸಾರ್ವಜನಿಕರಿಗೆ ನೆರವು ನೀಡಲೆಂದು ಬಸವ ಧರ್ಮ ಪೀಠದ ಆಶ್ರಯದಲ್ಲಿ ಒಂದು ನಿಧಿಯನ್ನು ಸ್ಥಾಪಿಸುವುದು ಒಳ್ಳೆಯದೆಂದು ಶರಣ ಡಿ. ಎಸ್. ವಿಜಯಕುಮಾರ್ ಸೂಚಿಸಿದರು. ಬಸವ ತತ್ತ್ವ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ನೀಡಿದ ಈ ಸಲಹೆ ಎಲ್ಲರಿಗೂ ಒಪ್ಪಿತವಾಯಿತು. ಭಾದ್ರಪದ ಮಾಸದ (ಗಣೇಶ) ಚವತಿಯಂದು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಎಲ್ಲೆಡೆ ಆಚರಿಸಿ, ಅಂದು "ಗುರು ಕಾಣಿಕೆ" ಸಂಗ್ರಹಿಸಿ, ಅದನ್ನು ರಾಷ್ಟ್ರೀಯ ಬಸವ ದಳದ ಕೇಂದ್ರ ಸಂಸ್ಥೆಗೆ ಕಳಿಸಿ, ಇದನ್ನು 'ಪರಿಹಾರ ನಿಧಿ'ಯಲ್ಲಿ ಜಮಾಮಾಡಿ ಅಗತ್ಯಬಿದ್ದವರಿಗೆ, ಅಗತ್ಯ ಒದಗಿದಾಗ ತಕ್ಷಣವೇ ಸಹಾಯ ಮಾಡುವುದು ಬಹಳ ಸೂಕ್ತವೆಂದು ಎಲ್ಲ ಶರಣರು ಒಕ್ಕೊರಲಿನಿಂದ ನಿರ್ಣಯ ಕೈಗೊಂಡರು.

ಪ್ರಾಣದ ಹಂಗುದೊರೆದು ಜನರನ್ನು ರಕ್ಷಿಸಿದ ಯಲಗೂರಪ್ಪ ಭಜಂತ್ರಿ

ಇತ್ತೀಚಿನ ಅತಿವೃಷ್ಟಿಯಿಂದ ಎಂದೂ ಕಂಡರಿಯದ ಮಹಾಪೂರ ಬಂದು ಮಲಪ್ರಭಾ ನದಿಯನ್ನು ಪ್ರವೇಶಿಸಿದಾಗ ಅನೇಕ ಗ್ರಾಮಗಳು ಪ್ರವಾಹದಿಂದ ಸುತ್ತುವರಿಯಲ್ಪಟ್ಟವು. ಅಂತಹ ಗ್ರಾಮಗಳಲ್ಲಿ ಪಾಪನಾಳ ಒಂದು. ನದಿಯ ಏರುವ ಸೂಚನೆ ಕಾಣುತ್ತಲೇ ಅನೇಕರು ಅಪಾಯದ ಪ್ರದೇಶದಿಂದ ಹೊರನಡೆದರಾದರೂ

ಕೆಲವರು ಉದಾಸೀನ ಮಾಡಿದರು. ಎಲ್ಲಾದರೂ ಇಷ್ಟು ಎತ್ತರಕ್ಕೆ ಬರುವುದುಂಟೇ ಎಂದು ಹಗುರವಾಗಿ ಭಾವಿಸಿದರು. ಪ್ರವಾಹದ ನೀರು ಏರಿ ಎದೆಗುಂದಿದಾಗ ದಿಗ್ಬಂಧಿತರು ಮತ್ತು ಪಾರಾದವರು ಉಭಯತರಲ್ಲೂ ಆಕ್ರಂದನ. ಸುದ್ದಿ ತಿಳಿದು ನದಿದಾಟಿಸಲು ಜನರನ್ನು ಕಟಗೂರಿನ ನೀಲಪ್ಪಗೌಡರು ಹುಡುಕ ತೊಡಗುತ್ತಲೇ ರಾತ್ರಿಯ ವೇಳೆಯಲ್ಲಿ ಅಂಥ ಸಾಹಸಕ್ಕೆ ಕೈಹಾಕಲು ಯಾರೂ ಸಿದ್ಧರಿಲ್ಲ; ಜೀವದ ಹಂಗುದೊರೆದು ಉಪಕಾರಕ್ಕೆ ಸಿದ್ಧವಾದವನು ಕೂಡಲ ಸಂಗಮದ ಯಲಗೂರಪ್ಪ ಭಜಂತ್ರಿ. ಮೀನು ಹಿಡಿಯುವ ಬುಟ್ಟಿ (ದೋಣಿ)ಯನ್ನು ಜೀಪಿನಲ್ಲಿ ತೆಗೆದುಕೊಂಡು ನೀಲಪ್ಪ ಗೌಡರು ಮತ್ತು ಸಂಗಡಿಗರು ಪಾಪನಾಳ ತಲುಪಿದಾಗ ರಾತ್ರಿ 12 ಗಂಟೆ. ಬಟ್ಟೆಯ ಪಂಜಿನ ಬೆಳಕಿನಲ್ಲಿ ಬುಟ್ಟಿ ಒಯ್ದು ಜಲಾವೃತ ಪ್ರದೇಶದಲ್ಲಿ ಸಿಕ್ಕಿದ 26 ಜನರನ್ನು ಯಲಗೂರಪ್ಪ ಭಜಂತ್ರಿ ತಂದು ಸುರಕ್ಷಿತ ಪ್ರದೇಶಕ್ಕೆ ಬಿಟ್ಟಾಗ ಎಲ್ಲರಲ್ಲೂ ಕೃತಜ್ಞತಾಭಾವ. ಇಂಥ ಸಾಹಸಿಯ ಪ್ರಯತ್ನವನ್ನು ಶ್ಲಾಘಿಸಿ ಬಸವ ಧರ್ಮ ಪೀಠದಿಂದ 125ರೂಗಳ ಬಹುಮಾನವನ್ನು ಬಸವ ಭಾವಚಿತ್ರದೊಡನೆ ನೀಡಲಾಯಿತು.

ಪರಿಹಾರ ಧನ ಪಡೆದವರು

1. ದ್ಯಾಮವ್ವ ತಳವಾರ, ಸಂಗಮ
2. ಸಂಗಪ್ಪ ಚಲುವಾದಿ "
3. ಮುತ್ತಣ್ಣ ಪತ್ತಾರ "
4. ಜೈನಮ್ಮ ದಂಡಿನ "
5. ರಾಮಣ್ಣ ಮೂಲೀಮನಿ "
6. ಶಾಂತವ್ವ ಚೌಧರಿ "
7. ತೋಟಪ್ಪ ಮಾಟೂರು "
8. ಯಲ್ಲಪ್ಪ ಮಾಯನವರ "
9. ಬಸವರಾಜ ಭಗವತಿ "
10. ಬಸಪ್ಪ ಗಾಣಿಗೇರ "
11. ಸಿದ್ಧರಾಮಯ್ಯ ಹಿರೇಮಠ "
12. ನಾಗಪ್ಪ ಭಜಂತ್ರಿ "
13. ವಾರಪ್ಪ ಭಜಂತ್ರಿ "
14. ಸಂಗಪ್ಪ ಹೊಲೇರ "
15. ಬಸಪ್ಪ ಕೊಪ್ಪದ "
16. ಯಮುನಪ್ಪ ಚಲುವಾದಿ "
17. ಮಹಾಂತಪ್ಪ ಚಲುವಾದಿ ಸಂಗಮ
18. ಯಲ್ಲವ್ವ ಅಂಟರದಾನಿ "
19. ಮುದಿಯಪ್ಪ ಅಂಬಿಗೇರ "
20. ಮಲ್ಲಯ್ಯ ಹಿರೇಮಠ "
21. ಈರಣ್ಣ ಗಣಾಚಾರಿ "
22. ಸರಿಗಪ್ಪ ಭಜಂತ್ರಿ "
23. ಲಕ್ಷ್ಮಣ ಭಜಂತ್ರಿ "
24. ವಿರುಪಾಕ್ಷಪ್ಪ ಗೌಡರ "
25. ಶಿವಬಸಪ್ಪ ಮಠದ "
26. ಭರಮವ್ವ ಮಾದರ, ಕಜಗಲ್
27. ಸಂಗಪ್ಪ ಮಂಕಣಿ "
28. ಕೆಂಚವ್ವ ಬೆಳಗಲ್ ಕೆಂಗಲ್
29. ನಿಂಬವ್ವ ಕೋರಿ, "
30. ಮಲ್ಲಪ್ಪ ಬಾಡ್ರ "
31. ಬಸಪ್ಪ ಗೌಡರ, ಚೌಡಕಮಲದಿನ್ನಿ
32. ದುರ್ಗಪ್ಪ ಮಾದರ "

33. ರುದ್ರಯ್ಯ ಕರಕಂಟಿ ಚೌಡಕಮಲದಿನ್ನಿ
34. ಮಹಾಂತಯ್ಯ ಶಿವಮೂರ್ತಿಮಠ, ಸಂಗಮ
35. ಯಲ್ಲವ್ವ ಚಲುವಾದಿ "
36. ಲಕ್ಷ್ಮಣ ಚಲುವಾದಿ "
37. ರಾಮಣ್ಣ ಹೆಳವರ "
38. ಯಲ್ಲವ್ವ ವಡ್ಡರ "
39. ದುರ್ಗಪ್ಪ ಮಾದರ "
40. ಮುರುಗಯ್ಯ ರೇವಡಿಹಾಳ "
41. ಬಂದಗಿಸಾಬ ವಾಲೀಕಾರ "
42. ಗುಂಡಪ್ಪ ಗೊರಚಿಕನವರ "
43. ರಾಜಸಾಬ ಪಿಂಜಾರ "
44. ಶಿವಗಂಗವ್ವ ಕುಂಬಾರ ಸಂಗಮ
45. ನಾಗಪ್ಪ ಹಡಪದ "
46. ಶೇಖರಯ್ಯ ಹಿರೇಮಠ "
47. ರುದ್ರಯ್ಯ ಉಕ್ಕಲಿ "
48. ಚನ್ನಮ್ಮ ಜಾನಕೀಮಠ "
49. ಬಸಯ್ಯ ಗುಡಿ "
50. ಮೋದಿನವ್ವ ಕಟಗರ "
51. ಗಂಗಪ್ಪ ಚೌಧರಿ "
52. ನಾಗಪ್ಪ ಭಜಂತ್ರಿ "
53. ಶಾಂತವ್ವ ಭಜಂತ್ರಿ "
54. ಚಂದ್ರವ್ವ ಚಲುವಾದಿ "
55. ಯಮುನಪ್ಪ ಗೌಡ್ರು "
56. ದ್ಯಾಮವ್ವ ವಡ್ಡರ "

ಲಿಂಗೈಕ್ಯ ದಿನಾಚರಣೆ ಆಹ್ವಾನ ಪತ್ರಿಕೆಗೆ ವಿಶೇಷ ಬ್ಲಾಕು.



ಶರಣ ಬಂಧುಗಳೇ,

ಬಸವ ಧರ್ಮೀಯರು ಲಿಂಗೈಕ್ಯರಾದಾಗ ಗಣಾರಾಧನೆಯ ಆಹ್ವಾನ ಪತ್ರಿಕೆ ಮುದ್ರಿಸಲಾಗುವದಷ್ಟೆ. ಮಧ್ಯದಲ್ಲಿ ಸ್ಥಾವರಲಿಂಗ ಅತ್ತ–ಇತ್ತ ನಂದಿ ಚಿತ್ರಗಳನ್ನು ಮುದ್ರಿಸುವುದು ರೂಢಿಯಲ್ಲಿದೆ. ಕೈಲಾಸವಾಸಿ ಶಿವಲೋಕ ವಾಸಿ, ಶಿವ ಸಾಯುಜ್ಯ ಹೊಂದಿದರು ಎಂಬ ಪ್ರಯೋಗಗಳು ಲಿಂಗಾಯತ ಧರ್ಮದ ಹಿನ್ನೆಲೆಯಲ್ಲಿ ಸೈದ್ಧಾಂತಿಕವಾಗಿ ತಪ್ಪು. ಆದ್ದರಿಂದ ಲಿಂಗೈಕ್ಯರಾದರು, ಬಯಲಾದರು ಎಂಬುದನ್ನು ತಾತ್ತ್ವಿಕವಾಗಿ ಬಿಂಬಿಸುವಂಥ ಒಂದು ಚಿತ್ರವನ್ನು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರು ಸಂಯೋಜಿಸಿದ್ದಾರೆ. ಇದರ ಬ್ಲಾಕುಗಳು ಸಿದ್ಧವಾಗಿವೆ. ಇದರ ಬೆಲೆ : 30-00 ರೂ. ಆಗುವುದು. ರಾಷ್ಟ್ರೀಯ ಬಸವ ದಳಗಳವರು ಒಂದೊಂದು ಬ್ಲಾಕು ಇರಿಸಿಕೊಂಡು, ಆಗತ್ಯವಿದ್ದವರಿಗೆ ಕೊಡಬೇಕು. ಮುದ್ರಣಾಲಯಗಳವರೂ ಬ್ಲಾಕುಗಳನ್ನು ಇರಿಸಿಕೊಂಡು ಗ್ರಾಹಕರಿಗೆ ಅಗತ್ಯಬಿದ್ದಾಗ ಒದಗಿಸಬೇಕು. ಮಾದರಿಯನ್ನು ಮುದ್ರಿಸಲಾಗಿದೆ.

—**ಸೋದರಿ ನೀಲಾಂಬಿಕೆ,** ಬಸವ ಮಂಟಪ.
2035, 20ನೇ ಮುಖ್ಯ ರಸ್ತೆ, 2ನೇ ಬ್ಲಾಕು, ಕಾರ್ಡ್‌ರಸ್ತೆ, ರಾಜಾಜಿನಗರ,
ಬೆಂಗಳೂರು-560010. ದೂರವಾಣಿ : 3325335

ಸಮಸ್ಯೆಯ ಚಿತ್ರಣ

ಇವರಿಂದ :

ಜಿ. ಎಮ್. ಪಾಟೀಲ.
ಕಲ್ಯಾಣ ನಗರ,
೫ ನೇ ಅಡ್ಡರಸ್ತೆ, ಧಾರವಾಡ-೭ ದಿ. ೭-೯-೧೯೯೩

ಪೂಜ್ಯ ಶ್ರೀ ಜಗದ್ಗುರು ಮಾತಾಜಿ ಅವರಿಗೆ ಅನಂತ ಶರಣು ಶರಣಾರ್ಥಿಗಳು-

ಬಹಳ ದಿವಸಗಳ ತರುವಾಯದಲ್ಲಿ ತಮಗೆ ಈ ಪತ್ರ ಬರೆಯುತ್ತಿದ್ದೇನೆ. ನನ್ನ ಸಮಸ್ಯೆಗಳನ್ನು ಬಿನ್ನವಿಸಿ ಅದಕ್ಕೆ ಪರಿಹಾರಗಳನ್ನು "ಕಲ್ಯಾಣ ಕಿರಣ" ಪತ್ರಿಕೆಯಲ್ಲಿ ಪ್ರಕಟಿಸಿ ತಿಳಿಸಬೇಕಾಗಿ ಅತ್ಯಂತ ನಮ್ರ ವಿನಂತಿ.

ಬಸವ ಧರ್ಮ ರಕ್ಷಣೆಯ ಕುರಿತು ಬಹಳ ದಿವಸಗಳಿಂದ ಚಿಂತನೆ ನಡೆಸಿದ್ದೇನೆ. ಈ ಕುರಿತು ನಾಲ್ಕು ಲೇಖನಗಳನ್ನು ಬೀದರಿನ ಉತ್ತರ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಲು ಸಂಪಾದಕರನ್ನು ವಿನಂತಿಸಿಕೊಂಡಿದ್ದೆನು. ಅವರು ಎರಡನ್ನು ಪ್ರಕಟಿಸಿದರು. ಆ ನಂತರ ಜಾತಿವಾದಿ ಕಳ್ಳ ಹಾದರಿಗರು ಶೈವ ಪದಲಿಂಗೀ ಬ್ರಾಹ್ಮಣರು ಅದಕ್ಕೆ ಕಲ್ಲು ಹಾಕಿದಂತೆ ಕಾಣುತ್ತದೆ. ಅವರು ಮುಂದಿನ ಲೇಖನಗಳನ್ನು ಪ್ರಕಟಿಸುವುದನ್ನು ಬಿಟ್ಟು ಬಿಟ್ಟರು. ಹೀಗಾದರೆ ಬಸವ ಧರ್ಮಕ್ಕೆ ಗತಿಯೇನು ಅದರ **ರಕ್ಷಕರಾರು ?** ಎಂತಿಂತು ರಕ್ಷಿಸುವ ಕಾರ್ಯವನ್ನು ಮಾಡುವರು. ಏಕೆಂದರೆ ಅದಕ್ಕೆ ನಾನೂ ನೆರವಾಗಬೇಕೆಂದಿದ್ದೆನು. ಇಂದಿನ ನನ್ನ ಕೊನೆಯ ದಿನಗಳಲ್ಲಿ (೮೪ ವರ್ಷ ಮಿಕ್ಕಿದ) **ಯಾರು ಮುಂದಾಗುವರು ? ಏನು ಮಾಡುವರು ?**

೧) ಬಸವ ಧರ್ಮವನ್ನು ಘಾತಿಸುವ ಜಂಗಮವು ಅಸಂಖ್ಯವಾಗಿದೆ. ಪರಿಪರಿಯ ತಂತ್ರಗಳನ್ನು ಹೂಡುತ್ತಿವೆ. ಬಸವ ಧರ್ಮಕ್ಕೆ ಬಸವ ತತ್ತ್ವವೆಂದು ಹೇಳುತ್ತದೆ. ಅಂದರೆ ಅದು ಆಚರಣೆಯ ಧರ್ಮವಲ್ಲ, ಭಂಡ ಬೂಟಾಟಿಕೆಯ ಮಾತುಗಳ ಸಮುಚ್ಚಯ, ಅಂದರೆ ಬಾಯಿ ಬ್ರಹ್ಮ ಬಸವಣ್ಣನವರೆ, ತತ್ತ್ವವೆಂದು ಹೇಳದಿರುವಾಗ, ಅವನ್ನು ನಿರೂಪಿಸದಿರುವಾಗ ಇವರು ತತ್ತ್ವವೆಂದು ಯಾವ ಆಧಾರದ ಮೇಲೆ ಹೇಳುವರೊ ತಿಳಿಯದು ಅಂತೂ ಇದು ಧರ್ಮ ಭ್ರಷ್ಟ ಮಾಡುವ ವಿಧಾನ.

೨) ಬಸವಣ್ಣನನ್ನು ಅವನು ಕರುಣಿಸಿದ ಇಷ್ಟಲಿಂಗವನ್ನು ಮರೆಸಲು ದುರ್ಗತಿ ಗೇಡು ಮಾಡಲು, ಶಿವಾನುಭವ ಎಂದು ಅಪದ್ಧ ಅಸಮಂಜಸ ಮಾತುಗಳನ್ನು ಹೇಳುತ್ತಾನೆ. ಶಿವನು ಕೃಷ್ಣನಂತೆ ಲೀಲಾ ಪುರುಷ, ಅವನ ಲೀಲೆಗಳನ್ನು ಹೇಳುವ

ಇಪ್ಪತ್ತೈದು ಪುರಾಣಗಳು ಇವೆ. ಇಂತಹದನ್ನು ಖಂಡಿಸಿ ಜನತೆಯನ್ನು ಭ್ರಾಂತಿಗೊಳ್ಳದಂತೆ ಮಾಡುವವರು **ಯಾರು ?** ಎಂತು.

೩) ಈ ಶಿವದ್ರೋಹಿ ಸ್ವಾಮಿಗಳು ಜಂಗಮವು ಬಸವ ಧರ್ಮದ ವಿಶಿಷ್ಟ ಪದಗಳನ್ನು ಭಂಗಗೊಳಿಸಲು ಶಿವ ಪದವನು ಬಳಸಿ ಅಂಟಿಸಿ, ಉದಾ : ಶಿವಶರಣ, ಶಿವಶರಣೆ, ಶಿವಗಣಾರಾಧನೆ ಮುಂತಾಗಿ.

೪) ಲಿಂಗವಂತರ ಪಂಚ ಆಚಾರಗಳಲ್ಲೊಂದಾದ ಸಮಯಾಚಾರವನ್ನು ಮಾರ್ಪಡಿಸಿ ಶಿವಾಚಾರ ಎಂದು ಹೇಳುತ್ತಾರೆ ಇದರಲ್ಲಿ ಸ್ವಾರ್ಥ ಹುದುಗಿದೆ. ಏನಂದರೆ ಆಯ್ಯಾಚಾರಕ್ಕೆ ಈಗ ಶಿವಾಚಾರ ಎಂದು ಅಪಾರ್ಥ ಕಲ್ಪಿಸುತ್ತಾರೆ. ಪಂಚ ಆಚಾರಗಳೆಲ್ಲವೂ ಲಿಂಗವಂತರಿಗೆಲ್ಲರಿಗೂ ಸಂಬಂಧಿತವಾದವುಗಳು. ಆದರೆ ಜಂಗಮ ಶಾಹಿ ವರ್ಗವು ಇದನ್ನು ಶಿವಾಚಾರ ಎನ್ನುವ ಮೂಲಕ ಈ ಜಂಗಮ ಜಾತಿಗೆನೇ ವಿಧಿತವಾದುದು ಸಂಬಂಧಿತವಾದುದು ಎಂದು ವಿಪರೀತ ಅರ್ಥ ಕಲ್ಪಿಸುತ್ತಾರೆ.

ಚನ್ನಬಸವಣ್ಣನವರ ವಚನಗಳಲ್ಲಿ ಸಮಯಾಚಾರದ ವಿವರಣೆ ಇದೆ. ಅದು ಸಮಯಕ್ಕೆ ಒದಗಿದ ಅತಿಥಿ ಅಭ್ಯಾಗತರಿಗೆ ಆದರ, ಸತ್ಕಾರ ನೀಡುವುದು ಆಗಿದೆ. ಇಂತಹ ವಿಪರೀತಗಳನ್ನು ಹೋಗಲಾಡಿಸುವವರು **ಯಾರು ? ಎಂತು ?** ಆದಕಾರಣ ಬಸವ ಧರ್ಮ ರಕ್ಷಕ ಪಂಡಿತ ಮಂಡಲಿಯನ್ನು ಸಂಘಟಿಸುವುದು ಅವಶ್ಯವೂ ಸೂಕ್ತವೂ ಆಗಿದೆ. ಬಸವಣ್ಣನ ಹೆಸರೇನೋ ಎಲ್ಲರ ಬಾಯಲ್ಲಿ, ಕಿವಿಯಲ್ಲಿ ಇದೆ. ಆದರೆ ಧರ್ಮ ಅನುಷ್ಠಾನವು ಶೂನ್ಯವಾಗಿದೆ, ಗತಿಹೀನವಾಗಿದೆ.

ದಯವಿಟ್ಟು ಇದಕ್ಕೆ ಪರಿಹಾರಗಳನ್ನು ಒದಗಿಸಬೇಕಾಗಿ ಕಳಕಳಿಯ ನಮ್ರ ವಿನಂತಿ.

ತಮ್ಮವನಾದ,
ಜಿ. ಎಮ್. ಪಾಟೀಲ. (ಜ್ಞಾನ ದಾಸೋಹಿ)

ಸಮಸ್ಯೆಗೆ ಉತ್ತರ

—**ಮಾತಾಜಿ**

೧೪-೯-೧೯೯೩
ಕೂಡಲ ಸಂಗಮ

ಶರಣರಾದ ಜಿ. ಎಂ. ಪಾಟೀಲರಿಗೆ,
ಹೃತ್ಪೂರ್ವಕ ಶುಭಹಾರೈಕೆಗಳು.

ದಿ. ೭-೯-೧೯೯೩ ರ ಪತ್ರ ತಲುಪಿತು. ಇಂಥ ವೃದ್ಧಾಪ್ಯದಲ್ಲಿಯೂ ನೀವು ಹೊಂದಿರುವ ಕಳಕಳಿ, ಚಿಂತೆ ನೋಡಿದರೆ ಆಶ್ಚರ್ಯವೆನಿಸುತ್ತದೆ. ಬಾಕಿ ಬಹುಪಾಲು ಜನರು ವಯಸ್ಸಾದಂತೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳ ಮೋಹದಲ್ಲೇ ತೊಳಲಾಡಿದರೆ ನೀವು ಬಸವ ಧರ್ಮದ ಉಳಿವಿನ ಬಗ್ಗೆ ಚಿಂತಿಸುವುದು ಕಂಡಾಗ ಹೆಮ್ಮೆ ಎನಿಸುತ್ತದೆ. ನಿಮ್ಮೊಡನೆ ಸಹಚಿಂತನ ಮಾಡೋಣ ಎಂದುಕೊಂಡು ಈ ಪತ್ರಿಕೆ "ಕಲ್ಯಾಣ-ಕಿರಣ"ದ ಮೂಲಕ ಉತ್ತರಿಸುತ್ತಲಿರುವೆ.

೧] ಬಸವ ಧರ್ಮ ರಕ್ಷಣೆಯ ಕಾರ್ಯ ಆರಂಭವಾಗಿದೆ, ನಿಮ್ಮಂತಹ ಅಸಂಖ್ಯಾತ ಚೇತನಗಳಿಂದ. ಇನ್ನು ಈ ಕಾರ್ಯ ಸುಗಮವಾಗಿ ಸಾಗುತ್ತದೆ. 800 ವರ್ಷಗಳ ಕಾಲ ಹಲವು ವಿಧದ ಆಘಾತಗಳನ್ನು ಎದುರಿಸಿಯೂ ರಾಜಾಶ್ರಯವಿಲ್ಲದೆ, ಪುರೋಹಿತ ಶಾಹಿಯ ನಿರಂತರ ಒತ್ತಡವನ್ನು ತಾಳಿಕೊಂಡೂ, ಕಷ್ಟನಷ್ಟಗಳನ್ನು ಎದುರಿಸಿಯೂ 'ಚಂದ್ರಹಾಸ'ನಂತೆ ಬೆಳೆದ ಬಸವ ಧರ್ಮ ತನ್ನ ಅಂತಃಸತ್ವದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿದೆ. ಚಂದ್ರಹಾಸನನ್ನು ಕೊಲ್ಲಬೇಕೆಂದು ಸಂಚು ಮಾಡಿದ ದುರ್ಬುದ್ಧಿ ಕಡೆಗೆ ಅವನನ್ನೇ ತನ್ನ ಅಳಿಯನನ್ನಾಗಿ ಹೊಂದುವ ಸನ್ನಿವೇಶ ಬಂದಂತೆ, ಬಸವ ಧರ್ಮವನ್ನು ನಾಶಮಾಡುವ ಸಂಚನ್ನು ಈ ಶತಮಾನದಲ್ಲಿ ಆರಂಭಿಸಿದ ಪುರೋಹಿತ ಶಾಹಿ, ಜನಸಾಮಾನ್ಯರ ಜಾಗೃತಿಯ ಪರಿಣಾಮವಾಗಿ, ಬಸವ ಧರ್ಮವನ್ನೇ ಆಶ್ರಯಿಸಿ, ಬೋಧಿಸುವ, ಪಾಲಿಸುವ ಕಾಲ ದೂರವಿಲ್ಲ. ಕಾಲಜ್ಞಾನ ವಚನಗಳ ಮೂಲಕ ಆದಿ ಶರಣರು ನೂರಾರು ಕಡೆ ಎಚ್ಚರಿಸಿದ್ದಾರೆ, ವಿರಕ್ತರು ಬಸವ ಮಾರ್ಗಕ್ಕೆ ಬರುವರು, ಬರದವರು ವಿನಾಶದತ್ತ ಸಾಗುವರು. ಕಾಲಜ್ಞಾನ ವಚನಗಳಲ್ಲಿ ವಿರಕ್ತರ ಬಗ್ಗೆ ಬಹಳ ಪ್ರಸ್ತಾಪವಾಗಿದೆ, ಎಚ್ಚರಿಕೆ ನೀಡಲ್ಪಟ್ಟಿದೆ.

ಹುಟ್ಟಿದಾಗಿನಿಂದಲೂ ಜನಾಶ್ರಯದಲ್ಲೇ ಬೆಳೆದು ಬಂದ ಬಸವ ಧರ್ಮ, ಅವರಿಂದಲೇ ರಕ್ಷಿಸಲ್ಪಡುವುದು. ನೀವು ಮಠಾಧಿಕಾರಿಗಳ ಬಗ್ಗೆ ಯಾಕಿಷ್ಟು ಚಿಂತಿಸುತ್ತೀರಿ? ಯಾವುದೇ ಮಠ, ಸ್ವಾಮಿಗಳಿಲ್ಲದೆ ಇಸ್ಲಾಂ ಮಸೀದಿ-ದರ್ಗಾಗಳ ಮೂಲಕ ಜಗತ್ತಿನ ಸೂಪರ್ ಪವರ್ ಆಗಿಲ್ಲವೆ? ಧಾರ್ಮಿಕ ಶಿಸ್ತಿಗೆ ಏಕರೂಪತೆಗೆ ಮಸೀದಿ, ಭಕ್ತಿವರ್ಧನೆಗೆ ದರ್ಗಾಗಳು ನೆರವಾದಂತೆ, ಸಾಮಾಜಿಕ ಸಂಘಟನೆ-ಶಿಸ್ತಿಗೆ ಬಸವ ಮಂಟಪಗಳು, ಭಕ್ತಿ ವರ್ಧನೆಗೆ ಶರಣರ ಸ್ಥಾನಗಳು ಶ್ರದ್ಧಾಕೇಂದ್ರಗಳಾಗಿ ಬೆಳೆದರೆ ಸಾಕು.

೨] ತತ್ತ್ವ ಎಂಬ ಪದ ಪ್ರಯೋಗದ ಬಗ್ಗೆ ನೀವು ಪೂರ್ವಗ್ರಹ ಪೀಡಿತರಾಗಿದ್ದೀರಿ. ತತ್ತ್ವ ಎಂಬ ಪದವು ಜ್ಞಾನಾತ್ಮಕ, ಧರ್ಮ ಎಂಬುದು ಕ್ರಿಯಾತ್ಮಕ. philosophy ಮತ್ತು Religion ಎಂಬ ಎರಡು ಪದಗಳಿಂದ ಇವನ್ನು ಸಂಬೋಧಿಸುವರು. ಪ್ರತಿಯೊಂದು ಧರ್ಮಕ್ಕೆ ಒಂದು ತತ್ತ್ವಜ್ಞಾನವಿರುತ್ತದೆ. ತತ್ತ್ವಕ್ಕೆ ಧಾರ್ಮಿಕ ನೆಲೆ ಇರಬಹುದು ಬಿಡಬಹುದು. ಹೇಗೆಂದರೆ ಪ್ಲೇಟೋ, ಸೋಕ್ರಟೀಸ್, ಬರ್ಟ್ರಂಡ್ ರಸೆಲ್ ಮುಂತಾದವರದು ಕೇವಲ ತತ್ತ್ವಜ್ಞಾನ ಮಟ್ಟದಲ್ಲೇ ಉಳಿಯಿತೇ ವಿನಾ ಧರ್ಮದ ಭೂಮಿಯಲ್ಲಿ ಬೇರು ಬಿಡಲಿಲ್ಲ. ಆದರೆ ಪ್ರತಿಯೊಂದು ಧರ್ಮಕ್ಕೆ ತನ್ನದೇ ಆದ ತತ್ತ್ವಜ್ಞಾನ ಇದ್ದೇ ಇರುತ್ತದೆ. ಆದ್ದರಿಂದ ಬಸವ ತತ್ತ್ವ (Basava-philosophy, Basavaism) ಎಂಬ ಪ್ರಯೋಗವೂ ಬಸವ ಧರ್ಮ ಎಂಬಷ್ಟೇ ಅರ್ಥಪೂರಿತ ನೀವು ತಿಳಿದಂತೆ ತತ್ತ್ವ ಎಂದರೆ ಆಚರಣೆಗೆ ಬರದುದು ಎಂದೇನೂ ಅರ್ಥವಾಗದು.

ಆದ್ದರಿಂದ ಬಸವ ತತ್ತ್ವ ಎಂದಾಗ ಧರ್ಮಪಿತ ಬಸವಣ್ಣನವರು ಬೋಧಿಸಿದ ತತ್ತ್ವಜ್ಞಾನವೆಂದು, ಬಸವ ಧರ್ಮ ಎಂದಾಗ ಆ ತತ್ತ್ವವನ್ನೇ ಅಳವಡಿಸಿಕೊಂಡಿರುವ ಕಧಾರ್ಮಿ ಜ್ಞಾನ ಪಥವೆಂದೂ ಅರ್ಥ ಮಾಡಬಹುದು.

೩] ನಿಮ್ಮ ಎರಡನೆ ಅಭಿಪ್ರಾಯ ಕುರಿತು ನಮ್ಮ ಸಹಮತವಿದೆ. ಧರ್ಮಗುರು ಬಸವಣ್ಣನವರು ಕೊಟ್ಟ ಇಷ್ಟಲಿಂಗ ಧರಿಸಿಕೊಂಡೂ ಅವರ ಧಾರ್ಮಿಕ ಗುರುತ್ವ, ಸ್ಥಾಪಕತ್ವ ಮರೆಸುವ ಸಂಚಿನಲ್ಲಿ ಬಹಳ ಜನ ಮಠಾಧಿಪತಿಗಳು ತಲ್ಲೀನರಾಗಿದ್ದಾರೆ.

ಶಿವಾನುಭವ ಎಂಬ ಪದಪ್ರಯೋಗ–ನೀವು ತಿಳಿಸಿರುವಂತೆ ತಪ್ಪು. ಶಿವ ಎಂದರೆ ಮಂಗಲ ಎಂದು ಅರ್ಥ ಮಾಡಬಹುದಾದರೂ, ಅದು ಪರಮಾತ್ಮನ ಒಂದು ಗುಣವನ್ನು ಪ್ರತಿನಿಧಿಸುತ್ತದೆ. ಕರ್ತ, ಲಿಂಗ ಎಂಬ ಪದದಷ್ಟು ಪರಿಪೂರ್ಣವಲ್ಲ. ಶರಣನು ಶಿವಶರಣನೂ ಅಲ್ಲ ವಿಷ್ಣು ಶರಣನೂ ಅಲ್ಲ. ಅವನು ದೇವನಿಗೆ ಶರಣಾದವನು. ಇಷ್ಟಲಿಂಗಪೂಜೆಯು ಶಿವಪೂಜೆಯಲ್ಲ ದೇವಪೂಜೆ. ಆದ್ದರಿಂದ ಶಿವಾನುಭವ, ಶಿವಶರಣ, ಶಿವಪೂಜೆ ನಮಗೆ ಅಸಮಂಜಸ.

ಅರಿವಿನ ತೃಪ್ತಿಗೆ **ಅನುಭಾವವೇ** ಆಶ್ರಯ
ಲಿಂಗಾನುಭಾವದಿಂದ ನಿಮ್ಮ ಕೂಡು
ಎನ್ನ ಮರೆದೆ ಕಾಣಾ ಕೂಡಲಸಂಗಮದೇವ.

ಧರ್ಮಪಿತರ ವಚನದಲ್ಲಿ **ಅನುಭಾವ, ಲಿಂಗಾನುಭಾವ** ಎಂದೇ ಬಳಸಿರುವುದನ್ನು ಕಾಣಬಹುದು.

"ಶಿವನು ಕೃಷ್ಣನಂತೆ ಲೀಲಾ ಪುರುಷ, ಆವನ ಲೀಲೆಗಳನ್ನು ಹೇಳುವ ೨೫ ಪುರಾಣಗಳು ಇವೆ. ಇಂತಹುದನ್ನು ಖಂಡಿಸಿ ಜನತೆಯನ್ನು ಭ್ರಾಂತಿಗೊಳ್ಳದಂತೆ ಮಾಡುವವರು ಯಾರು? ಎಂತು" ಎಂಬ ನಿಮ್ಮ ಮಾತುಗಳ ವಿಷಯದಲ್ಲಿ ನನ್ನ ಭಿನ್ನಾಭಿಪ್ರಾಯವಿದೆ. ಲಿಂಗವಂತರು ಶಿವಪೂಜಕರಲ್ಲ, ಯಾವುದೇ ವ್ಯಕ್ತಿಯ ಪೂಜಕರಲ್ಲ, ಇದು ಸತ್ಯ. ಆದರೆ ಶಿವನ ವ್ಯಕ್ತಿತ್ವಕ್ಕೂ ಕೃಷ್ಣನ ವ್ಯಕ್ತಿತ್ವಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ನಾವು ಯಾವುದೇ ವ್ಯಕ್ತಿಯನ್ನು 'ದೇವರು' ಎಂದು ಮನ್ನಿಸಿ, ಪೂಜಿಸುವುದಿಲ್ಲವಾದರೂ ಶಿವನ ಅಸಾಮಾನ್ಯ ವ್ಯಕ್ತಿತ್ವವನ್ನರಿತು ಗುರುವೆಂದು ಗೌರವಿಸಬೇಕು. ೨೫ ಲೀಲೆಗಳು ಘಟನಾವಳಿಗಳ ಚಿತ್ರಣ ನೀಡುತ್ತವೆ. ಶಿವನು ಎಲ್ಲೂ ಚೆಲ್ಲುಚೆಲ್ಲಾಗಿ ರಸಿಕತೆಯ ಪ್ರದರ್ಶನ ಮಾಡುವುದಾಗಲೀ, ತನಗೆ ದಾನವಿತ್ತವರನ್ನು ನಾಶ ಮಾಡಿದುದಾಗಲೀ ಯಾವುದಾದರೂ ವೇಷಧರಿಸಿ ಇನ್ನೊಬ್ಬರನ್ನು ಮೋಸಗೊಳಿಸುವದಾಗಲೀ ಮಾಡಲಿಲ್ಲ. ಗಂಭೀರ ವ್ಯಕ್ತಿತ್ವ, ಅಂತರ್ಮುಖ ದೃಷ್ಟಿ, ಸರಳ ವೇಷ, ನಿಷ್ಕಲ್ಮಶ ಹೃದಯ, ಅಪ್ರತಿಮ ಯೋಗ ಮುದ್ರೆಯಿಂದ ಮುಮುಕ್ಷುಗಳ ಮನವನ್ನು ಗೆಲ್ಲುತ್ತಾನೆ. ಬಸವಣ್ಣನವರು ನಮ್ಮ ಧರ್ಮಪಿತರಾದರೂ ಶಿವನ ಧರ್ಮದ ಸಾಂಸ್ಕೃತಿಕ ಅಂಶಗಳನ್ನು ಬಳುವಳಿಯಾಗಿ ಪಡೆದ ನಾವು ಅವನನ್ನು ನಮ್ಮ ಮುತ್ತಜ್ಜ ಎನ್ನಬೇಕಾಗುತ್ತದೆ.

ಶಿವ ಬೇರೆ ಸೃಷ್ಟಿಕರ್ತ ಬೇರೆ, ಇಷ್ಟಲಿಂಗವು ವಿಶ್ವಚೇತನವಾದ ಪರಮಾತ್ಮನ ಕುರುಹು ಎಂದು ನಾವುಗಳು ಸಾರಿ ಸಾರಿ ಹೇಳುತ್ತಿದ್ದೇವೆ. ರಾಷ್ಟ್ರೀಯ ಬಸವ ದಳಗಳು ಆ ದಿಶೆಯಲ್ಲಿ ಪ್ರಚಾರ ಮಾಡುತ್ತಿವೆ. ವಚನ ಸಾಹಿತ್ಯದ ಅಧ್ಯಯನ ಸಾಗಿದಂತೆಲ್ಲ ಜನರಲ್ಲಿ ಭ್ರಮ ನಿರಸನವಾಗುತ್ತಿದೆ. ಕಳವಳಿಸಬೇಡಿರಿ.

೪] "ಅಯ್ಯಾಚಾರಕ್ಕೆ ಈಗ ಶಿವಾಚಾರ ಎಂದು ಅಪಾರ್ಥ ಕಲ್ಪಿಸುತ್ತಾರೆ; ಇದು ಜಂಗಮ ಜಾತಿಗೇ ಸಂಬಂಧಿತವಾದುದು ಎಂದು ವಿಪರೀತ ಅರ್ಥ ಕಲ್ಪಿಸುತ್ತಾರೆ" ಎಂದು ಹಳಹಳಿಸಿದ್ದೀರಿ. ಚನ್ನಬಸವಣ್ಣನವರ ವಚನಗಳಲ್ಲಿ ಶಿವಾಚಾರದ ವ್ಯಾಖ್ಯೆ ಹೀಗೆ ಬಂದಿದೆ :

"ಭಕ್ತರಲ್ಲಿ ಕುಲಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ." (ಚ.ಬ.ವ. ೧೧೫೯)

ಶಿವಾಚಾರವು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಿ, ಅಂಗದ ಮೇಲೆ ಲಿಂಗ ಉಳ್ಳುವರಲ್ಲಿ ಉಂಬ–ಉಡುವ, ಕೊಂಬ–ಕೊಡುವ ಆಚರಣೆ ಪಾಲಿಸಬೇಕೆಂದು ಹೇಳುತ್ತದೆ. ಸದ್ಯದ ಆಚರಣೆಯಲ್ಲಿ ಅಯ್ಯಾಚಾರವು ಶಿಥಿಲಾರ್ಥ ಹೊಂದಿದ್ದರೂ ಶಿವಾಚಾರಕ್ಕೆ ಪ್ರತಿ ಸ್ಪರ್ಧಿಯಾಗಿಲ್ಲ.

ನಿಮ್ಮ ಕಳಕಳಿ ಅಭಿನಂದನಾರ್ಹ. ಆದರೆ ವಿರಕ್ತರ ಬಗ್ಗೆ ಕೆಲವೊಮ್ಮೆ ತೀರಾ ವ್ಯಗ್ರರಾಗುತ್ತೀರಿ. ಮೂಢ ಅನುಯಾಯಿಗಳನ್ನು ತಿದ್ದಲಾರದೆ, ಅವರನ್ನು ಏಕ–ದೇವೋಪಾಸನೆಯ ಬಸವ ಪಥಕ್ಕೆ ತರಲಾರದೆ ಇವರೇ ಅವರ ದಾರಿ ಹಿಡಿದಿದ್ದಾರೆ. ನಾಯಿ ಬಾಲವನ್ನು ಅಲ್ಲಾಡಿಸಬೇಕು, ಅದು ಬಿಟ್ಟು ಬಾಲವೇ ನಾಯಿಯನ್ನು ಅಲ್ಲಾಡಿಸುವಂತೆ ಶ್ರೀಮಂತ ಭಕ್ತರಿಗಾಗಿ ಗಣಪತಿ, ಹನುಮಂತ, ರಾಮ ಶಿಲೆಗಳನ್ನು ಪೂಜಿಸುವ ಮಟ್ಟಕ್ಕೆ ವಿರಕ್ತರು ಇಳಿದಿದ್ದಾರೆ; ಇದನ್ನು ನಾವು ಒಪ್ಪುತ್ತೇವೆ. ಆದರೆ ಕೆಲವರಾದರೂ ಬಸವ ಪಥದಲ್ಲಿ ನಿಷ್ಠರಾಗಿ ನಡೆಯುತ್ತಿದ್ದಾರೆ. ಇನ್ನೊಂದು ಲಕ್ಷಿಸಬೇಕು. ತೀರಾ ಇತ್ತೀಚಿನವರೆಗೂ (ಶಿವಯೋಗ ಮಂದಿರ ಹುಟ್ಟುವವರೆಗೆ) ಹೆಚ್ಚಿನ ವಿರಕ್ತರು ಬಸವ ಪಥದಲ್ಲಿ ನಡೆದು ಶರಣ ಸಂಸ್ಕೃತಿ ಉಳಿಸಿದ್ದಾರೆ. ವಿರಕ್ತ ಮಠಗಳು ಇರದಿದ್ದರೆ ಲಿಂಗವಂತ ಧರ್ಮ ಇಷ್ಟೂ ಉಳಿಯುತ್ತಿರಲಿಲ್ಲ. ಇತ್ತೀಚಿಗೆ ಜಾತಿ ಅಭಿಮಾನ ಪ್ರೇರಿತರಾಗಿ ಕೆಲವು ವಿರಕ್ತರು ಬಸವಣ್ಣನವರಿಂದ ದೂರಸರಿಯುತ್ತಿದ್ದಾರೆ. ಆದರೆ ನೀವು ಪೂರ್ಣ ಪೂರ್ವಗ್ರಹ ಪೀಡಿತರಾಗಿ ಎಲ್ಲ ದೋಷಗಳಿಗೂ ಅವರೇ ಹೊಣೆ ಎಂಬಂತೆ ಬರೆಯುತ್ತೀರಿ. ಬಹುಶಃ ಈ ಕಾರಣಕ್ಕೆ 'ಉತ್ತರ ಕರ್ನಾಟಕ ಪತ್ರಿಕೆ ನಿಮ್ಮ ಲೇಖನ ಪ್ರಕಟಣೆ ನಿಲ್ಲಿಸಿರಬಹುದು, ನೀವು ವಿರಕ್ತರನ್ನು ಬೈಯುವ ಕಟುಭಾಷೆ ನಮಗೇ ಮುಜ:ಗರವನ್ನು ಉಂಟುಮಾಡುತ್ತಿತ್ತು.

ಈಗ ಎಲ್ಲರೂ ಸತ್ ಸಂಕಲ್ಪ ಮಾಡಿ ಹೊರಟಿದ್ದೇ ಆದರೆ ಬಸವ ಧರ್ಮವು ಸರ್ವಾಂಗೀಣವಾಗಿ ತಲೆ ಎತ್ತಿ ಮೆರೆಯುವುದರಲ್ಲಿ ಸಂದೇಹವಿಲ್ಲ ಎಂಬ ಆಶಾವಾದ ನಮ್ಮದಾಗಿದೆ. ತಾವೂ ಅದೇ ರೀತಿ ಸಮಾಧಾನ ತಂದುಕೊಳ್ಳಿರಿ.

—ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠಕ್ಕೆ ವಿವಿಧ ಉದ್ದೇಶಗಳಿಗಾಗಿ

5000-00 ರೂ. ಮೇಲೆ ದೇಣಿಗೆ ಕೊಟ್ಟ ದಾನಿಗಳಿಗೆ ಸತ್ಕಾರ.

1–12–1993 ರ ವರೆಗೆ ಕೊಟ್ಟವರು

— ಕಟ್ಟಡ ನಿಧಿಯ ದಾಸೋಹಿಗಳು —

ಕೋಣೆಯ ನಿರ್ಮಾಣಕ್ಕೆ

ಶರಣರುಗಳಾದ :

೧. ಶಂಕರಪ್ಪ ಕಲ್ಲಪ್ಪ ಪಡಶೆಟ್ಟಿ, ಗೊಬ್ಬೂರು, ಗುಲಬರ್ಗಾ
೨. ಪ್ರಕಾಶ್ ರಾಜಶೇಖರ ಮಹಾಜನ, ಅಥಣಿ
೩. ಮಲ್ಲಪ್ಪ ಶಿವಲಿಂಗಪ್ಪ ಬಾಗೇವಾಡಿ, ಹಾರೂಗೇರಿ
೪. ಡಿ. ತಂಗಿಯಮ್ಮ ಟೀಚರ್, ಶಿರಾಳಕೊಪ್ಪ
೫. ದಾನಪ್ಪ ಕೊಟ್ರುಬಸಪ್ಪ, ಮೈಲಹಳ್ಳಿ
೬. ಕೆ. ವೀರಭದ್ರಪ್ಪ ಮತ್ತು ಬಿ. ಕೆ. ರಾಜಶೇಖರಪ್ಪ, ಚಳ್ಳಕೆರೆ
೭. ಧರೆಯಪ್ಪ ಗಿರಿಯಪ್ಪ ಚೌಗುಲಾ, ಖವಟಕೊಪ್ಪ

ಕಟ್ಟಡ ನಿಧಿ, ಪುಸ್ತಕ ಮುದ್ರಣಕ್ಕೆ ನೆರವು ನೀಡಿದವರು

ಶರಣರುಗಳಾದ :

೭. ಡಾ॥ ಪ್ರಭಾಕರ ರುದ್ರಪ್ಪ ಅವರಾದಿ, ತೇರದಾಳ
೮. ಜಿ. ವಿ. ಪ್ರಸಾದರಾವ, ಜಾಲೀಹಾಳ ಕ್ಯಾಂಪ್
೯. ಗೊಗ್ಗಾ ಮಹಾದೇವಮ್ಮ ಬಸಪ್ಪನವರು, ಹೊಸಪೇಟೆ
೧೦. ಲಲಿತಮ್ಮ ಗಂಗಾಧರ, ಬೆಂಗಳೂರು,
೧೧. ಸರ್ವಮಂಗಳಮ್ಮ ಎನ್. ಸಿದ್ಧಣ್ಣ, ಹಾಸನ.
೧೨. ಮಲ್ಲಿಕಾ ಗಂಗರಾಜು, ಹಾಸನ.
೧೩. ಸಿ. ಎಂ. ಚಂದ್ರಶೇಖರ, ಹಾಸನ.
೧೪. ಸಿ. ಎಂ. ಗಂಗಪ್ಪ, ಹಾಸನ
೧೫. ಕೆ. ಎನ್. ಗುರಪ್ಪ, ಬಳಾರಕೊಪ್ಪಲು, ಹಾಸನ.
೧೬. ಬಸವರಾಜು ಕಂಡಕ್ಟರ್, ಆನವಟ್ಟಿ.
೧೭. ರಾಮಚಂದ್ರ ಪುಂಡಲೀಕ ತಾಕವಾಡ, ಈಚಲಕರಂಜಿ.
೧೮. ಮಾಲುತಾಯಿ ಚಂದ್ರಕಾಂತ ಸ್ವಾಮಿ, ಈಚಲಕರಂಜಿ.
೧೯. ಕರಿಬಸಪ್ಪ ನಾಗಪ್ಪ ಬಾಳೀಪಡಿ, ಈಚಲಕರಂಜಿ.

೨೦. ಈರಪ್ಪ ಕಲ್ಲಪ್ಪ ನಾಗೋರೆ, ಈಚಲಕರಂಜಿ.

೨೧. ಸದಾಶಿವ ವಿರುಪಾಕ್ಷಪ್ಪ ಸುಲ್ತಾನಪುರೆ, ಈಚಲಕರಂಜಿ.

೨೨. ಅಶೋಕ ಶಂಕರ ಮುರದುಂಡೆ, ಈಚಲಕರಂಜಿ.

೨೩. ವಿಮಲ ಅಣ್ಣಾಸಾಹೇಬ ಶಹಾಪುರೆ, ಈಚಲಕರಂಜಿ.

೨೪. ಡಾ|| ಮಾಲತಿಬಾಯಿ ಆನಂದರಾವ ಕರಾಳೆ, ಈಚಲಕರಂಜಿ.

೨೫. ಮಲ್ಲಿಕಾರ್ಜುನಪ್ಪ ಬಸವಂತಪ್ಪ ಕೊಂಗಿ, ಧಾರವಾಡ.

೨೬. ಮಲ್ಲಯ್ಯಸ್ವಾಮಿ ದತ್ತಾತ್ರೇಯಸ್ವಾಮಿ, ಈಚಲಕರಂಜಿ.

೨೭. ಲಕ್ಷ್ಮೀಬಾಯಿ ಈರಪ್ಪ ಐನಾಪುರೆ, ಶಿರಡೋಣ.

೨೮. ಸೇವಂತಿ ಅಣ್ಣಾಸಾಹೇಬ ಪಣಧಾರೆ, ಶಿರಡೋಣ.

೨೯. ಶಂಕರ್ ಬಾಬೂ ಕೋರೆ, ಮೀರಜ್.

೩೦. ಚಂಪಾಬಾಯಿ ಅವಟಿ, ಮೀರಜ್.

೩೧. ಬಸವರಾಜ್ ಸಿದ್ಧಾರೂಢ ಹೋಳೀಕಟ್ಟಿ ಮತ್ತು ಸೋದರರು, ಮೀರಜ್.

೩೨. ಬಸಪ್ಪ ಶಿವಪ್ಪ ಬಿಂದಗಿ, ಮೀರಜ್.

೩೩. ಕೃಷ್ಣಾಜಿ ಬಾಬುರಾವ ಮಗದುಮ್, ಮೀರಜ್.

೩೪. ವೀರಶೈವ ಸಮಾಜ, ಮೀರಜ್.

೩೫. ರಾಜಗೊಂಡ ಶಂಕರ ಪಾಟೀಲ, ತಾಕವಾಡೆ.

೩೬. ಅಪ್ಪಾಸಾಹೇಬ ಎಸ್. ಆರ್. ಪಾಟೀಲ, ಜಯ್ಸಿಂಗ್‌ಪುರ.

೩೭. ಗೋದಾವರಿ ಬಲಭೀಮ ಪೋತದಾರ, ಜತ್ತ.

೩೮. ಡಾ|| ರವೀಂದ್ರ ಅರಳಿ, ಜತ್ತ.

೩೯. ಡಾ|| ಮನೋಹರ ಶಿವಪ್ಪಣ್ಣ ಮೋದಿ, ಜತ್ತ.

೪೦. ಸಿ. ತಿಪ್ಪೇಸ್ವಾಮಿ, ಚಿತ್ರದುರ್ಗ.

೪೧. ಮಲ್ಲಿಕಾರ್ಜುನಸ್ವಾಮಿ ಗುರುಸ್ಥಲಮಠ, ಧಾರವಾಡ.

೪೨. ಗೂಳಪ್ಪ ಕರಿಬಸಪ್ಪ ಹೆರಕಲ್, ಗದಗ.

೪೩. ಶಿವಮೂರ್ತೆಪ್ಪ ಅಂದಾನಪ್ಪ ವುಗಲಾಟದ, ಗದಗ.

೪೪. ಚಂದ್ರಶೇಖರಪ್ಪ ವಿರುಪಾಕ್ಷಪ್ಪ ಬಡಿಗಣ್ಣವರ, ಗದಗ.

[ಮುಂದುವರಿಯುವುದು.]

ಅಪಘಾತ, ಚೇತರಿಕೆ, ಧನ್ಯವಾದ.

ಶರಣ ಬಂಧುಗಳಿಗೆ ಶುಭಹಾರೈಕೆಗಳು.

ಶರಣ ಮೇಳ ಕುರಿತು ಒಂದು ಚಿಂತನ ಸಭೆಯನ್ನು 27-10-1993 ರಂದು ಬೆಂಗಳೂರಿನಲ್ಲಿ ಕರೆದಿದ್ದು, ಅದರಲ್ಲಿ ಭಾಗವಹಿಸಲೆಂದು ನಾನು ಇನ್ನಿತರ ಸಾಧಕ ವರ್ಗದೊಡನೆ ಬರುತ್ತಲಿರುವಾಗ, ರಾತ್ರಿ 11-30 ರಿಂದ 12-00 ಗಂಟೆ ಅವಧಿಯೊಳಗೆ ನಮ್ಮ ಕಾರು ಭಯಂಕರವಾದ ಅಪಘಾತಕ್ಕೆ ಈಡಾಯಿತು. ಎದುರಿನಿಂದ ಒಂದು ಲಾರಿಯು ಇನ್ನೊಂದು ಲಾರಿಯನ್ನು ಹಿಂದೆ ಹಾಕಿ ಮುಂದೆಬರಲು ಯತ್ನಿಸಿ ನಮ್ಮ ಕಾರಿಗೆ ಬಡಿಯಿತು. ಕಾರಿಗೆ ಆಗಿರುವ ಜಖಂ ನೋಡಿದರೆ ಅದರಲ್ಲಿದ್ದವರು ಉಳಿದುದೇ ಹೆಚ್ಚು ಎನಿಸುವಂತಿದ್ದರೂ, ಶ್ರೀ ಗುರುಬಸವಣ್ಣನವರ ದಿವ್ಯ ಕೃಪೆಯಿಂದ, ಎಲ್ಲರಿಗೂ ಪೆಟ್ಟುಗಳಾದರೂ ಯಾರೂ ಪ್ರಾಣಾಪಾಯಕ್ಕೆ ಎರವಾಗಲಿಲ್ಲ. ನಮ್ಮ ಆತ್ಮೀಯ ಸದ್ಭಕ್ತ ವೃಂದದವರೆಲ್ಲರೂ ಶಿಬಿರಕ್ಕೆಂದು ಬಂದು ದಿ. 18-10-93 ರಂದೇ ಹೋಗಿದ್ದುದರಿಂದಲೂ ಮತ್ತು ಪ್ರಾಣಾಪಾಯದ ಭಯದಿಂದ ಪಾರಾದುದರಿಂದಲೂ ಈ ಅಪಘಾತದ ಸುದ್ದಿಯನ್ನು ವೃತ್ತ ಪತ್ರಿಕೆಗಳಲ್ಲಿ ಕೊಡಲಿಲ್ಲ. "ಬಸವ ಕಿರಣ" ಪತ್ರಿಕೆಯಲ್ಲಿ, 31-10-1993 ರ ಚಿಂತನ ಸಭೆಗೆ ಪೂರ್ವನಿರ್ಧಾರಿತ ಕಾರ್ಯಕ್ರಮದಂತೆ ಬಂದ ಶರಣ, ವಿಜಯಕುಮಾರರು ವಿವರವಾಗಿ ವರದಿ ಮಾಡಿದಾಗಲೇ ಬಹಳ ಜನರಿಗೆ ಗೊತ್ತಾದದು. ಆಗ ಅಸಂಖ್ಯಾತ ಜನರು ಸ್ವತಃ ದರ್ಶನಕ್ಕೆ ಬಂದರು. ಪತ್ರಗಳನ್ನು ಬರೆದರು. ಅಲ್ಲಲ್ಲೇ ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಪೂಜೆ ಪ್ರಾರ್ಥನೆ ಸಲ್ಲಿಸಿ ನಮ್ಮ ಆರೋಗ್ಯಭಾಗ್ಯಕ್ಕಾಗಿ ಕೋರಿದ್ದಾರೆ. ಎಲ್ಲರಿಗೂ ತಿಳಿಸದಿದ್ದುದಕ್ಕಾಗಿ ಆಕ್ಷೇಪ ಸಹ ವ್ಯಕ್ತಪಡಿಸಿದ್ದಾರೆ. ಅಪಘಾತವು ತುಮಕೂರಿನಿಂದ 30 ಕಿ. ಮೀಟರ್ ಆಚೆಗೆ ಆದಾಗ, ಸಾರ್ವಜನಿಕ - ದಾರಿಹೋಕರ ನೆರವಿನಿಂದ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ರಾತ್ರಿಯ ವೇಳೆಯಲ್ಲಿ ಸೇರಿದಾಗ ತುಮಕೂರು ಆಸ್ಪತ್ರೆಯ ಸಿಬ್ಬಂದಿ ಮತ್ತು ರಾಷ್ಟ್ರೀಯ ಬಸವ ದಳದ ಶರಣ. ಬಸವರಾಜು, ಶರಣ. ಮಹಾಲಿಂಗಯ್ಯ, ಶರಣ, ಮಃಧುಡಯ್ಯ ಮುಂತಾದವರು ಸಕಾಲದಲ್ಲಿ ನೆರವಾದರು. ನಂತರ ಬೆಂಗಳೂರಿನ ಬೋರಿಂಗ್ ಆಸ್ಪತ್ರೆಗೆ ಸೇರಿದಾಗ ಶರಣ.ಡಾ|| ಸಿ.ವಿ.ಶಿರೋಳ, ಶರಣ. ಡಾ|| ರಂಗಸ್ವಾಮಿ, ಶರಣೆ. ಡಾ|| ಪದ್ಮಿನಿ, ಶರಣ. ಡಾ|| ವಿಜಯಕುಮಾರ್, ಶರಣ. ಡಾ|| ಆನಂದ್ ಅವರು ವಿಶೇಷ ಶ್ರದ್ಧೆ-ಭಕ್ತಿಗಳಿಂದ ಉಪಚರಿಸಿದರು. ಬೆಂಗಳೂರು ರಾಷ್ಟ್ರೀಯ ಬಸವ ದಳದ ಶರಣೆ. ಪಾರ್ವತಿ ಶಿರೋಳ, ಶರಣೆ. ದೇವಿಕಾ ಶರಣಪ್ಪ, ಶರಣ. ಕೊಂಡಜ್ಜಿ ಬಸಪ್ಪ, ಶರಣೆ. ರೇವಮ್ಮ ಈಶ್ವರಪ್ಪ. ಶರಣೆ. ವನಜಾ ಶ್ರೀನಿವಾಸ ಮುಂತಾದವರು ಬಹಳ ಭಕ್ತಿ-ಗೌರವಗಳಿಂದ ಉಪಚರಿಸಿದರು.

ಬಲಕಣ್ಣು, ಎಡಕೈ, ಎಡಕಾಲು ಮುಂತಾದವುಗಳಿಗೆ ಬಹಳ ಪೆಟ್ಟಾಗಿದ್ದರೂ ಇವೆಲ್ಲವುಗಳಿಂದ ಚೇತರಿಸಿಕೊಂಡಿದ್ದೇನೆ. ಸುಮಾರು ಒಂದು ತಿಂಗಳುಕಾಲ ಓದಲು-ಬರೆಯಲು ಆಗದೆ ತೊಂದರೆಯಾಯಿತು. ಹೀಗಾಗಿ ಕಲ್ಯಾಣ ಕಿರಣ ಸಹ ಮುದ್ರಣಗೊಳ್ಳದೆ ಸ್ಥಗಿತಗೊಂಡಿತು, ಅದಕ್ಕಾಗಿ ವಿಷಾದಿಸುತ್ತೇವೆ. ಈಗ ವಿಶ್ವಗುರು ಬಸವಣ್ಣನವರ ಕೃಪೆಯಿಂದ, ನಿಮ್ಮ ಹಾರೈಕೆಯಿಂದ ನಾನು ಗಣನೀಯವಾಗಿ ಚೇತರಿಸಿಕೊಂಡಿದ್ದೀನಿ. ಇನ್ನು ಅಲ್ಪಸ್ವಲ್ಪ ಗಾಯಗಳು ಮಾತ್ರ ಮಾಯಬೇಕಾಗಿದೆ.

ಈ ಘಟನೆ ಒಂದು ರೀತಿಯ ಪರೀಕ್ಷೆ (test) ಎಂದು ಭಾವಿಸಿದ್ದೇನೆ. ಶರಣ ಮೇಳ-7 ಧಾವಿಸಿ ಬರುತ್ತಿರುವ ಒಂದೊಂದು ದಿವಸವೂ ಬಹಳ ಅಮೂಲ್ಯವಾದ ಸಮಯದಲ್ಲಿ ಸುಮಾರು ಒಂದು ತಿಂಗಳು ವಿಶ್ರಾಂತಿಗೆ ಅಪವ್ಯಯವಾಯಿತು. ಈ ಮೂಲಕ ಧರ್ಮಗುರು ಬಸವಣ್ಣನವರು ತಮ್ಮ ಅನುಯಾಯಿಗಳನ್ನು ಪರೀಕ್ಷೆಗೆ ಒಡ್ಡಿದ್ದಾರೆ. ತಮ್ಮ ತಮ್ಮ ಜವಾಬ್ದಾರಿಯನ್ನು ಮೊದಲಿಗಿಂತಲೂ ಹೆಚ್ಚು ಚೆನ್ನಾಗಿ ನಿರ್ವಹಿಸಿ, ಶರಣ ಮೇಳದ ಪ್ರಚಾರ ಮಾಡಿ, ಹೆಚ್ಚು ಧನ, ಧಾನ್ಯ, ದೇಣಿಗೆ ಸಂಗ್ರಹಿಸಿ, ಹಿಂದಿನ ವರ್ಷಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಶರಣರು ಸೇರಿ, ಇನ್ನೂ ಹೆಚ್ಚು ಯಶಸ್ವಿಯಾಗಿ ಶರಣ ಮೇಳವು ನಡೆಯುವಂತಾಗಲು ನಮ್ಮ ಅಭಿಮಾನಿಗಳು ಪ್ರಯತ್ನಿಸಿ, ಈ ಪರೀಕ್ಷೆಯಲ್ಲಿ ಗೆಲ್ಲುವರೆಂಬ ವಿಶ್ವಾಸ ನನ್ನದು. ಆದ್ದರಿಂದ ತಾವೆಲ್ಲ ಸ್ವಯಂ ಪ್ರೇರಣೆಯಿಂದ ಶರಣ ಮೇಳದ ಪ್ರಚಾರ-ಧನ ಸಂಗ್ರಹದಲ್ಲಿ ಭಾಗಿಗಳಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಬಸವ ಗುರುವಿಗೆ ಕೀರ್ತಿ ತರುವಿರಾಗಿ ನಂಬಿದ್ದೇನೆ.

ಶರಣ ಮೇಳದಲ್ಲಿ ನಿಮ್ಮನ್ನೆಲ್ಲ ಭೇಟಿಯಾಗಲು ಬಹಳ ಕಾತುರ ಹೊಂದಿದ್ದೇನೆ.

ಶುಭಹಾರೈಕೆಗಳು,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬೆಂಗಳೂರು.

ದೂರವಾಣಿ ಸಂಖ್ಯೆ ಬದಲಾದ ಬಗ್ಗೆ

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ನಂ-೨೦೩೫, ಕಾರ್ಡ್‌ರಸ್ತೆ, ೨೦ ನೇ ಮುಖ್ಯರಸ್ತೆ, ೨ ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೫೬೦೦೧೦. ಇದರ ದೂರವಾಣಿ ಸಂಖ್ಯೆ : **೩೩೨೫೩೩೫** ಎಂದು ಇದೇ ನವಂಬರ್ ಒಂದರಿಂದ ಬದಲಾಗಿದೆ.

ಬಸವ ಗಂಗೋತ್ರಿ, ಮೈಸೂರು ರಸ್ತೆ, ಕುಂಬಳಗೋಡು, ಬೆಂಗಳೂರು ದಕ್ಷಿಣ-ತಾ, ಪಿನ್-೫೬೦೦೭೪. ಇದರ ದೂರವಾಣಿ ಸಂಖ್ಯೆ : ೮೪೩೭೨೩೪ ಎಂದು ಇದೇ ನವಂಬರ್ ಒಂದರಿಂದ ಬದಲಾಗಿದೆ. ಬೆಂಗಳೂರಿಗೆ ನೇರ ಸಂಪರ್ಕ ಹೊಂದಿದೆ. ಆಸಕ್ತರು ಗಮನಿಸಿರಿ.

ಶರಣ ಮೇಳ ಉತ್ಸವ ಸಮಿತಿ.

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ 1994 ರ ಜನವರಿ 12 ರಿಂದ 15 ರ ವರೆಗೆ ನಡೆಯಲಿರುವ ಏಳನೆಯ "ಶರಣ ಮೇಳ ಉತ್ಸವ" ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಲಾಗಿದ್ದು, ಅದರ ವಿವರ ಕೆಳಗಿನಂತಿದೆ.

ಕಾರ್ಯಕಾರಿ ಸಮಿತಿ :

ಪೋಷಕಾಧ್ಯಕ್ಷರು :
ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಬಸವ ಧರ್ಮದ ಮಹಾಜಗದ್ಗುರು ಪೀಠ, ಕೂಡಲ ಸಂಗಮ.

ಉಪಾಧ್ಯಕ್ಷರು :
ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು, ಮಂಗಲಮಠ, ಸಿರಗುಪ್ಪಿ.
ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು, ಬಸವ ಧರ್ಮ ಪೀಠ, ಕೂಡಲ ಸಂಗಮ.
ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಭಾಲ್ಕಿ.

ಕಾರ್ಯಾಧ್ಯಕ್ಷರು :
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ.

ಪ್ರಧಾನ ಸಂಚಾಲಕರು :
ಶರಣ. ಜಿ. ಜಿ. ಪಾಟೀಲರು, ಕೂಡಲ ಸಂಗಮ.

ಕೋಶಾಧ್ಯಕ್ಷೆ :
ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ.

ಪ್ರಧಾನ ಕಾರ್ಯದರ್ಶಿ :
ಶರಣ. ಎನ್. ಪುಟ್ಟರುದ್ರಪ್ಪ
ನಿವೃತ್ತ ಸೂ. ಇಂಜಿನಿಯರ್, ಬೆಂಗಳೂರು.

ಸಂಘಟಕರು :
ಶರಣ. ಬಸವಕುಮಾರ್ ಪಾಟೀಲ, ಬೀದರ
ಶರಣ. ನಿಜಗುಣಾನಂದ ಸ್ವಾಮಿ, ಬೆಂಗಳೂರು.
ಶರಣ. ಡಿ. ಎಸ್. ವಿಜಯಕುಮಾರ್.
ಶರಣ. ಆರ್. ಚಂದ್ರಶೇಖರ, ಸಕಲಟ್ಟಿ.

ಸಹ ಕಾರ್ಯದರ್ಶಿಗಳು :
ಪೂಜ್ಯ ಶ್ರೀ ಮಾತೆ ನೀಲಾಂಬಿಕೆ, ಬೆಂಗಳೂರು.
ಶರಣ. ರಮೇಶ ತಳ್ಳಿ, ಬೆಂಗಳೂರು.
ಸೋದರಿ ನಾಗರತ್ನಮ್ಮ, ಬೆಂಗಳೂರು.
ಸೋದರಿ ಮಲ್ಲಮ್ಮ, ಕೂಡಲ ಸಂಗಮ.
ಸೋದರಿ ಅಕ್ಕಮಹಾದೇವಿ, ಕೂಡಲಸಂಗಮ.
ಸೋದರಿ ಜಯಮ್ಮ, ಕೂಡಲ ಸಂಗಮ.
ಶರಣೆ. ಕಲ್ಯಾಣಮ್ಮ, ಧಾರವಾಡ.

ಸಲಹಾ ಸಮಿತಿ :
ಶರಣೆ. ಬಸವರಾಜೇಶ್ವರಿ, ಎಂ. ಪಿ.
ಕೇಂದ್ರ ಸಚಿವೆ, ಬಳ್ಳಾರಿ.
ಶರಣ. ಡಿ. ಎಂ. ಚಂದ್ರಶೇಖರ್,
ಅಧ್ಯಕ್ಷರು, ಬ.ತ.ಪ್ರ. ಟ್ರಸ್ಟ್, ಬೆಂಗಳೂರು.
ಶರಣ. ರಾಜಶೇಖರ ಮಡಕಿ,
ಬಸವ ಸೆಂಟರ್, ಸೊಲ್ಲಾಪುರ.
ಶರಣ. ಆರ್. ಐ. ಕಲ್ಯಾಣಶೆಟ್ಟಿ, ಮುಧೋಳ.
ಶರಣ. ಎಂ. ಎಂ. ಕೋರಿ, ಮುಂಬಯಿ.
ಶರಣ. ಡಾ॥ ಜಿ. ಆರ್. ತಮಗೊಂಡ.
ಮುಖ್ಯ ವೈದ್ಯಾಧಿಕಾರಿ, ಬಾಗಲಕೋಟೆ.
ಶರಣ. ಡಾ॥ ಸಿ. ಎಸ್. ಪುರಾಣಮಠ,
ದಂತ ವೈದ್ಯರು, ರಾಣೇಬೆನ್ನೂರು.

ವಿಭಾಗೀಯ ಸಂಘಟಕರು :
ತಮಿಳುನಾಡು :
ಶರಣ. ಎಲ್. ಎಂ. ಕಂದಸ್ವಾಮಿ
ಭವಾನಿ-ಈರೋಡ್ ಬಸವರ ಸಂಘಮ್, ಭವಾನಿ.

(ಪು. ತಿ. ನೋ.)

ಶರಣ. ಎಂ. ಕೆ. ಮಲ್ಲಯ್ಯರಾಜ್
ರಫ್ತುದಾರರು, ಭವಾನಿ.
ಶರಣ. ಬಿ.ಎಸ್. ಜಗದೀಶ್, ಗುಡಿಯಾತ್ತಂ.
ಶರಣ. ಮನೋಹರನ್, ಕೂನೂರು.
ಶರಣ. ಶಿವಯ್ಯ, ದೇನಾಡು, ನೀಲಗಿರಿ.
ಶರಣ. ಪಚ್ಚೂರು ನಾಗಪ್ಪ, ಪುದುಪೇಟೆ.
ಶರಣ. ಪಿ. ಶಿವಲಿಂಗಪ್ಪ, ಅಂಬೂರು.
ಶರಣ. ಜಿ.ಆರ್. ಬಸವರಾಜನ್,ಮದ್ರಾಸ್.

ಮಹಾರಾಷ್ಟ್ರ :

ಶರಣ. ರಾವ್‌ಸಾಹೇಬ ಬಾಪೂಸಾಹೇಬ ಕಿತ್ತೂರಕರ, ಗಡಹಿಂಗ್ಲಾಜ್
ಶರಣ. ವಿಲಾಸ.ಎಸ್.ಬಾಗಿ, ಗಡಹಿಂಗ್ಲಾಜ್.
ಶರಣ. ಎಸ್. ಪಿ. ಪಾಟೀಲ, ಈಚಲಕರಂಜಿ.
ಶರಣ. ಶಿವಶಂಕರಪ್ಪ ಕಾಡಾದಿ, ಸೊಲ್ಲಾಪುರ.
ಶರಣ. ಅಶೋಕಸ್ವಾಮಿ, ಉದಗೀರ್.
ಶರಣ. ಆರ್. ಬಿ. ಹೆಬ್ಬಳ್ಳಿ, ಮುಂಬಯಿ.
ಶರಣ. ಸಿ. ಎಂ. ರಾಜಣ್ಣ, ಕೊಲ್ಹಾಪುರ.
ಶರಣ. ಶಿವಪುತ್ರಪ್ಪ ಹೋಳೀಕಟ್ಟಿ,ಮೈಂದರ್ಗಿ
ಶರಣ. ಬಸವರಾಜ ಹೋಳೀಕಟ್ಟಿ, ಮೀರಜ.

ಆಂಧ್ರ ಪ್ರದೇಶ :

ಶರಣ. ಆಡಿವೆಪ್ಪ ಚಂದ್ರೆ, ಜಹಿರಾಬಾದ.
ಶರಣ. ನಾಗಲಿಂಗ ಶಿವಯೋಗಿ, ಮಹಬೂಬನಗರ.

ಕರ್ನಾಟಕ :

ಶರಣ. ಜೆ. ಬಸಪ್ಪ, ವಕೀಲರು, ಗಂಗಾವತಿ.
ಶರಣ. ಶಿವರಾಜಪಾಟೀಲ ಅತಿವಾಳ,ಬೀದರ.
ಶರಣ. ವಿ. ಜಿ. ಸತ್ಯನಾರಾಯಣಶೆಟ್ಟರು, ಚಿತ್ರದುರ್ಗ.
ಶರಣ. ಎಸ್. ಶರಣಪ್ಪ, ಚಳ್ಳಕೆರೆ.
ಶರಣ. ಎ. ಸಿ. ಪಟ್ಟಣದ, ಬಾದಾಮಿ.
ಶರಣ. ಎಸ್. ಬಿ. ಸುಲ್ತಾನಪುರಿ, ಬೆಳಗಾಂ.
ಶರಣ. ಕೆ. ಎಂ. ಹೇಮಯ್ಯಸ್ವಾಮಿ, ಕಂಪ್ಲಿ.
ಶರಣ. ಅಂದಾನಪ್ಪ ಕುಂದರಗಿ,ಗಜೇಂದ್ರಗಡ.
ಶರಣ. ಸಿ. ಬಸವರಾಜು, ತುಮಕೂರು.
ಶರಣ. ಚನ್ನಪ್ಪ ಬಾದಾಮಿ,ರಾಣೇಬೆನ್ನೂರು.

ಶರಣ. ಶಂಕರಪ್ಪ ಮಹಾಂತಗೋಳ, ಗುಲಬರ್ಗಾ.
ಶರಣ. ವಿರುಪಾಕ್ಷಪ್ಪ ಗಿರಿಸಾಗರ,ಜಮಖಂಡಿ.

ಸ್ವಾಗತ ಸಮಿತಿ :

ಪೋಷಕಾಧ್ಯಕ್ಷರು :

ಶರಣ. ಕೆ. ಆರ್. ಸೋಮಶೇಖರ್.
ಶ್ರೀಮುದ್ದೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್.

ಗೌರವಾಧ್ಯಕ್ಷರು :

ಶರಣ. ಜಿ. ಎನ್. ಬಸವರಾಜು
ಉಮಾಶಂಕರ್ ಎಲೆಕ್ಟ್ರಿಕಲ್ಸ್, ಬೆಂಗಳೂರು.

ಕಾರ್ಯಾಧ್ಯಕ್ಷರು :

ಶರಣ. ಡಾ॥ ನಿತಿನಚಂದ್ರ ಹತ್ತೀಕಾಳ, ಧಾರವಾಡ.

ಉಪಾಧ್ಯಕ್ಷರು :

ಶರಣ. ಬಿ. ಎಂ. ಹೊರಕೇರಿ, ಬಾದಾಮಿ.
ಶರಣ. ಕೆ. ಆರ್. ಪರಂಜ್ಯೋತಿ, ಬೆಂಗಳೂರು.
ಶರಣ. ಚನ್ನಪ್ಪ ದಿವಟರ್, ಕೊಪ್ಪಳ.
ಶರಣ. ರುದ್ರಪ್ಪ ಮಲ್ಲಕಪ್ಪ ದುಂಬಾಳೆ, ಅಧ್ಯಕ್ಷರು. ಶ್ರೀ ಬಸವೇಶ್ವರ ದೇವಾಲಯ-ಸಂಸ್ಥೆ, ಬಸವನ ಬಾಗೇವಾಡಿ.
ಶರಣ. ಎಸ್. ಜಿ. ಪಾಟೀಲ, ಅಧ್ಯಕ್ಷರು, ಶ್ರೀ ಸಂಗಮೇಶ್ವರ ದೇವಾಲಯ ಸಮಿತಿ, ಕೂಡಲ ಸಂಗಮ.

ಸಂಚಾಲಕ ಸಮಿತಿ :

ಅಧ್ಯಕ್ಷರು :

ಶರಣ. ಬಸವರಾಜ ಲುಕ್ಕ, ಬಾಗಲಕೋಟೆ.

ಉಪಾಧ್ಯಕ್ಷರು :

ಶರಣ. ಎನ್.ಬಸವರಾಜು,ದೊಡ್ಡಬಳ್ಳಾಪುರ.
ಶರಣ. ಟಿ. ಎ. ದಾಸಪ್ಪ, ತಿಪಟೂರು.

ಸೇವೆ :

ಬಸವ ಧರ್ಮ ಸಂಸತ್ ಸದಸ್ಯರು.
ರಾಷ್ಟ್ರೀಯ ಬಸವ ದಳಗಳ ಸದಸ್ಯರು.

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
20 ನೇ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ.
ಕೂಡಲ ಸಂಗಮ-587115
ತಾ॥ ಹುನಗುಂದ, ಜಿಲ್ಲೆ॥ ಬಿಜಾಪುರ.
ದೂರವಾಣಿ : 838

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

1994 ನೇ ಸಾಲಿನಲ್ಲಿ ಬರುವ ಬಸವ ಧರ್ಮೀಯರ ಹಬ್ಬ-ಹುಣ್ಣಿಮೆ-ಉತ್ಸವಗಳು

1.	ಶರಣ ಮೇಳ	ಜನವರಿ 12 ರಿಂದ 15
2.	ಬಸವ ಕ್ರಾಂತಿ ದಿನ	ಜನವರಿ 14
3.	ಶ್ರೀ ಸಿದ್ಧರಾಮೇಶ್ವರ ಜಯಂತಿ	"
4.	ಗಣ ರಾಜ್ಯೋತ್ಸವ	ಜನವರಿ 26
5.	ಶರಣ ಜ್ಯೋತಿ ದರ್ಶನ, ಕೂಡಲ ಸಂಗಮ (ಮಾಘ ಪೌರ್ಣಿಮೆ)	ಫೆಬ್ರುವರಿ 26
6.	ಚನ್ನ ಹುಣ್ಣಿಮೆ (ಉಳಿವೆಯಲ್ಲ ರಥೋತ್ಸವ) ಪವಿತ್ರ ಗಣ ಭೋಜನ	ಫೆಬ್ರುವರಿ 26
7.	ಗಣ ಸಮಾವೇಶ (ಮಹಾ ಶಿವರಾತ್ರಿ) ಸರ್ವಶರಣರ ದಿನಾಚರಣೆ.	ಮಾರ್ಚ್ 10
8.	ಪೂಜ್ಯ ಮಾತಾಜಿಯವರ ವರ್ಧಂತಿ.	ಮಾರ್ಚ್ 13
9.	ಕಲ್ಯಾಣ ಕ್ರಾಂತಿ ಸಂಸ್ಮರಣಾ ಪಂಚಮಿ.	ಫಾಲ್ಗುಣ ದ್ವಾದಶಿಯಿಂದ
	ಧರ್ಮಗುರು ಬಸವಣ್ಣನವರ ಗಡಿಪಾರು	ಮಾರ್ಚ್ 24
	ಹರಳಯ್ಯ-ಮಧುವರಸರ ವಿಚಾರಣೆ. (ತ್ರಯೋದಶಿ)	25
	ಹರಳಯ್ಯ-ಮಧುವರಸರ ವಧೆ (ಚತುರ್ದಶಿ)	26
	ಬಿಜ್ಜಳನ ವಧೆ (ಹುಣ್ಣಿಮೆ)	27
	ಸಾಹಿತ್ಯದೊಡನೆ ಚನ್ನಬಸವಣ್ಣನವರ ನಿರ್ಗಮನ (ಪಾಡ್ಯ)	28
10.	ಅಲ್ಲಮ ಪ್ರಭು ಜಯಂತಿ (ಯುಗಾದಿ ಪ್ರತಿಪದೆ)	ಏಪ್ರಿಲ್ 11
11.	ಅಕ್ಕಮಹಾದೇವಿ ಜಯಂತಿ (ಚೈತ್ರ ಹುಣ್ಣಿಮೆ)	ಏಪ್ರಿಲ್ 25
12.	ಮಡಿವಾಳ ಮಾಚಿದೇವ ಜಯಂತಿ (ಕಾಯಕ ದಿನಾಚರಣೆ)	ಮೇ 1
13.	ಬಸವ ಜಯಂತಿ	ಮೇ 12
14.	ಬಸವ ಪಂಚಮಿ	ಆಗಸ್ಟ್ 11
15.	ನೀಲಮ್ಮ ಷಷ್ಠಿ	ಆಗಸ್ಟ್ 12
16.	ಸ್ವಾತಂತ್ರ್ಯ ದಿನೋತ್ಸವ	ಆಗಸ್ಟ್ 15
17.	ಪೂಜ್ಯ ಲಿಂಗಾನಂದ ಸ್ವಾಮಿಗಳ ವರ್ಧಂತಿ	ಸೆಪ್ಟಂಬರ್ 9
18.	ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	,, ,,
19.	ಬಸವ ಧರ್ಮ ವಿಜಯೋತ್ಸವ (ಅಕ್ಕ ನಾಗಲಾಂಬಿಕಾ ಸಂಸ್ಮರಣಾ ದಿನ)	ಅಕ್ಟೋಬರ 14
20.	ಕನ್ನಡ ರಾಜ್ಯೋತ್ಸವ	ನವೆಂಬರ್ 1
21.	ಚನ್ನಬಸವ ಜಯಂತಿ (ವಚನ ದೀಪೋತ್ಸವ)	ನವೆಂಬರ್ 4
22.	ಚನ್ನಬಸವ ಲಿಂಗೈಕ್ಯ ದಿನ	ನವೆಂಬರ್ 18

ಶರಣ ಬಂಧುಗಳಲ್ಲಿ ಬಿನ್ನಹ.

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು 13-1-1992 ರಂದು ಅಲಂಕರಿಸಿದರಷ್ಟೆ. ಈ ಪೀಠಾರೋಹಣದ ಎರಡನೆಯ ವಾರ್ಷಿಕೋತ್ಸವವು ದಿ. 12-1-1994 ರಂದು ಸಂಜೆ 5 ಗಂಟೆಗೆ ನಡೆಯಲಿದ್ದು, ಎಲ್ಲ ರಾಷ್ಟ್ರೀಯ ಬಸವ ದಳಗಳ ವತಿಯಿಂದ ಮಾಲಾರ್ಪಣೆ ಮಾಡಬೇಕೆಂದು ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಪರವಾಗಿ ಕೋರುತ್ತಿದ್ದೇವೆ. ಹಾಗೆಯೇ ವೈಯಕ್ತಿಕವಾಗಿ ಮಾಲಾರ್ಪಣೆ ಮಾಡುವವರೂ ಮಾಡಬಹುದು. ಚಳ್ಳಕೆರೆಯ ಹೂವಿನ ಮಲ್ಲಿಕಾರ್ಜುನಪ್ಪನವರು ಹೂವಿನ ಅಂಗಡಿಯನ್ನು ತೆರೆಯುತ್ತಿದ್ದು, ಮಾಲಾರ್ಪಣೆ ಮಾಡುವವರು ತಾಜಾ ಹೂವಿನ ಮಾಲೆಗಳನ್ನು ಅವರಿಂದ ಪಡೆಯಬಹುದು.

ಡಿ. ಎಸ್. ವಿಜಯಕುಮಾರ್
ಕಾರ್ಯದರ್ಶಿ.

ಬಸವಕುಮಾರ್ ಪಾಟೀಲ
ಅಧ್ಯಕ್ಷರು

ಬಸವ ಧರ್ಮ ಸಂಸತ್ ಸಭೆ.

ಸಮಾಜ-ಧರ್ಮ-ರಾಷ್ಟ್ರಗಳಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಚರ್ಚಿಸುವ ಪರಿಪಾಠವನ್ನು ಬಸವ ಧರ್ಮ ಸಂಸತ್ ಇರಿಸಿಕೊಂಡಿದೆಯಷ್ಟೆ. ಈ ಚರ್ಚೆಯು ಬುಧವಾರ ದಿ.12-1-1994 ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಆದ್ದರಿಂದ ಎಲ್ಲ ಬಸವ ಧರ್ಮ ಸಂಸತ್ ಸದಸ್ಯರು, ರಾಷ್ಟ್ರೀಯ ಬಸವ ದಳದ ಮುಖ್ಯ ಪದಾಧಿಕಾರಿಗಳು ಈ ಚರ್ಚೆಯಲ್ಲಿ ತಪ್ಪದೆ ಭಾಗವಹಿಸಬೇಕು. ಈ ಗೋಷ್ಠಿಯಲ್ಲಿ ಭಾಗವಹಿಸಿ ಸಲಹೆ-ಸೂಚನೆ ನೀಡುವುದು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಬೇಕು.

ಈ ಸಲದ ಚರ್ಚೆಗೆ ಆಯ್ದುಕೊಳ್ಳಲಿರುವ ವಿಷಯಗಳು.

೧. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬದ ಆಚರಣೆ
೨. ಪ್ರತಿ ಊರಲ್ಲಿಯೂ ವಾರ್ಷಿಕ ಗಣ ಸಮಾವೇಶ
೩. ರಾಷ್ಟ್ರೀಯ ಬಸವ ದಳದಿಂದ ಯೋಗ ಶಿಕ್ಷಣ
೪. ಯೋಗ ತರಬೇತಿ ಶಿಬಿರ ನಡೆಸುವಿಕೆ
೫. ಶರಣ ವ್ರತ ಸ್ವೀಕಾರ-ನಿಯಮಗಳ ರಚನೆ
೬. ಮಂಟಪ-ಮಠಗಳಲ್ಲಿ ನಿತ್ಯ ಉಗ್ಘಡಣೆ (ಪ್ರಾರ್ಥನೆ)
೭. ರಾಷ್ಟ್ರೀಯ ಬಸವ ದಳಗಳ ಪ್ರಕಟಣೆ-ಕೇಂದ್ರದ ಪೂರ್ವಾನುಮತಿ
೮. ಬಸವ ಧರ್ಮದ ಎರಡನೆಯ ಸಮ್ಮೇಳನ
೯. ಧರ್ಮ ಪ್ರಚಾರದ ವ್ಯವಸ್ಥೆ ಹೇಗೆ ? ಯಾರಿಂದ ?
೧೦. ನವರಾತ್ರಿ ಆಚರಣೆ, ಮತ್ತು ಬನ್ನಿ ಕೊಡುವ ಸಂಪ್ರದಾಯ ಸರಿಯೆ ?
೧೧. ಪಾದೋದಕ-ಲಿಂಗೋದಕ ಸ್ವೀಕಾರದಲ್ಲಿ ಬದಲಾವಣೆ

ಈ ಬಗ್ಗೆ ಪೂರ್ವಭಾವಿ ಚಿಂತನೆಯನ್ನು ಮಾಡಿಕೊಂಡು ಬರಬೇಕೆಂದು ಸೂಚಿಸುತ್ತೇವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ : ಬೆಂಗಳೂರು-27

ಸಂಖ್ಯೆ : ಕರಾಸಾ : ಕೇಕ : ಸಂ : ಬ.ವಿ : 186 : 7380 ದಿನಾಂಕ : 7-12-1993

ಇವರಿಗೆ,
ಸಂಚಾಲಕರು,
ಶರಣ ಮೇಳ ಉತ್ಸವ ಸಮಿತಿ, ಮಹಾಮನೆ ಮಹಾಮಠ,
ಕೂಡಲ ಸಂಗಮ-587115. ತಾ॥ ಹುನಗುಂದ, ಜಿ॥ ಬಿಜಾಪುರ.

ಮಾನ್ಯರೆ,

ವಿಷಯ : 1994 ನೇ ಜನವರಿ 11 ರಿಂದ 15 ರ ವರೆಗೆ ಕೂಡಲ ಸಂಗಮ (ಬಿಜಾಪುರ ಜಿ.) ದಲ್ಲಿ ಸಮಾವೇಶಗೊಳ್ಳುವ "ಶರಣಮೇಳ" ವಿಶೇಷ ಬಸ್ ವ್ಯವಸ್ಥೆ ಮಾಡುವ ಬಗ್ಗೆ.

ಉಲ್ಲೇಖ : ನಿಮ್ಮ ಪತ್ರ ದಿನಾಂಕ 8-11-1993.

ಮೇಲ್ಕಂಡ ಉಲ್ಲೇಖದಲ್ಲಿನ ತಮ್ಮ ಪತ್ರವು ನಮಗೆ ತಲುಪಿದೆ. ತಾವು ಕೋರಿರುವಂತೆ 1994 ನೇ ಜನವರಿ 11 ರಿಂದ 15 ರ ವರೆಗೂ ಬಿಜಾಪುರ ಜಿಲ್ಲೆಯ ಕೂಡಲ ಸಂಗಮದಲ್ಲಿ ಸಮಾವೇಶಗೊಳ್ಳುವ "ಶರಣ ಮೇಳ" ಉತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಸಲುವಾಗಿ ರಾಜಧಾನಿಯ ಜಿಲ್ಲಾ ಕೇಂದ್ರಗಳು ಮತ್ತು ಇತರ ಮುಖ್ಯ ಸ್ಥಳಗಳಿಂದ ಕೂಡಲ ಸಂಗಮಕ್ಕೆ ಬರುವ ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ಹೆಚ್ಚುವರಿ ಬಸ್ಸುಗಳ ಸೌಲಭ್ಯವನ್ನು ಒದಗಿಸುವಂತೆ ನಿಗಮದ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಯವರುಗಳಿಗೆ ಸೂಚನೆ ನೀಡಲಾಗಿದೆಯೆಂದು ತಮಗೆ ತಿಳಿಯಬಯಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,
ಎಂ. ಆರ್. ಮೃತ್ಯುಂಜಯಸ್ವಾಮಿ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ

ಯಥಾಪ್ರತಿಯನ್ನು : ಬೆಳಗಾಂ, ಹುಬ್ಬಳ್ಳಿ, ಗುಲ್ಬರ್ಗಾ, ಮೈಸೂರು, ಬೆಂಗಳೂರು ಗ್ರಾಮಾಂತರ. ಪ್ರಾದೇಶಿಕ ವ್ಯವಸ್ಥಾಪಕರವರಿಗೆ, ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

ಯಥಾಪ್ರತಿಯನ್ನು : ಬಾಗಲಕೋಟೆ, ಬಿಜಾಪುರ ವಿಭಾಗ ನಿಯಂತ್ರಣಾಧಿಕಾರಿಯವರಿಗೆ ರವಾನಿಸುತ್ತಾ, ಯಿಂದ ಕೂಡಲ ಸಂಗಮಕ್ಕೆ ಸಾರಿಗೆ ಒತ್ತಡವನ್ನು ಪೂರೈಸುವ ಬಗ್ಗೆಯೂ ಗಮನ ನೀಡಲು ಮತ್ತು ಅವರ ವಿಭಾಗದ ವ್ಯಾಪ್ತಿಯಲ್ಲಿನ ಮುಖ್ಯ ಸ್ಥಳಗಳಿಂದ "ಶರಣ ಮೇಳ ಉತ್ಸವ"ಕ್ಕೆ ಒತ್ತಡಕ್ಕೆ ಅನುಗುಣವಾಗಿ ಹೆಚ್ಚುವರಿ ಬಸ್ಸುಗಳ ಸೌಕರ್ಯವನ್ನು ಒದಗಿಸಿ, ದೂರು ಪ್ರವಾಸಿಗರಿಗೆ ಅನುಕೂಲವಾಗುವಂತೆ ಈ ಅವಧಿಯಲ್ಲಿ ಎಲ್ಲಾ ಬಸ್ಸುಗಳಿಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ಕೋರಿಕೆ ನಿಲುಗಡೆ ಒದಗಿಸಲು ಕೋರಲಾಗಿದೆ. ಹಾಗೂ ಕೂಡಲಸಂಗಮ ಅಡ್ಡ ರಸ್ತೆಗಳಿಗೆ ಅಪಕಾಶವಾಗದಂತೆ ನೋಡಿಕೊಳ್ಳಲು ಕೋರಲಾಗಿದೆ.

ಯಥಾಪ್ರತಿಯನ್ನು : ಬೆಂಗಳೂರು (ಕೇಂದ್ರ) ಬೆಂಗಳೂರು ಗ್ರಾಮಾಂತರ, ಕೋಲಾರ, ಮೈಸೂರು, ಬೆಳಗಾಂ, ಹಾಸನ, ಮಂಗಳೂರು, ಉತ್ತರ ಕನ್ನಡ(ಶಿರ್ಶಿ) ಗದಗ, ದಾವಣಗೆರೆ, ಹುಬ್ಬಳ್ಳಿ, ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ ವಿಭಾಗ ನಿಯಂತ್ರಣಾಧಿಕಾರಿಯವರಿಗೆ ರವಾನಿಸುತ್ತಾ ಶರಣಮೇಳ ಉತ್ಸವದ ಅವಧಿಯಲ್ಲಿ ಅವರ ಕಾರ್ಯಾಚರಣೆ ವ್ಯಾಪ್ತಿಯಿಂದ ಕೂಡಲ ಸಂಗಮಕ್ಕೆ ಸಾರಿಗೆ ಒತ್ತಡ ಕಂಡು ಬಂದಲ್ಲಿ ಹೆಚ್ಚುವರಿ ಸಂಖ್ಯೆ 13 ರಲ್ಲಿ ಸಂಚರಿಸುವ ಎಲ್ಲಾ ವಿಭಾಗದ ಬಸ್ಸುಗಳಿಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ಕೋರಿಕೆ ನಿಲುಗಡೆ ಕೊಡಲು ಕೋರಲಾಗಿದೆ.

ಎಂ. ಆರ್. ಮೃತ್ಯುಂಜಯಸ್ವಾಮಿ
ಮುಖ್ಯ ಸಂಚಾರ ವ್ಯವಸ್ಥಾಪಕರು

ಕೇಂದ್ರ ಕಛೇರಿಯ ಸಹಾಯಕ ಸಂಚಾಲನಾ ಅಧೀಕ್ಷಕರು, ಇವರ ಮಾಹಿತಿಗಾಗಿ.

ಬಲಿಷ್ಠ ಕರ್ನಾಟಕಕ್ಕೆ ಭದ್ರ ಬುನಾದಿ

"ರಾಜ್ಯೋತ್ಸವ ದಿನಾಚರಣೆ" ಹಳೆಯ ಮೈಸೂರು ರಾಜ್ಯ ಕರ್ನಾಟಕ ಎಂದು ನಾಮಾಂಕಿತಗೊಂಡು, ಅಪಾರ ಪ್ರಗತಿಯನ್ನು ಪ್ರತಿಬಿಂಬಿಸುವ ಸುದಿನ. ಶತಮಾನಗಳಿಂದ ಅನೇಕ ಧರ್ಮಗಳು ಮತ್ತು ವಿಭಿನ್ನ ಸಂಸ್ಕೃತಿಗಳಿಗೆ ಆಸರೆ ನೀಡಿರುವ ನಾಡಿದು, ಕಲೆಯ ಬೀಡು.

ಈ ಸುಂದರನಾಡಿನ ನವನಿರ್ಮಾಣಕ್ಕೆ ಪ್ರೇರಣೆ ನೀಡಿದ್ದ ಆದರ್ಶಗಳನ್ನು ನೆನಪಿಸಿಕೊಂಡು ಪರಿಪಾಲಿಸುವ ಪಣವನ್ನು ನಾವೆಲ್ಲರೂ ಸ್ವೀಕರಿಸಬೇಕಾದ ಸಮಯ ಇದಾಗಿದೆ. ನಮ್ಮ ಹಿರಿಯರ ಪರಂಪರೆಯನ್ನು ಕಾಪಾಡಿ ನಾಡಿನ ತರುಣರ ಆಶೋತ್ತರಗಳನ್ನು ಈಡೇರಿಸುವ ಸಮಯ ಮರುಕಳಿಸಿದೆ.

ಸ್ವಾತಂತ್ರ್ಯನಂತರ ಒಂದು ನವರಾಜ್ಯವಾಗಿ ಅಂಕುರಗೊಂಡ ಕರ್ನಾಟಕ ಇಂದು ಸಮೃದ್ಧವಾಗಿ ಬೆಳೆದಿದೆ. ಇಲ್ಲಿ ಪ್ರಬುದ್ಧ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಆಳವಾಗಿ ಬೇರೂರಿ ಶ್ರೀಸಾಮಾನ್ಯನಿಗೆ ಅಧಿಕಾರದ ಫಲವನ್ನು ದಕ್ಕಿಸಿಕೊಟ್ಟಿದೆ. ಸ್ವಚ್ಛ ಮತ್ತು ಮುಚ್ಚು ಮರೆಯಿಲ್ಲದ ಆಡಳಿತವನ್ನು ಒದಗಿಸಿ ಜನರ ನಂಬಿಕೆಗಳಿಗೆ ಇಂಬು ನೀಡಿದೆ. ಆಡಳಿತದಲ್ಲಿ ದಕ್ಷತೆ ಮತ್ತು ನಿಸ್ಪೃಹ ಸೇವೆಯನ್ನು ತಂದಿದೆ.

ಬನ್ನಿರಿ ರಾಜ್ಯೋತ್ಸವ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ಬಲಿಷ್ಠ ಮತ್ತು ಸಂಘಟಿತ ಕರ್ನಾಟಕದ ನಿರ್ಮಾಣಕ್ಕಾಗಿ ಬದ್ಧರಾಗೋಣ.

1993–94 ನೇ ಸಾಲಿಗಾಗಿ ಆಯೋಜನಾ ಗಾತ್ರವನ್ನು 3025 ಕೋಟಿ ರೂ. ಗಳಿಗೆ ಹೆಚ್ಚಿಸಲಾಗಿದ್ದು, ಇದು ಕಳೆದ ವರ್ಷದ ಬಂಡವಾಳಕ್ಕಿಂತ ಶೇಕಡಾ 58 ರಷ್ಟು ಹೆಚ್ಚಾಗಿದೆ.

1. ಮುಂದಿನ 4 ವರ್ಷಗಳಲ್ಲಿ ವಿದ್ಯುತ್ ಕ್ಷೇತ್ರಕ್ಕಾಗಿ 16 ಸಾವಿರ ಕೋಟಿ ರೂ.ಗಳ ಪ್ರಾರಂಭಿತ ಬಂಡವಾಳ 3000 ಮೆಗಾವಾಟ್‌ಗಳ ಪ್ರಸ್ತುತ ಸ್ಥಾಪಿತ ಸಾಮರ್ಥ್ಯವನ್ನು 7000ಮೆಗಾ–ವಾಟ್‌ಗಳಿಗೆ ಹೆಚ್ಚಿಸುವ ಕ್ರಮ.
2. ಅರ್ಥವ್ಯವಸ್ಥೆಯನ್ನು ವೈವಿಧ್ಯಗೊಳಿಸಿ, ಕೃಷಿಕರಿಗೆ ಇತರ ಕ್ಷೇತ್ರಗಳಲ್ಲಿ ಕಸಬುಗಾಗಿ ಪ್ರೋತ್ಸಾಹ.
3. ಕೈಗಾರಿಕಾ ಬಂಡವಾಳಕ್ಕೆ ಪೂರಕವಾದ ಕೈಗಾರಿಕಾ ಧೋರಣೆ ಮತ್ತು ಪ್ರೋತ್ಸಾಹಕ ಕ್ರಮಗಳು.
4. ಕೈಗಾರಿಕಾ ಕ್ಷೇತ್ರದಲ್ಲಿ ಈಗಾಗಲೇ 24 ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದು. ಶತಮಾನದ ಅಂತ್ಯದ ವೇಳೆಗೆ ಇದು 60 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಲಿದೆ. 26 ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗಾವಕಾಶಗಳು.
5. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕಾಗಿ ಪಂಚಾಯಿತರಾಜ್ ಶಾಸನವನ್ನು ಅನುಷ್ಠಾನಕ್ಕೆ ತಂದು ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ.
6. ಆಶ್ರಯ ಯೋಜನೆಯನ್ವಯ ಡಿಸೆಂಬರ್ 93 ರ ಅಂತ್ಯದ ಒಳಗೆ 50 ಸಾವಿರ ಮನೆಗಳ ನಿರ್ಮಾಣ. ಮುಂದಿನ 7 ವರ್ಷಗಳಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಬೃಹತ್ ಗೃಹ ನಿರ್ಮಾಣ ಯೋಜನೆ.
7. 2 ಸಾವಿರ ಇಸವಿಯ ವೇಳೆಗೆ ಪ್ರತಿ ತರಗತಿಗೆ ಒಬ್ಬ ಶಿಕ್ಷಕರನ್ನು ನೇಮಿಸುವ ಕಾರ್ಯಕ್ರಮ.
8. 1993 ನೇಯ ವರ್ಷವನ್ನು ಕನ್ನಡ ಜಾಗೃತಿ ವರ್ಷವಾಗಿ ಘೋಷಿಸಿ ಅಧಿಕಾರಮಟ್ಟದಲ್ಲಿ ಕನ್ನಡಕ್ಕೆ ಆದ್ಯತೆ.
9. ಮುಂದಿನ 2 ವರ್ಷಗಳಲ್ಲಿ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆಯ ಸಾಧನೆ.

— ಒಗ್ಗೂಡಿ ಬೆಳೆಸೋಣ —

—ಕರ್ನಾಟಕ ವಾರ್ತೆ

ಶರಣರ ಬೀಡು ಬಂದು ನೋಡು

ಧರ್ಮ ಕ್ಷೇತ್ರ ಸಂಗಮ । ಕೂಡಲ ಸಂಗಮ
ಬಸವ ಬಯಲಾದ ಸಂಗಮ । ಅನುಪಮ
ಬಸವಣ್ಣನ ಐಕ್ಯಕ್ಷೇತ್ರ ಸಂಗಮ ॥ಪ॥

ವನದೈಸಿರಿಯ ಮಡಿಲಲ್ಲಿ । ಬಸವ ಸಾಗರ ಸಮೀಪದಲ್ಲಿ
ಕೃಷ್ಣೆ ಮಲಾಪಹಾರಿ ಕೂಡಿಹರಿಲ್ಲಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ॥೧॥

ಬಸವಣ್ಣನೇ ಧರ್ಮಗುರು । ಇಷ್ಟಲಿಂಗ ದೇವನ ಕುರುಹು
ವಚನ ಸಾಹಿತ್ಯವೇ ಧರ್ಮ ಸಂಹಿತೆಯು
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ॥೨॥

ಮಹಾಮನೆ ಮಹಾಮಠದಲ್ಲಿ । ಶರಣ ಮೇಳ ನಡೆದಿಹುದಿಲ್ಲಿ
ಬಸವನ ಭಕ್ತರು ಬಂದು ನೆರೆದಿಹರಿಲ್ಲಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ॥೩॥

ಜಗದ್ಗುರು ಮಾತೆ ಮಹಾದೇವಿ । ಜಗದ್ಗುರು ಲಿಂಗಾನಂದ ಸ್ವಾಮಿ
ಬಸವ ತತ್ತ್ವ ಬೆಳಗಿಸುತಿರುವ ದಿವ್ಯ ಜ್ಯೋತಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ॥೪॥

ಕನ್ನಡಮ್ಮನ ಹಿರಿಮೆ । ಭಾರತಾಂಬೆಯ ಹೆಮ್ಮೆ
ಕಂಡು ಬೆರಗಾದೆವು ಪೂಜ್ಯ ದ್ವಯರ ಜಾಣ್ಮೆ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ॥೫॥

ಕಲ್ಯಾಣ ರಾಜ್ಯ ಕಟ್ಟುವೆವೆಂದು ಬಸವ ಧರ್ಮ ಬೆಳೆಸುವೆವೆಂದು
ಬಸವ ದಳ ವೀರರೇ ಪಣವ ತೊಡಬೇಕೆಂದು
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ॥೬॥

ಧರ್ಮ ಕ್ಷೇತ್ರ ಸಂಗಮ । ಕೂಡಲ ಸಂಗಮ
ಬಸವ ಬಯಲಾದ ಕ್ಷೇತ್ರ ಸಂಗಮ । ಅನುಪಮ
ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ

೧೪-೧-೧೯೯೩ ರಚನೆ—ಸೌ. ಶಶಿಕಲಾತಾಯಿ ಮಡಕಿ



೧೩. ನಿನಗಾಗಿ ಬಾಳಿಸು

ಆಗಬೇಕಾದ ಕೆಲಸ ಒಂದಲ್ಲ ಎರಡಲ್ಲ
ಮಾಡಬೇಕಾದ ಮಾಟ ಮೂರಲ್ಲ ನಾಲ್ಕಲ್ಲ
ಅನೇಕ ಅಗಣಿತ ಅಪರಿಮಿತ ಅನುಪಮ
ಆಗಸದೊಲು ಅನಂತ, ಶಕ್ತಿ ಮಾತ್ರ ಸೀಮಿತ
ಆರೋಗ್ಯವನು ಕೊಡು ತಂದೆ ಎಮಗೆ
ನಮಗಾಗಿ ಅಲ್ಲ ನಿನ್ನ ಮತ್ತು ನಾಡ ಕೆಲಸಕ್ಕಾಗಿ !

ಆಯುಷ್ಯವನು ಕೊಡು ತಂದೆ ಎಮಗೆ
ನಮ್ಮ ಸುಖಕಲ್ಲ, ನಿನ್ನ ವಚನಾಮೃತ ಸೂರೆಗೆ !
ಐಶ್ವರ್ಯವನು ಕೊಡು ತಂದೆ ತೊಟ್ಟು ಮೆರೆಯಲಿಕ್ಕಲ್ಲ
ನೀನಿತ್ತ ತತ್ತ್ವದ ಬೀಜಗಳ ಜನಮನದಿ ಬಿತ್ತಲಿಕೆ !
ಶಕ್ತಿಯನು ಕೊಡು ತಂದೆ, ಅನ್ಯರ ಚಾರಿತ್ರ್ಯ ವಧೆಗಲ್ಲ
ನೀನಂದು ಹೊತ್ತಿಸಿದ ತತ್ತ್ವದ ಹಣತೆಯ ನಿತ್ಯ ಉರಿಸಲಿಕೆ !

ನೀನಂದು ಎಳೆದ ತೇರನು ಶಿವಗುರಿಗೆ ಒಯ್ಯಲಿಕೆ.
ನೀನಂದು ಕಟ್ಟಿ ತೋರಿದ ಕಲ್ಯಾಣ ರಾಜ್ಯದ
ಪಡಿಯಚ್ಚ ಜನದ ನಾತಿಯೊಳು ಅಚ್ಚಿಸಲಿಕೆ !
ನೀನಿತ್ತ ಮೂಲ ಧನವ ನಿನ್ನ ಹೆಸರಲಿ ವ್ಯವಹಾರ ಮಾಡಿ
ಬಂದ ಲಾಭವನೆಲ್ಲ, ಮೀಸಲಳಿಯದ ತೆರದಿ
ನಿನ್ನಡಿಗೆ ಅರ್ಪಿಸುವೆವು !

ಈ ನುಡಿಗೆ ತಪ್ಪಿದಡೆ ತಲೆದಂಡ ತಲೆದೂಡ
ಒಡೆಯನವಸರಕೆ ಕುದಿವೆವು ನಾವಲ್ಲದೆ
ಒಡಲಿನವಸರಕೆ ಕುದಿವವರು ನಾವಲ್ಲ !

ಕೀರ್ತಿವಾರ್ತೆಯು ಬೇಡ, ಸ್ಥಾನ–ಸನ್ಮಾನ ಬೇಡ
ಸದ್ದಿಲ್ಲದೆ ಅರಳಿ, ಸೌರಭಿಸಿ, ಶಿವನಡಿಯ ಬೆರೆಯುವ
ಸುಮದೊಲು ಮುದ್ದಾಗಿ ಅರಳಿ ನಿನ್ನಡಿಯಲಿ ಬೆರೆಯಲಿ
ಸಚ್ಚಿದಾನಂದ ಕಂದ ತಂದೆ ಬಸವೇಶಾ, ಎಮ್ಮ ಬಾಳು !

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ


ರಾಷ್ಟ್ರೀಯ ಬಸವ ದಳಗಳವರಿಂದ

ಗುರು ವಂದನ ಮತ್ತು ಪಥ ಸಂಚಲನ ಬಸವ ಕ್ರಾಂತಿ ದಿನದಂದು ದಿನಾಂಕ 14-1-1993 ಬೆಳಿಗ್ಗೆ ಧ್ವಜವಂದನ ಮತ್ತು ಪಥ ಸಂಚಲನ ಕಾರ್ಯಕ್ರಮವಿರುತ್ತದೆ. ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಧ್ವಜಾರೋಹಣ ನಂತರ ಬಸವ ಜ್ಯೋತಿಯ ಉದ್ದೀಪನವನ್ನು ಮಾಡಲಿದ್ದಾರೆ. ಬಸವ ಜ್ಯೋತಿ ದರ್ಶನದ ನಂತರ ಗುರುವಂದನ ಕಾರ್ಯಕ್ರಮವಿರುತ್ತದೆ. ಇದು ಶಿಸ್ತು ಮತ್ತು ಸಂಘಟನೆಗಳನ್ನು ಪ್ರದರ್ಶಿಸುವ ಮಹತ್ವದ ಸ್ಫೂರ್ತಿದಾಯಕ ಕಾರ್ಯಕ್ರಮ ಆದ್ದರಿಂದ ಎಲ್ಲ ರಾಷ್ಟ್ರೀಯ ಬಸವ ದಳಗಳವರು ಸಾಲಾಗಿ ಬಿಳಿವಸ್ತ್ರವನ್ನುಟ್ಟು ಮೇಲೆ ಕಾವಿಯ ಸ್ಕಾರ್ಫ್‌ನ್ನು ಹೊದ್ದು ಈ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕು. ಪ್ರತಿ ರಾಷ್ಟ್ರೀಯ ಬಸವ ದಳದವರು ತಮ್ಮ ತಮ್ಮ ರಾಷ್ಟ್ರೀಯ ಬಸವ ದಳಗಳ ಬ್ಯಾನರ್ ಸಿದ್ಧಪಡಿಸಿಕೊಂಡು ಬರಬೇಕು. ಇದನ್ನು ಸರಿಯಾಗಿ ಕಾಯ್ದಿಟ್ಟುಕೊಂಡು ಬೇರೆ ಕಾರ್ಯಕ್ರಮಗಳಲ್ಲಿಯೂ ಉಪಯೋಗಿಸಬಹುದು. ಬ್ಯಾನರಿನಲ್ಲಿ ಬರೆಸ-ಬೇಕಾದ ವಿಷಯ ವಿವರ, ಹೀಗಿದೆ.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥



ರಾಷ್ಟ್ರೀಯ ಬಸವ ದಳ,
ಶಿವಮೊಗ್ಗ.
ಶರಣ ಮೇಳಕ್ಕೆ ಜಯವಾಗಲಿ



ಒಳ್ಳೆಯ ಕಲಾವಿದರು ಇದ್ದರೆ ಬಸವಣ್ಣನವರ ಭಾವಚಿತ್ರ ಒಂದು ಬದಿಗೆ, ಬಸವೇ-ಶ್ವರ ಐಕ್ಯಮಂಟಪ ಇನ್ನೊಂದು ಬದಿಗೆ ಬರೆಸಬಹುದು. ಅಂಥ ಒಳ್ಳೆಯ ಕಲಾವಿದರು ಸಿಕ್ಕದೆ ಇದ್ದರೆ ಕೇವಲ ಅಕ್ಷರಗಳನ್ನು ಬಟ್ಟೆಯ ಬ್ಯಾನರಿನಲ್ಲಿ ಬರೆಸಿದರೂ ಸಾಕು.


ಪಥ ಸಂಚಲನದಲ್ಲಿ ಭಾಗವಹಿಸುವ ರಾಷ್ಟ್ರೀಯ ಬಸವ ದಳಗಳವರು ದಿನಾಂಕ 12 ಮತ್ತು 13 ರಂದು ನಮ್ಮ ಬಳಿ ಹೆಸರನ್ನು ಬರೆಸಿ ವಿವರಗಳನ್ನು ಪಡೆದುಕೊಳ್ಳಬೇಕು. ಯಾವುದೇ ಸಂಕೋಚವಿಲ್ಲದೆ ದೊಡ್ಡವರು–ಸಣ್ಣವರು ಎಲ್ಲರೂ ಸಹೋದರ ಭಾವನೆಯಿಂದ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುವೆವು.

ಸ್ವಯಂ ಸೇವಕರ ಸೇವೆ

ಧರ್ಮಗುರುವಿನ ಸೇವೆಯನ್ನು ತನು-ಮನ-ಧನಗಳಿಂದ ಮಾಡಬೇಕಾದುದು ಅತ್ಯಂತ ಅಗತ್ಯ. ಅದ್ದರಿಂದ ತನು ದಾಸೋಹ ಮಾಡಲು ರಾಷ್ಟ್ರೀಯ ಬಸವ ದಳಗಳವರು ಹೆಚ್ಚು ಹೆಚ್ಚು ಸ್ವಯಂಸೇವಕರನ್ನು ಕಳಿಸುವುದು ಅಗತ್ಯವಿದೆ. ಈಗಾಗಲೇ ಶರಣ ಮೇಳದ ಅಚ್ಚುಕಟ್ಟು ಒಳ್ಳೆಯ ಹೆಸರು ಪಡೆಯಲು ನಿಸ್ವಾರ್ಥಿಗಳಾದ ತನು ದಾಸೋಹಿಗಳ 'ಕಾಯಸೇವೆ'ಯೇ ಕಾರಣ. ಅದ್ದರಿಂದ ಹೆಚ್ಚುಹೆಚ್ಚು ಕಾರ್ಯಕರ್ತರನ್ನು ಕಳಿಸಲು ರಾಷ್ಟ್ರೀಯ ಬಸವ ದಳದವರು ಸಿದ್ಧತೆ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಡಿ. ಎಸ್. ವಿಜಯಕುಮಾರ್ **ಬಸವಕುಮಾರ್ ಪಾಟೀಲ**

ಕಲ್ಯಾಣ ಕಿರಣ KRNB 312 / BGW 92 Dec. 1993



ಬಸವ ಧರ್ಮದ ಮಹಾಜಗದ್ಗುರು ಪೀಠ,
ಕೂಡಲ ಸಂಗಮ